ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್.ಪದವಿಯ
ಸಂಪ್ರಬಂಧ

ಅಧ್ಯಯನದ ವಿಷಯ

"ಕನ್ನಡ ಸಂಶೋಧನ ಗ್ರಂಥಗಳು-ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿ
ವರದರಾಜು.ಎಸ್.ಡಿ.

ಮಾರ್ಗದರ್ಶಕರು
ಪ್ರೊ.ಕೆ.ಎಸ್.ಮಧುಸೂದನ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು.

2008

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್.ಪದವಿಯ
ಸಂಪ್ರಬಂಧ

ಅಧ್ಯಯನದ ವಿಷಯ

“ಕನ್ನಡ ಸಂಶೋಧನ ಗ್ರಂಥಗಳು–ಒಂದು ಅಧ್ಯಯನ”

ಸಂಶೋಧನ ವಿದ್ಯಾರ್ಥಿ
ವರದರಾಜು.ಎಸ್.ಡಿ.

ಮಾರ್ಗದರ್ಶಕರು
ಪ್ರೊ.ಕೆ.ಎಸ್.ಮಧುಸೂದನ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು.
2008

<u>**ಅಭ್ಯರ್ಥಿಯ ಪ್ರಮಾಣಪತ್ರ**</u>

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007–2008ನೇ ಸಾಲಿನ ಎಂ.ಫಿಲ್.ಪದವಿಗಾಗಿ **“ಕನ್ನಡ ಸಂಶೋಧನ ಗ್ರಂಥಗಳು–ಒಂದು ಅಧ್ಯಯನ”** ಎಂಬ ಸಂಪ್ರಬಂಧವನ್ನು **ಪ್ರೊ:ಕೆ.ಎಸ್.ಮಧುಸೂದನ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ;– 21-11-08

ಸ್ಥಳ : ಬೆಂಗಳೂರು.

ಸಹಿ/

(ವರದರಾಜು.ಎಸ್.ಡಿ.)

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007–2008ನೇ ಸಾಲಿನ ಎಂ.ಫಿಲ್.ಪದವಿಗಾಗಿ **"ಕನ್ನಡ ಸಂಶೋಧನ ಗ್ರಂಥಗಳು – ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು **ವರದರಾಜು.ಎಸ್.ಡಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ;– 21-11-08

ಸ್ಥಳ : ಬೆಂಗಳೂರು

ಸಹಿ/

(ಪ್ರೊ.ಕೆ.ಎಸ್.ಮಧುಸೂದನ)

ಪರಿವಿಡಿ

ಅಧ್ಯಾಯ: 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1.1.ಸ್ವರೂಪ ಮತ್ತು ಮಹತ್ವ

ಅಧ್ಯಾಯ – 1

ಉದ್ದೇಶ ಮತ್ತು ವ್ಯಾಪ್ತಿ

ಮಾನವನ ಪೂರ್ತಿಯಾದ ಚಿತ್ರಣ ಭೂಮಿಯ ಮೇಲೆ ಕಾಣಿಸಿಕೊಂಡ ನಂತರ ತನ್ನ ಜೀವನದ ಬದುಕಿಗಾಗಿ ಕಾಡು ಮೇಡುಗಳಲ್ಲಿ ಅಲೆಯುತ್ತಾ ಹಸಿವು ಬಾಯಾರಿಕೆಗಾಗಿ, ಆಹಾರ ನೀರು ಕಂಡುಕೊಂಡನು. ಸಿಹಿ, ಕಹಿ, ಹುಳಿಯ ಸವಿರುಚಿಯನ್ನು ಸವಿದು, ತಿನ್ನುವ ಮತ್ತು ತಿನ್ನದೆ ಇರುವ ಪದಾರ್ಥಗಳನ್ನು ಪತ್ತೆ ಹಚ್ಚಿದನು, ಬೆಂಕಿಯನ್ನು ಕಂಡು ಹಿಡಿದು, ಹಸಿಯಾಗಿ ಉಪಯೋಗಿಸುವುದಕ್ಕೆ ಬದಲಾಗಿ ಬೇಯಿಸಿಕೊಂಡು ತಿನ್ನುವ ಹಂತಕ್ಕೆ ಬಂದನು. ಇದೆಲ್ಲವು ಮನುಷ್ಯನ ಬುದ್ಧಿಶಕ್ತಿಯ ಮತ್ತು ಹೊಸದನ್ನು ಹುಡುಕುವ ಕಲೆಗಾರಿಕೆ. ಮನುಷ್ಯ ಸೃಷ್ಟಿಸಿದ್ದು ಎಲ್ಲವೂ ಹೊಸದಾಗಿ ಕಂಡರೂ ಪ್ರಾಣಿ, ಪಕ್ಷಿಯ ಕೂಗನ್ನು ಅನುಕರಿಸಿ ಭಾಷೆಯನ್ನು ಕಲಿತನು. ಸಂಜ್ಞೆ, ಸಂಕೇತ, ಚಿತ್ರ, ಚಿಹ್ನೆಗಳ ಮೂಲಕ ಲಿಪಿಗಳನ್ನು ಕಂಡು ಹಿಡಿದು ನೂರಾರು ಭಾಷೆಗಳ ಹುಟ್ಟುವಿಕೆಗೆ ಕಾರಣನಾದನು.

ಪ್ರಕೃತಿಯಿಂದ ನಿರ್ಮಾಣವಾದ ಸೃಜನಾತ್ಮಕ ಬೆಳವಣಿಗೆಯನ್ನು ಮನುಷ್ಯ ಸೃಜನೇತರ ಬೆಳವಣಿಗೆಯಾಗಿ ನಿರ್ಮಿಸಿಕೊಂಡು, ಇರುವ ವಸ್ತುವಿನಲ್ಲಿ ಇಲ್ಲದ ವಸ್ತುವನ್ನು ಸೃಷ್ಟಿಸಿಕೊಂಡನು. ವಸ್ತ್ರ ವೈಢೂರ್ಯ, ಆಳು, ಅರಸನೆಂಬಂತೆ ಸಾಮಾಜಿಕ ಜೀವನ ನಡೆಸಿ ಹಳ್ಳಿಯಿಂದ ನಗರದವರೆಗೆ ದಾರಿ ಸಾಗಿದ್ದು ಮನುಷ್ಯ ಸಂಶೋಧನೆಯ ಹೊಸ ಅಧ್ಯಾಯವೇ ಆಗಿದೆ. ಸಂಶೋಧನೆಯೆನ್ನುವುದು ಯಾವ ಕ್ಷೇತ್ರದಲ್ಲೇ ಆಗಲಿ ಅದು ಜ್ಞಾನದ ಬುತ್ತಿಯಾಗಿರುತ್ತದೆ. "ಭೌತ ವಿಜ್ಞಾನವು, ಭೂವಿಜ್ಞಾನವು, ಸಾಹಿತ್ಯವೋ, ತತ್ವಶಾಸ್ತ್ರವೋ, ಚರಿತ್ರೆಯೋ, ಭೂಗೋಳವೋ, ಸಾಮಾಜಶಾಸ್ತ್ರವೋ, ಭಾಷಾಶಾಸ್ತ್ರವೋ ಯಾವುದೇ ಆಗಲಿ ಅದು ಸತ್ಯಾನ್ವೇಷಣೆಯ ಫಲ."[1] ಎಂದು ದೇ. ಜವರೇಗೌಡರು ಸಂಶೋಧನೆ ಪುಸ್ತಕದ ಮುನ್ನುಡಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಸಂಶೋಧನೆ ಸತ್ಯಾನ್ವೇಷಣೆಯ ಫಲವಾದರೆ ಗ್ರಂಥ ಅದನ್ನು ಕೂಡಿಡುವ ಕಣಜವಾಗಿರುತ್ತದೆ ಎಂದು ಹೇಳಬಹುದು.

ಕನ್ನಡ ನಾಡಿನ ಮೇಲೆ ಬೆಳಕು ಚೆಲ್ಲುವ ಉದ್ದೇಶದಿಂದ ಅನೇಕ ರಾಜ ಮಹಾರಾಜರುಗಳ ಆಳ್ವಿಕೆಗಳೊಂದಿಗೆ ಸೃಷ್ಟಿಗೊಂಡ ಹೊಸ ಅಧ್ಯಯನ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕ ಅಂಶಗಳೆಂಬಂತೆ ವಿಂಗಡಿಸಿ ಅನೇಕ ಸಂಶೋಧನೆಗಳ ಸತ್ಯವನ್ನು ಕಂಡು ಹಿಡಿಯಲು ಅಧ್ಯಯನ ಮಾಡಲಾಯಿತು. ಕಾಲ ಚಕ್ರ ಉರುಳಿದಂತೆಲ್ಲಾ ಹಳೆಯದೆಲ್ಲವು ಮರೆಮಾಚಿ ಹೊಸದೆಲ್ಲವು ಸೃಷ್ಟಿಗೊಂಡು ನವವೈಜ್ಞಾನಿಕ ಯುಗ ನಿರ್ಮಾಣಗೊಂಡಿದ್ದು ಸಂಶೋಧನೆಯಿಂದಲೇ ಮರೆಮಾಚಿರುವುದನ್ನು ತೆಗೆದು ಅದು ಹೀಗೆ ಇತ್ತು ಎಂದು ತೋರಿಸುವುದು ಇತಿಹಾಸವಾದರೆ ಅದನ್ನು ಹೊರತೆಗೆಯುವ ಸಾಧನವೇ ಸಂಶೋಧನೆ.

---

1. ಡಾ. ಎಂ,ಚಿದಾನಂದಮೂರ್ತಿ – ಸಂಶೋಧನೆ – ಮುನ್ನುಡಿ.

ಲಿಪಿಗಳಿನ್ನೂ ಸರಿಯಾಗಿ ನೆಲೆನಿಲ್ಲದೆ ಇದ್ದ ಸಂದರ್ಭದಲ್ಲಿ ವಿವಿಧ ರೀತಿಯ ಭಾಷೆಗಳನ್ನು (ಬ್ರಾಹ್ಮೀ, ಸಿಂಧೂ, ಖರೋಷ್ಟಿ) ಬಳಸಿ ರಾಜ, ರಾಣಿಯನ್ನೋ, ಅಲ್ಲಿನ ಸಾಂಸ್ಕೃತಿಕ ಪರಂಪರೆಯನ್ನೋ, ಕಲ್ಲುಗಳ ಮೇಲೆ, ತಾಳೆಗರಿಗಳ ಮೇಲೆ, ಗೀಚಿ ಹಾಕಿದ್ದನ್ನು ಮತ್ತು ಅಂದಿನ ಕಾಲದ ರಾಮಾಯಣ, ಮಹಾಭಾರತದಂತಹ ಕಾವ್ಯಗಳಿಗೆ ಅಲ್ಲಿನ ಅರಸರುಗಳನ್ನು ಕಾವ್ಯದ ನಾಯಕರಿಗೆ ಹೋಲಿಕೆ ಮಾಡಿ ಹೊಗಳುತ್ತಿದ್ದ ಪಾಂಡಿತ್ಯವನ್ನು ಕೈ ಬರವಣಿಗೆ ಮೂಲಕ ರಚನೆಮಾಡಲಾಗಿತ್ತು. ಈ ಸಂದರ್ಭದಲ್ಲಿ ರಚನೆಯಾದ ಎಷ್ಟೋ ಸಾಹಿತ್ಯಗಳು ಇಂದು ಮರೆಮಾಚಿವೆ. ಅಲ್ಪ ಸ್ವಲ್ಪ ಸಿಕ್ಕ ಪುರಾವೆಗಳು ಮಾತ್ರ ಕನ್ನಡ ನಾಡಿನ ಚರಿತ್ರೆಯನ್ನು ಎತ್ತಿಹಿಡಿದಿವೆ. ಇಂತಹ ಯಾವುದೇ ಚರಿತ್ರೆಯನ್ನು ಸರಳವಾಗಿ, ಸುಲಭವಾಗಿ ತಿಳಿಸಿ ಕೊಡುವಂತವು ಸಂಶೋಧನ ಗ್ರಂಥಗಳು. ಪುಟ ಪುಟಗಳಲ್ಲೂ ವಿಶಿಷ್ಟ ವಿಷಯಗಳನ್ನು ಒಳಗೊಂಡು ರಚನೆಯಾಗುವುದಕ್ಕೆ ಗ್ರಂಥ ಎಂದು ಕರೆದರು. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಗ್ರಂಥಗಳನ್ನು ರಚನೆ ಮಾಡಿದ್ದು.

ವಿದ್ವಾಂಸರ, ಲೇಖಕರ, ಒಟ್ಟು ಸಂಪಾದನೆಗಳನ್ನು ಕುರಿತು ಗ್ರಂಥಗಳಾಗಿಯೂ ಸಹ ಪ್ರಕಟಿಸಲಾಗುತ್ತಿದೆ. ಸಂಶೋಧನೆ ಎನ್ನುವ ಪದ ಅನೇಕ ವಿಸ್ತಾರವನ್ನು ಒಳಗೊಂಡಿದ್ದು ಸತ್ಯವನ್ನು ಶೋಧಿಸಿ ಬರಹವನ್ನು ತುಂಬುವ ಕಣಜವಾಗಿದೆ. ಪ್ರಾಚೀನ ಪರಂಪರೆಯ ದಿಕ್ಕು ಬದಲಾಗಿ ತಿರುಗಿದ ಕಾಲಚಕ್ರದಡಿ ಆಧುನಿಕ ಯುಗಕ್ಕೆ ಬಂದು ಸಂಶೋಧನೆ ಮುಂದುವರೆಯುತ್ತಿದೆ ಎಂದು ಹೇಳಬಹುದು. ಮನುಷ್ಯ ಸುಮ್ಮನೆ ಕೂರದೆ ಏನನ್ನಾದರೂ ಹುಡುಕುತ್ತಲೇ ಇರುತ್ತಾನೆ. ಆದರೆ ಪ್ರಾಯೋಗಿಕವಾಗಿ ಹುಡುಕುವ ವಸ್ತುಗಳಲ್ಲಿ ಈ ನಾಡಿನ ಚರಿತ್ರೆ ಅಡಗಿದೆ. ಇದನ್ನು ಹೊರ ತೆಗೆಯುವುದೇ ಸಂಶೋಧನೆಯ ಕೆಲಸ. ಸಂಶೋಧನೆ ಎನ್ನುವುದು ಎಲ್ಲಾ ವ್ಯಕ್ತಿಗಳು ಕೈಗೊಳ್ಳುವಂತಹ ಕಾರ್ಯವಲ್ಲ. ಅದಕ್ಕೆ ಅದರದ್ದೇ ಆದಂತಹ ಕೆಲವು ಗುಣ ಲಕ್ಷಣಗಳು ಕಂಡುಬರುತ್ತವೆ. ಹಾಗೆಯೇ ಸಂಶೋಧಕನಿಗೂ ಹಲವು ಮೀಸಲಾದ ಅರ್ಹತೆಗಳಿರುವುದನ್ನು ಗಮನಿಸಬಹುದು.

ಸಂಶೋಧನೆ ಎನ್ನುವುದು ಇಂದು ನೆನ್ನೆಯದಲ್ಲ, ಮನುಷ್ಯ ನಿಜವಾದ ಮನುಷ್ಯ ಜನ್ಮ ಪಡೆಯುವ ಮುಂಚಿತವಾದ ಎಷ್ಟೋ ಅವತಾರಗಳನ್ನು ಪಡೆದಿದ್ದನೆಂದು ಸಿಕ್ಕ ಆಧಾರಗಳ ಮೇರೆಗೆ ಪುರಾಣ ಇತಿಹಾಸ ಸಂಶೋಧನೆಗಳನ್ನು ಮಾಡಲಾಗಿದೆ. ಪ್ರಾಣಿ ಸಂಕುಲಗಳ ಎಷ್ಟೊ ಶತಮಾನಗಳು ಕಳೆದ ನಂತರ ಮನುಷ್ಯ ಜನ್ಮ ನಿಜ ರೂಪ ಕಂಡಿತು ಎಂದು ಹೇಳಬಹುದು ಅದನ್ನು 'ಪೂರ್ಣಚಂದ್ರ ತೇಜಸ್ವಿ'ಯವರು 'ಮಿಸ್ಸಿಂಗ್ ಲಿಂಕ್' ಸಂಶೋಧನ ಗ್ರಂಥದಲ್ಲಿ ನಿರೂಪಿಸಿದ್ದಾರೆ.

ಪಾಶ್ಚಿಮಾತ್ಯರ ಆಗಮನದೊಂದಿಗೆ ಬಂದ **SEARCH - RESEARCH** ಎನ್ನುವ ಪದ ಕನ್ನಡದಲ್ಲಿ ಶೋಧನೆ– ಸಂಶೋಧನೆ ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. ಮಣ್ಣಲ್ಲಿರುವ ಚಿನ್ನವನ್ನು ಹುಡುಕಿ ಶೋಧಿಸಿ ಸರಿಯಾಗಿ ಶುದ್ಧ ಗೊಳಿಸುವುದು ಇದರ ಗುಣ. 17–18 ನೇ ಶತಮಾನದಲ್ಲಿ ಬ್ರಿಟಿಷರು ಆಡಳಿತದ ಚುಕ್ಕಾಣಿ ಹಿಡಿದು ಆಧಿಕಾರಿಗಳಾಗಿ ಕರ್ನಾಟಕದಲ್ಲಿ ಅಧಿಕಾರ ನಡೆಸುವಾಗ ವಿವಿಧ ಊರುಗಳನ್ನು ತಿರುಗುತ್ತಾ ಬಂದರು.

ಭೂಮಿಯ ಮೇಲೆ ಸಿಗದ ವಸ್ತುಗಳ ಶೋಧನೆಯನ್ನು ಆರಂಭಿಸಿ ಅಲ್ಲಿ ಸಿಕ್ಕ ಎಷ್ಟೋ ವಸ್ತುಗಳನ್ನು ಸಂಗ್ರಹಿಸಿ ಅವುಗಳ ಮಹತ್ವವನ್ನು ತಿಳಿಸುವುದರ ಜೊತೆಗೆ ಅ ಬರಹವನ್ನು ಗ್ರಂಥಗಳ ರೂಪದಲ್ಲಿ ಮುದ್ರಿಸಿದರು. ಈ ಗ್ರಂಥಗಳ ಮಾರ್ಗದರ್ಶನದೊಂದಿಗೆ ಕನ್ನಡದ ವಿದ್ವಾಂಸರು ಕರ್ನಾಟಕವನ್ನು ಕನ್ನಡತನವನ್ನಾಗಿಸಲು ಶೋಧನೆಗೆ ತೊಡಗಿದರು. ಅವರದ್ದೇ ಆದ ಆಲೋಚನೆಯಲ್ಲಿ ಗ್ರಂಥಗಳನ್ನು ರಚಿಸಿ ಮುಂದಿನ ಪೀಳಿಗೆಗೆ ದಾರಿ ಹಾಕಿ ಕೊಟ್ಟರು. ಇಂದು ಸಂಶೋಧನೆ ಎನ್ನುವ ಪದ ವ್ಯಾಪಕಾರ್ಥಗಳನ್ನು ಪಡೆದುಕೊಂಡು ವಿಶೇಷ ಕ್ಷೇತ್ರವಾಗಿ ಬೆಳೆಯುತ್ತಿದೆ. "ಸಂಶೋಧನೆ ಎನ್ನುವುದು ಸತ್ಯವನ್ನು ಕಾಣಲು ಮಾಡುವ ಒಂದು ಪ್ರಾಮಾಣಿಕ ಪ್ರಯತ್ನ."2 ಎನ್ನುವಂತೆ, ಪ್ರತಿಯೊಬ್ಬನೂ ತನ್ನ ಗುರಿಯನ್ನು ಸಾಧಿಸಿಯೇ ಸಾಧಿಸಬೇಕೆಂದು ಮುನ್ನಡೆಯುತ್ತಾನೆ. ಕೆಲವರ ಪ್ರಯತ್ನ ಫಲವಾದರೆ ಕೆಲವರಿಗೆ ವಿಫಲವಾಗುತ್ತದೆ, ಆದರೆ ಜಿಗುಪ್ಸೆ ಹೊಂದುವಂತಿಲ್ಲ, ಮೊದಲ ಯತ್ನದ ವಿಫಲವೇ ಮುಂದಿನ ನಿಜವಾದ ದಿಟ್ಟ ಸಂಶೋಧನೆಗೆ ದಾರಿಯಾಗುತ್ತದೆ.

ಉದಾಹರಣೆಗೆ ಮ್ಯಾಗಸೆಸ್ಸ್ ಪ್ರಶಸ್ತಿ ವಿಜೇತ ಪುಖುವೋಕ ಸಸ್ಯಶಾಸ್ತ್ರ ಅಧ್ಯಯನ ನಡೆಸಿ ನಿಂಬೆಗಿಡಗಳ ಮೇಲೆ ಪ್ರಯೋಗಿಸಿದಾಗ ನಿಂಬೆಗಿಡಗಳು ಒಣಗಿಹೋದವು. ನಿರಾಶನಾಗಿ ಮತ್ತೊಂದು ಪ್ರಯತ್ನದಲ್ಲಿ ಅದೇ ಕಾಡಿನ ಹಣ್ಣು, ಹಂಪಲುಗಳನ್ನು ತಿಂದು ಹಾಕಿದ ಬೀಜಗಳಿಂದ ಮತ್ತೆ ಹಣ್ಣಿನಗಿಡಗಳನ್ನು ಬೆಳೆಯುತ್ತಾನೆ ಮತ್ತೆ ಭೂಮಿಯನ್ನು ಅಗೆಯದೆ ಕಾಡಿಗೆ ಭತ್ತದ ಬೀಜವನ್ನು ಚೆಲ್ಲಿ ಉತ್ತಮವಾದ ಬೆಳೆ ತೆಗೆಯುತ್ತಾನೆ. ಇದರ ಮೂಲಕ ಹಸಿರು ಕ್ರಾಂತಿಯನ್ನು ಉಂಟುಮಾಡಿ ವಿಜ್ಞಾನಿ ಎನಿಸಿಕೊಳ್ಳುತ್ತಾನೆ.

ಮಾನವನ ಸಂಶೋಧನೆಗಳು ಮೊದಲು ನಡೆದದ್ದು ಜೀವನಾವಶ್ಯಕ ವಸ್ತುಗಳನ್ನು ಕಂಡು ಹಿಡಿಯುವುದರ ಮೂಲಕ ಕೃಷಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ವಿವಿಧ ಬೆಳೆಗಳನ್ನು ಕಂಡುಹಿಡಿದು ನಂತರ ಹೊಸ ಗ್ರಾಮಗಳನ್ನು ಸೃಷ್ಟಿಸಿಕೊಂಡು ನಗರೀಕರಣ, ಕೈಗಾರಿಕೀಕರಣಗಳತ್ತ ಹೆಜ್ಜೆ ಹಾಕಿದ್ದು ವಿವಿಧ ಸಂಶೋಧನೆಗಳ ಹಂತಗಳಲ್ಲಿ. ಈ ರೀತಿಯ ಸಂಶೋಧನೆಯಲ್ಲಿ ತೊಡಗಿಸಿಕೊಂಡು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ನಡೆದು ಅದು ದಾಖಲಾತಿಯ ಪರಿಣತಿಯನ್ನು ಹೊಂದಿದ್ದು, ವಿದ್ಯಾರ್ಥಿಗಳಿಗೆ ಗ್ರಂಥಗಳ ರೂಪದಲ್ಲಿ ಪ್ರಕಟಿಸಿ ಅಧ್ಯಯನಕ್ಕೆ ಬಿಡಲಾಯಿತು. ಆದರೆ ವಿದ್ಯಾರ್ಥಿಗಳು ವಿಜ್ಞಾನಿಗಳ ಸಂಶೋಧನೆಯನ್ನು ಚಾಚು ತಪ್ಪದೆ ಪಾಲಿಸಿ ಅವರು ಯಾವುದಾದರೂ ಕ್ಷೇತ್ರವನ್ನು ಹಿಡಿದು ಸಂಶೋಧನೆಯನ್ನು ಕೈಗೊಂಡು ಯಶಸ್ವಿಯಾದರು. ಇದರಿಂದ ಅನೇಕ ಕ್ಷೇತ್ರಗಳ ಸಂಶೋಧನಾ ಬೆಳವಣಿಗೆ ಮುಂದುವರೆಯಿತು. ವಿದ್ಯಾರ್ಥಿಗಳಿಗೂ, ವಿಜ್ಞಾನಿಗಳಿಗೂ ಸಂಬಂಧಗಳೇರ್ಪಟ್ಟು ಸಂಶೋಧನೆಯ ಮಾರ್ಗದರ್ಶನದ ಮೂಲಕ ಗ್ರಂಥಗಳು ರಚನೆಯಾಗಿ ಸಂಶೋಧನೆಯ ಬೆಳವಣಿಗೆಗಳು ಹಾಗೆಯೇ ಮುಂದುವರೆದವು. ಅಂತಹ ಸಂಶೋಧನೆ ಮತ್ತು ಗ್ರಂಥಗಳನ್ನು ಬಿಡಿ ಬಿಡಿಯಾಗಿ ವಿವಿಧ ಕ್ಷೇತ್ರಗಳಿಗೆ ಸಂಬಂಧಗಳನ್ನು ಕಲ್ಪಿಸಿ ಗ್ರಂಥವೆಂದರೇನು? ಎಂದು ತೋರಿಸುವುದು ಮತ್ತು ಕೆಲವು ಚಾರಿತ್ರಿಕ, ಭಾಷಾತ್ಮಕ, ಸಾಮಾಜಿಕ, ಸಾಂಸ್ಕೃತಿಕ, ವಿಮರ್ಶಾತ್ಮಕ, ಶಾಸನ, ಹಸ್ತಪ್ರತಿ, ಸಾಹಿತ್ಯ ಗ್ರಂಥಗಳನ್ನು ಅಧ್ಯಯನದಲ್ಲಿ ಅಳವಡಿಸುವುದು ಇದರ ಉದ್ದೇಶವಾಗಿದೆ.

---

2. ಡಾ.ಎಂ.ಚಿದಾನಂದಮೂರ್ತಿ – ಸಂಶೋಧನೆ – ಪುಟ. 14

ಕಂ–ನಾಡು ಅನೇಕ ರಾಜಮನೆತನಗಳಿಗೆ ಹಂಚಿ ಹೋಗಿತ್ತು. ಈ ಹಂಚಿಕೆಯಿಂದ ಹಲವು ಭಾಷೆಗಳ ಪ್ರಭಾವ ಕಪ್ಪು (ಕಪ್ಪುನಾಡವರ) ಭಾಷೆಯ ಮೇಲೆ ಬಿದ್ದಾಗ, ಪಾರಂಪರಿಕವಾಗಿ ಭಾಷೆಗಳ ಪ್ರಾದೇಶಿಕ ಹಂಚಿಕೆವಾರುಗಳೊಂದಿಗೆ ವಿಂಗಡಣೆಗೊಂಡಿದ್ದ ಈ ರಾಜಮನೆತನಗಳ ಭಾಷಾ ಸಾಹಿತ್ಯದ ಹಂಚಿಕೆಯ ಪಂಡಿತ–ಪಾಮರರು, ಹುಟ್ಟುಹಾಕಿದ ಸಾಹಿತ್ಯ ಹಳಗನ್ನಡ, ನಡುಗನ್ನಡ, ಹೊಸಗನ್ನಡ ರೂಪದಲ್ಲಿ ಆಧುನಿಕ ಅಧ್ಯಯನ ಕಾಲ ಪಟಗಳಲ್ಲಿ ಹಂಚಿಕೆ ಹೊಂದಿದ್ದು ಅಧ್ಯಯನಗಳು ಕೂಡ ಇದರೊಂದಿಗೆ ಮುಂದುವರೆದಿದೆ. ಆ ಸಂದರ್ಭದಲ್ಲಿ ಸೃಷ್ಟಿಯಾದುದೆಲ್ಲವು ಹೆಚ್ಚಿನದಾಗಿ ಧರ್ಮಗಳ ಅಡಿಯಲ್ಲಿ ಜೈನ, ವೀರಶೈವ, ವೈಷ್ಣವ, ಸಂಸ್ಕೃತಿಗಳು ಕನ್ನಡ ಭಾಷೆಯನ್ನು ಪ್ರಭಾವಕ್ಕೆ ಒಳಪಡಿಸಿವೆ. ಈ ಗ್ರಂಥಗಳು ರಚನೆಯಾಗಿ ಸಂಶೋಧನೆಯು ಆ ದಿಕ್ಕನ್ನೇ ಪಡೆದು ಸಾಹಿತ್ಯದ ಮತ್ತು ಸಂಶೋಧನೆಯ ಅರಿವನ್ನು ಮೂಡಿಸಿತು. ಯಾವುದೇ ಧರ್ಮ, ಯಾವುದೇ ಕಾಲಘಟ್ಟವಾಗಿರಲಿ ಕನ್ನಡಕ್ಕೆ ಎಲ್ಲಾ ಸಂದರ್ಭವು ವಿಶೇಷವಾದ ಸಂದರ್ಭವಾಗಿದೆ.

ವಿದ್ವಾಂಸರು ಈ ನಿಟ್ಟಿನಲ್ಲಿ ಅನೇಕ ಕವಿಗಳು, ಅನೇಕ ಗ್ರಂಥಗಳು ಎಲ್ಲವು ಆಯಾ ಕಾಲಕ್ಕೆ ಹೊಂದಿಕೊಂಡಂತೆ ರಚನೆಯಾದವು. ಈ ಪ್ರಯತ್ನವೆಲ್ಲವು ಸತ್ಯದ ಅರಿವನ್ನು ತಿಳಿಯುವುದಾಗಿದೆ. ಎಷ್ಟೋ ಕವಿಗಳ ಹೆಸರು, ಕಾಲ, ದೇಶ, ಕೃತಿ ತಿಳಿಯದೆ ಇದ್ದ ಸಂದರ್ಭದಲ್ಲಿ ಅನೇಕ ಊಹೆಗಳ ಮೇರೆಗೆ ಗುರುತಿಸಲಾಗಿದೆ. ಈ ಕೃತಿ, ಗ್ರಂಥಗಳನ್ನು ಸಂಶೋಧಿಸುವ ಅಧ್ಯಯನ ನಡೆಸುವ ಸಂದರ್ಭದಲ್ಲೂ ಕೆಲವು ಕಾಲಘಟ್ಟವನ್ನು ಗುರುತಿಸಿಕೊಂಡು ಸಂಶೋಧನೆಗೆ ಒಳಪಡಿಸಲಾಗಿದೆ. "ಆರಂಭಕಾಲ–ಕ್ರಿ.ಶ 1850ರಿಂದ 1950; ಮಧ್ಯಕಾಲ_ಕ್ರಿ.ಶ 1950ರಿಂದ 1975; ಆಧುನಿಕಕಾಲ_ಕ್ರಿ.ಶ 1976ರಿಂದ 2000"3 ಎಂದು ವಿಂಗಡಿಸಿ ಸಂಶೋಧನೆಗೆ ವ್ಯಾಪ್ತಿಯನ್ನು ನೀಡಲಾಗಿದೆ. ಈ ಅಧ್ಯಯನದಲ್ಲಿ ಗ್ರಂಥಗಳ ಬೆಳವಣಿಗೆಯ ದೃಷ್ಟಿಯಿಂದ ಎರಡು ಕಾಲಘಟ್ಟವನ್ನು ಬಳಸಲಾಗಿದೆ. ನವೋದಯ ಪೂರ್ವ ಮತ್ತು ಆಧುನಿಕ ಕಾಲವನ್ನು ಸೂಚಿಸಿ ಸಂಶೋಧನೆ ಮತ್ತು ಗ್ರಂಥಗಳ ಬೆಳವಣಿಗೆ ವ್ಯಾಪ್ತಿಯನ್ನು ವಿಸ್ತರಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಎಲ್ಲಾ ಗ್ರಂಥಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಅಧ್ಯಯನಕ್ಕೆ ಪ್ರಮುಖವಾಗಿ ಬೇಕಾಗಿರುವ ಕೆಲವು ಗ್ರಂಥಗಳನ್ನು ಮಾತ್ರ ಸಂಶೋಧನೆ ಗ್ರಂಥಗಳ ಬೆಳವಣಿಗೆಗೆ ವ್ಯಾಪ್ತಿಯ ಮೂಲಕ ಪ್ರಬಂಧ ರಚಿಸಲಾಗಿದೆ.

ಕನ್ನಡ ಸಂಶೋಧನ ಗ್ರಂಥಗಳನ್ನು ಅಧ್ಯಯನ ಮಾಡುವಂತಹ ಮತ್ತು ಸಂಶೋಧನೆಗೆ ಒಳಪಡಿಸುವ ಸಂದರ್ಭದಲ್ಲಿ ಸಾಹಿತ್ಯ ಚರಿತ್ರೆಗೆ ಅನುಗುಣವಾಗಿ ವಿಂಗಡಿಸಿರುವ ಪ್ರಾಚೀನ ಸಾಹಿತ್ಯ ಸಂಶೋಧನ ಗ್ರಂಥಗಳು, ನಡುಗನ್ನಡ ಸಾಹಿತ್ಯಗ್ರಂಥಗಳು ಮತ್ತು ಹೊಸಗನ್ನಡ ಸಾಹಿತ್ಯದ ಕೃತಿಗಳನ್ನು ವಿದ್ವಾಂಸರು ಸಂಶೋಧನೆಯನ್ನು ಮಾಡಿ, ಕಾಲಘಟ್ಟಗಳನ್ನು ಗುರ್ತಿಸಿದ್ದಾರೆ. ಈ ಸಂಶೋಧನ ಅಧ್ಯಯನದಲ್ಲಿ ಸಂಸ್ಕೃತ ಗ್ರಂಥಗಳು, ಕನ್ನಡ, ಪ್ರಾಕೃತ, ಗ್ರಂಥಗಳು ರಚನೆಯಾಗಿದ್ದು ಅವುಗಳಲ್ಲಿ ಕನ್ನಡ ಗ್ರಂಥಗಳ ವ್ಯಾಪ್ತಿಯನ್ನು ತೆಗೆದುಕೊಂಡು ನವೋದಯ ಪೂರ್ವದ ಕೆಲವು ಪ್ರಾಚೀನ ಗ್ರಂಥಗಳನ್ನು ಹಾಗೂ ಆಧುನಿಕ ಕನ್ನಡ ಸಂಶೋಧನ ಗ್ರಂಥಗಳಲ್ಲಿ ಕೆಲವನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಸೇರಿಸಲಾಗಿದೆ.

---

3. ಡಾ. ಸಂಗಮೇಶ ಸವದತ್ತಿ ಮಠ – ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ – ಪುಟ. 141

ಇಲ್ಲಿ ಸಾಮಾನ್ಯ ಸಂಶೋಧನೆಯನ್ನು ಮಾತ್ರ ಇಟ್ಟುಕೊಂಡಿರುವುದರ ಜೊತೆಗೆ, ಸಾಹಿತ್ಯದ ಮೇಲೆ ಆದ ಸಂಶೋಧನ ಗ್ರಂಥಗಳನ್ನು ಸಹ ಗಮನಿಸಲಾಗಿದೆ.

ಸಂಶೋಧನ ಗ್ರಂಥಗಳನ್ನು ಕುರಿತು ವಿವಿಧ ರೀತಿಯ ಅಧ್ಯಯನಗಳು ನಡೆದಿವೆ. ನವೋದಯ ಪೂರ್ವದಲ್ಲಿ ಕರ್ನಾಟಕ ಕವಿಚರಿತೆ ತಿಳಿಯಲು ಕನ್ನಡ ವಿದ್ವಾಂಸರು ರಚಿಸಿದ ಸಂಶೋಧನ ಗ್ರಂಥಗಳು ಹವ್ಯಾಸಕ್ಕಾಗಿ ರಚಿಸಿದ್ದು, ಪದವಿಗಾಗಿ ರಚಿಸಿದ್ದು, ಕೆಲವರು ಸಂಶೋಧನೆಯನ್ನೇ ಮುಖ್ಯವಾಗಿಟ್ಟುಕೊಂಡು ಗ್ರಂಥಗಳನ್ನು ರಚಿಸಿದ್ದಾರೆ. ಅಂತಹ ಸಂಶೋಧನ ಗ್ರಂಥಗಳು ಚಾರಿತ್ರಿಕ, ಭಾಷಾತ್ಮಕ, ಸಾಮಾಜಿಕ ಮತ್ತು ಸಾಂಸ್ಕೃತಿ, ಧಾರ್ಮಿಕ, ವೈಜ್ಞಾನಿಕ, ಸಾಹಿತ್ಯದ ಮೇಲಿನ ಗ್ರಂಥಗಳಾಗಿದ್ದು ಅದರಲ್ಲಿ ಕೆಲವನ್ನು ಮಾತ್ರ ಸಂಶೋಧನೆಯ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

ಯಾವುದೇ ವಿಷಯದಲ್ಲಿ ಅಧ್ಯಯನ ನಡೆದಿದ್ದರು, ಅದನ್ನು ಮತ್ತೆ ಶೋಧಿಸಿ ನೋಡುವ ಪ್ರಯತ್ನ ಮಾಡಿದಾಗ ಅದರಿಂದ ಸತ್ಯವನ್ನು ಹಿಂಜಿಕೊಂಡು ಜನರಿಗೆ ಕುಡಿಯಲು ಕೊಟ್ಟರೆ ಅದರಿಂದಾಗುವ ತೃಪ್ತಿಯೇ ಮನುಷ್ಯನ ಮುಂದಿನ ಯಶಸ್ಸಿಗೆ ಕಾರಣವಾಗಿರುತ್ತದೆ. ಅಂತಹ ಕೆಲವು ಹೊಸ ಆಲೋಚನೆಗಳನ್ನು ಹಿಡಿದಿಡುವ ಮಹತ್ವ ಈ ಅಧ್ಯಯನದಲ್ಲಿ ನಡೆದಿದೆ.

1.1. ಸ್ವರೂಪ ಮತ್ತು ಮಹತ್ವ

ಸಂಶೋಧನೆಗೆ ತನ್ನದೇ ಆದಂತಹ ವಿಶಿಷ್ಟ ಮಹತ್ವವಿದೆ. ಕನ್ನಡ ನಾಡಿನಲ್ಲಿ ಕನ್ನಡತನವನ್ನು ಉಳಿಸಿಕೊಳ್ಳಲು ನಡೆಸಿದ ಹೋರಾಟದ ನಡೆಗಳು ಇಂದು ಅಚ್ಚಳಿಯದೇ ಉಳಿದುಕೊಂಡು ಬಂದಿವೆ. ಸುಮಾರು 21 ಶತಮಾನಗಳ ಇತಿಹಾಸ ಹೊಂದಿರುವ ಸಾಹಿತ್ಯ ವಿವಿಧ ರೂಪಗಳೊಂದಿಗೆ ಸೃಷ್ಟಿಗೊಂಡಿದೆ. 'ಬೆಟ್ಟದ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು' ಸೇರುವಂತೆ ಯಾವುದೋ ದೇಶದಿಂದ ಕರ್ನಾಟಕಕ್ಕೆ ಉದ್ಯೋಗವನ್ನರಿಸಿ ಬಂದವರು ಸಂಶೋಧನೆಯಲ್ಲಿ ತೊಡಗಿದರು. ಇವರು ನೀಡಿದ ಕೊಡುಗೆ ಅಮೂಲ್ಯವಾಗಿದೆ. ಮುಖ್ಯವಾಗಿ ಮೌಖಿಕ ಪರಂಪರೆಯ ಹುಟ್ಟು ಮತ್ತು ಬರವಣಿಗೆಗಳು ಈ ನಾಡಿನ ಘನತೆಯನ್ನು ಎತ್ತಿಹಿಡಿದಿವೆ. ಓರಿಯಂಟಲ್ ರಿಸರ್ಚ್ ಇನ್ಸ್‌ಟ್ಯೂಟ್ ಮೂಲಕ ಸಂಶೋಧನೆಯ ಹಾದಿ ಸುಗಮವಾಗಿ ಸಾಗಿದೆ.

ಅನೇಕ ಶಾಸನಗಳಲ್ಲಿ, ಸಾಹಿತ್ಯಗಳಲ್ಲಿ, ಹಸ್ತಪ್ರತಿಗಳಲ್ಲಿ, ನಮಗೆ ಸಿಕ್ಕಿದ್ದು ಈ ಲಿಖಿತ ದಾಖಲೆ. ಇದರಲ್ಲಿ ಎಷ್ಟೋ ಇತಿಹಾಸವಿರಬಹುದು, ಸಾಹಿತ್ಯವಿರಬಹುದು, ಪುರಾಣವಿರಬಹುದು. ಆದರೆ ಇಲ್ಲಿ ಒಂದು ಸತ್ಯಾನ್ವೇಷಣೆ ಕಾಣುತ್ತದೆ. ಸಂಶೋಧನೆ ನಡೆಯುವಂತದ್ದು ಒಂದು ಪದದಿಂದ ಆಗಿರಬಹುದು, ಇಲ್ಲವೇ ಅನೇಕ ಗ್ರಂಥಗಳಿಂದ ಆಗಿರಬಹುದು. ಇದನ್ನು ಇಡಿಯಾಗಿ, ಬಿಡಿಯಾಗಿ ನೋಡುವುದು ಈ ಸಂಶೋಧನೆಯ ಮಹತ್ವವಾದ ಅಂಶ.

ಸಂಶೋಧನೆ ಎನ್ನುವಂಥದ್ದು ಒಂದು ವಿಷಯದ ಬಗ್ಗೆ ಆಯ್ಕೆ ಮಾಡಿಕೊಂಡು, ಪದಗಳನ್ನು ಜೋಡಿಸಿ ಪ್ರಬಂಧ ಬರೆಯುವುದಲ್ಲ ಎಂಬುದು ವಿದ್ವಾಂಸರ ಹೇಳಿಕೆ. ಆದರೆ ಒಬ್ಬ ಪ್ರಬಂಧ ಬರೆಯುವಾಗ ಸಂಶೋಧನೆ ವಿಷಯಗಳನ್ನು ಜೋಡಿಸಿ ಪ್ರಬಂಧ ಬರೆಯುವುದರೊಳಗಾಗಿ ಪೂರ್ಣಪ್ರಮಾಣದ ಸಂಶೋಧನೆ ವಿಷಯಗಳನ್ನು ತಿಳಿದುಕೊಂಡಿರುತ್ತಾನೆ. ಗುಣಲಕ್ಷಣಗಳನ್ನು ಮಿತಿಗಳನ್ನು ತಿಳಿದು ಮುಂದಿನ ಸಂಶೋಧನೆಯಲ್ಲಿ ಸಂಶೋಧಕನಾಗಿ ಯಶಸ್ಸನ್ನು ಕಾಣುತ್ತಾನೆ. ಮೊದಲನೆ ಹಂತದಲ್ಲಿ ಎಡವಿದರೂ ನಂತರ ಎದ್ದು ನಿಲ್ಲುವಂತಹ ಧೈರ್ಯ ಮಾಡುವವನೇ ನಿಜವಾದ ಸಂಶೋಧಕ.

ಸಂಶೋಧನೆ ಎಂಬುದು ನವೋದಯ ಪೂರ್ವದಲ್ಲಿ ಐತಿಹಾಸಿಕ ಸಾಹಿತ್ಯಿಕ ನೆಲೆಯಾದರೂ ತಳಪಾಯ ನಿಲ್ಲುವುದೆಲ್ಲ ಪಾಶ್ಚಿಮಾತ್ಯ ಸಂಸ್ಕೃತಿಯ ಕೊಡುಗೆ. ಅವರು ಹಾಕಿಕೊಟ್ಟ ದಾರಿಯ ಜೊತೆಗೆ ನಮ್ಮ ಕನ್ನಡ ವಿದ್ವಾಂಸರು ರಚಿಸಿದ ಗ್ರಂಥಗಳಿಂದ ಸಂಶೋಧನಾ ಬೆಳವಣಿಗೆ ಅನೇಕ ರೀತಿಯಾಗಿ ನಡೆದಿದ್ದು, ಎಲ್ಲಾ ಸಂಶೋಧನೆಗಳು ಬಹುಮುಖ್ಯವಾಗಿ ಕಾಣುತ್ತದೆ. ಆದರೂ 'ಅಂಗೈಯಲ್ಲಿ ಬೆಣ್ಣೆಯನ್ನು ಹಿಡಿದುಕೊಂಡು ತುಪ್ಪಕ್ಕೆ ಊರೆಲ್ಲ ಹುಡುಕಿದರಂತೆ' ಎಂಬ ಗಾದೆಯಂತೆ ಗ್ರಂಥ ಮತ್ತು ಸಂಶೋಧನೆಯನ್ನು ಬಿಡಿಬಿಡಿಯಾಗಿ ನೋಡುವ ಯತ್ನ ಎಲ್ಲೂ ನಡೆದಿಲ್ಲ. ನಡೆದಿದ್ದರೂ ಗ್ರಂಥ ಎಂಬುದಕ್ಕೆ ಸರಿಯಾದ ಅರ್ಥ ಊಹಿಸಲು ಸಾಧ್ಯವಾಗಿಲ್ಲ.

ಆದುದರಿಂದ ಈ ಅಧ್ಯಯನದಲ್ಲಿ ಗ್ರಂಥಕ್ಕೂ ವಿವಿಧ ಅಧ್ಯಯನಗಳಿಗೂ, ಸಂಶೋಧನೆಗೂ ಸಂಬಂಧವನ್ನು ಕಲ್ಪಿಸಿ, ಶಾಸನ, ಹಸ್ತಪ್ರತಿ, ಸಾಹಿತ್ಯ ಇವುಗಳಿಗೂ ಸಂಬಂಧವನ್ನು ಕಲ್ಪಿಸುವುದು ಈ ಪ್ರಬಂಧದ ಪ್ರಾಮುಖ್ಯತೆ ಆಗಿದೆ. ಕನ್ನಡ ಕ್ಷೇತ್ರಕ್ಕೆ ನೀಡಿದ ರೇ.ಫ.ಕಿಟೆಲ್‌ರವರ ನಿಘಂಟುರಚನೆ ಮತ್ತು ಬಿ.ಎಲ್.ರೈಸ್‌ರವರ ಶಾಸನಸಂಗ್ರಹ ಕಾರ್ಯ ಸಂಶೋಧನೆಗೆ ಬಳಸಿಕೊಳ್ಳಲಾಗಿದ್ದು, ಇದರ ಸ್ವರೂಪವನ್ನು ವಿಸ್ತರಿಸಲಾಗಿದೆ. ಶೋಧನೆ ಮತ್ತು ಸಂಶೋಧನೆಯ ಹಾದಿಗಳು ವೈಜ್ಞಾನಿಕ ಯುಗದಲ್ಲಿ ಒಂದು ಪತ್ಯಗಳ ಅಧ್ಯಯನದಂತೆ ನಡೆಯುತ್ತಿರುವ ಸಂದರ್ಭದಲ್ಲಿ ಬಿಡಿಯಾಗಿ ನೋಡುವುದೇ ಇದರ ಸ್ವರೂಪ. ಇದರ ಪರಿಣಾಮವನ್ನು ನಾವು ತಿಳಿಯಲೇ ಬೇಕಾಗಿರುವುದರಿಂದ ಬರಿಯ ಪುಸ್ತಕಗಳ ರೂಪದಲ್ಲಿ ನೋಡುತ್ತಿರುವ ಓದುಗರಿಗೆ ಗ್ರಂಥ ಎಂದರೇನು? ಎನ್ನುವ ಅರ್ಥವನ್ನು ತಿಳಿಸುವುದು ಈ ಅಧ್ಯಯನದ ಸ್ವರೂಪವಾಗಿದೆ.

ಸಂಶೋಧನೆ ಎನ್ನುವುದು ಹುಡುಕು ಎನ್ನುವ ಅರ್ಥ ಬಂದಾಗಿನಿಂದ ಅನೇಕ ವಸ್ತುಗಳನ್ನು, ವಿಷಯಗಳನ್ನು ಹುಡುಕಿ ಅದರಲ್ಲಿರುವ ಸಾಹಿತ್ಯವನ್ನು ಹೊರಗೆ ತೆಗೆಯಲು ಪ್ರಯತ್ನ ಮಾಡಿದ್ದಾರೆ. ಅಂತಹ ಸಂಶೋಧನೆಯಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಭಾಷೆಗೆ ಅನುಗುಣವಾಗಿ ಇರುವಂತಹ ವಸ್ತುಗಳು ಕೆಲವಾದರೆ, ಇನ್ನು ಕೆಲವು ಹಳಗನ್ನಡ ಲಿಪಿಗಳನ್ನು ಒಳಗೊಂಡಿರುವಂತವು ಆಗಿವೆ. 10ನೇ ಶತಮಾನದ ಲಿಪಿಗಳನ್ನು ಬಳಸಿ ಬರೆದ ಶಾಸನ, ಹಸ್ತಪ್ರತಿ, ಇನ್ನಿತರ ವಸ್ತುಗಳನ್ನು ಬಳಸಿಕೊಂಡು ರಚನೆಯಾದ ಗ್ರಂಥಗಳು ಆಧುನಿಕ ಸಂದರ್ಭದಲ್ಲಿ ಮುದ್ರಣ ಮಾಧ್ಯಮವನ್ನು ಬಳಸಿಕೊಂಡು ಬಂದ ಗ್ರಂಥಗಳನ್ನು ಗುರುತಿಸಬಹುದು. ಇಂತಹ ಗ್ರಂಥಗಳನ್ನು ಒಂದು ಕಡೆ ಸಂಗ್ರಹಿಸಿ ಸಂಶೋಧನೆ ಎಂದರೇನು? ಗ್ರಂಥ ಎಂದರೇನು? ಎಂಬ ಅರ್ಥಗಳನ್ನು ಹುಡುಕ ಬೇಕಾಗಿರುವುದರಿಂದ, ಈಗಾಗಲೇ ಸಂಶೋಧನೆ ಎನ್ನುವ ಪದಕ್ಕೆ ಅನೇಕ ವಿದ್ವಾಂಸರು ವ್ಯಾಖ್ಯಾನಿಸಿದ್ದಾರೆ. ಗ್ರಂಥ ಎಂದರೇನು? ಎನ್ನುವುದಕ್ಕೆ ಅರ್ಥ ಕಲ್ಪಿಸಿದ್ದಾರೆ. ಈ ಅಧ್ಯಯನದ ಸ್ವರೂಪಕ್ಕೆ ಒಳಪಡುವ ಹಳಗನ್ನಡ, ಹೊಸಗನ್ನಡ ಮತ್ತು ಇತ್ತೀಚಿನ ಕೆಲವು ಅಧ್ಯಯನ ಕ್ಷೇತ್ರಗಳನ್ನು ಮಾತ್ರ ಇಲ್ಲಿ ಹೇಳಲಾಗಿದೆ.

ಪ್ರಾಚೀನ ಕಾಲದಿಂದಲೂ ಸಹ ನೂರಾರು ಗ್ರಂಥಗಳು ರಚನೆಗೊಂಡಿದ್ದು ಅವು ಅನೇಕ ಭಾಷಾ ಪ್ರಭೇದಗಳನ್ನು ಒಳಗೊಂಡಿದ್ದು ರಚನೆಯಾಗಿರುವುದರಿಂದ ಗ್ರಂಥ ಎನ್ನುವ ಪದವನ್ನು ಅಂದಿನಿಂದಲೂ ಒಂದು ಗೌರವಾನ್ವಿತ ಪದವಾಗಿ ನೋಡುತ್ತಿರುವುದರಿಂದ ಆ ಸಂಶೋಧನಾ ಗ್ರಂಥವನ್ನು ಇಲ್ಲಿ ನಾನಾ ಅಧ್ಯಯನಗಳೊಂದಿಗೆ ಸಂಬಂಧ ಕಲ್ಪಿಸಿ ರಚಿಸಿದ್ದು ಸಂಶೋಧನ ಗ್ರಂಥ ಎನ್ನುವುದಕ್ಕೆ ಒಂದು ಅರ್ಥವನ್ನು ನೀಡುವ ಉದ್ದೇಶದಿಂದ ಒಂದನೇ ಅಧ್ಯಾಯದಲ್ಲಿ ಅದನ್ನು ವಿಸ್ತರಿಸಲಾಗಿದೆ. ಅನೇಕ ಸಂಶೋಧನಾ ಗ್ರಂಥಗಳಲ್ಲಿ ಕೆಲವನ್ನು ಮಾತ್ರ ಅಂದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾಲಘಟ್ಟಕ್ಕೆ ಅನುಗುಣವಾಗಿ ಉಲ್ಲೇಖಿಸಿರುವ ಗ್ರಂಥಗಳನ್ನು ತೆಗೆದುಕೊಂಡು ವ್ಯಾಪ್ತಿಯನ್ನು ವಿವರಿಸಲಾಗಿದೆ.

ಶಾಸನ, ಹಸ್ತಪ್ರತಿ, ಮುಂತಾದ ವಲಯದ ಗ್ರಂಥಗಳಿದ್ದು ಅವುಗಳಲ್ಲಿ ಕೆಲವನ್ನು ಆಧುನಿಕ ಸಂಶೋಧನೆಯ ನಿಟ್ಟಿನಲ್ಲಿ ಅವುಗಳ ಸ್ವರೂಪವನ್ನು ವಿವೇಚಿಸಲಾಗಿದೆ. ಸಂಶೋಧನೆ ಎನ್ನುವ ಪದವು ಹುಡುಕು, ಶೋಧಿಸು, ಶುದ್ಧಗೊಳಿಸು ಎನ್ನುವಂತೆ ಅರ್ಥ ನೀಡಿದರೆ, ಗ್ರಂಥ ಎನ್ನುವ ಪದವು ಕಟ್ಟು, ಕೂಡಿಡು, ಹಿಡಿದಿಡು ಎನ್ನುವ ಅರ್ಥಗಳನ್ನು ನೀಡಿರುವುದರಿಂದ ಸಂಶೋಧನ ಗ್ರಂಥ ಎಂದರೇನು? ಎನ್ನುವುದರ ಜೊತೆಗೆ ನವೋದಯ ಪೂರ್ವದಿಂದ, ಆಧುನಿಕದ ವರೆವಿಗೂ ಅನೇಕ ಗ್ರಂಥಗಳು ರಚನೆಯಾಗಿದ್ದು ಅವುಗಳು ಬೆಳೆದು ಬಂದ ದಾರಿಯನ್ನು ಅಧ್ಯಾಯ ಎರಡರಲ್ಲಿ ತಿಳಿಸಲಾಗಿದೆ. ಅದರಲ್ಲಿ ಅನೇಕ ವಿಧದ ಗ್ರಂಥಗಳಿದ್ದು ಇಲ್ಲಿ ಹಳಗನ್ನಡ, ಹೊಸಗನ್ನಡ ಗ್ರಂಥಗಳನ್ನು ಮಾತ್ರ ತೆಗೆದು ಕೊಳ್ಳಲಾಗಿದೆ. ಇವುಗಳೊಂದಿಗೆ ಸಂಶೋಧನ ಗ್ರಂಥ ಎಂದರೇನು? ಎನ್ನುವ ಸಂಬಂಧ ಕಲ್ಪಿಸಲಾಗಿದೆ. ನವೋದಯ ಪೂರ್ವದಲ್ಲಿ ರಚಿಸಿದ ಚಾರಿತ್ರಿಕ ಮತ್ತು ಸಾಹಿತ್ಯ ಸಂಶೋಧನ ಗ್ರಂಥಗಳು, ಭಾಷಾತ್ಮಕ ಸಂಶೋಧನ ಗ್ರಂಥಗಳನ್ನು, ಆಧುನಿಕ ಸಂದರ್ಭದಲ್ಲಿನ ಸಂಶೋಧನ ಗ್ರಂಥಗಳನ್ನು, ಸಾಮಾಜಿಕ ಮತ್ತು ಸಾಂಸ್ಕೃತಿಕ, ವಿಮರ್ಶಾತ್ಮಕ, ವೈಜ್ಞಾನಿಕ ಗ್ರಂಥಗಳನ್ನು ಈ ಅಧ್ಯಾಯ ಎರಡರಲ್ಲಿ ವಿವರಿಸಲಾಗಿದೆ.

ಕಲೆ, ವಿಜ್ಞಾನ, ವಾಣಿಜ್ಯ, ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನೂರಾರು ಗ್ರಂಥಗಳು ರಚನೆಯಾಗಿದ್ದು ಎಲ್ಲ ಕ್ಷೇತ್ರವು ಆಧುನಿಕ ಸಂದರ್ಭದಲ್ಲಿ ಬೆಳೆದು ಹೆಮ್ಮರವಾದ ಸಂದರ್ಭಗಳಾಗಿದ್ದರಿಂದ ಕನ್ನಡ ಪ್ರಾಚೀನತೆಯನ್ನು ತಿಳಿಯುವ ಆಕರಗಳಲ್ಲಿ ಕೆಲವನ್ನು ಅಂದರೆ ಶಾಸನ, ಹಸ್ತಪ್ರತಿ, ಸಾಹಿತ್ಯದ ಅಂಶಗಳ ಜೊತೆಗೆ ಸಂಶೋಧನ ಗ್ರಂಥ ಎಂದರೇನು? ಎನ್ನುವ ಅರ್ಥವನ್ನು ಕಲ್ಪಿಸಿ ಮೂರನೇ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಯಾವುದೇ ಒಂದು ಕಾರ್ಯ ಯಶಸ್ವಿಯಾಗಬೇಕಾದರೂ ಕೆಲವು ಮೂಲ ಅಂಶಗಳು ಕಾರಣವಾಗಿರುತ್ತವೆ. ಯಾವುದೇ ಹಂತಕ್ಕೂ ತಳಪಾಯವಿಲ್ಲದ ಶೋಧನೆಗಳಿಲ್ಲ, ಅದು ಯಾವುದೇ ಮಾರ್ಗ ಮೂಲದಾದ್ದರೂ ವಿಶಿಷ್ಟ ಎನಿಸಿಕೊಳ್ಳುತ್ತದೆ. ಶೋಧನೆ, ಸಂಶೋಧನೆ ಎನ್ನುವಂತಹ ಪದಗಳು ರಚನೆಯಾದ ಸಂದರ್ಭ ಪಾಶ್ಚಿಮಾತ್ಯರದ್ದಾಗಿದೆ. ಇಲ್ಲಿನ ವಸ್ತುಗಳನ್ನು ತೆಗೆದುಕೊಂಡು ಅಧ್ಯಯನ ನಡೆಸಿದವರಲ್ಲಿ ಇವರೇ ಮೊದಲಿಗರಾದ್ದರಿಂದ ಸಾಕಷ್ಟು ಚರಿತ್ರೆಗಳನ್ನು ತಿಳಿಯಲು ಇವರ ಅಲ್ಪ ಸ್ವಲ್ಪ ನೆರವು ನಮಗೆ ಬೇಕಾಗಿತ್ತು. ಸಂಶೋಧನೆಯ ಬೆಳವಣಿಗೆಯಲ್ಲಿ ಇವರ ಪಾತ್ರ ವಿಶಿಷ್ಟವಾದ್ದರಿಂದ ಅಂತಹ ವಿದ್ವಾಂಸರಾದ ಮೋಗ್ಲಿಂಗ್, ಬಿ.ಎಲ್.ರೈಸ್. ಫ್ಲೀಟ್, ಕಿಟೆಲ್, ರಂತಹ ವಿದ್ವಾಂಸರನ್ನು ಹೆಸರಿಸಬಹುದು. ಅದರಲ್ಲಿ ಕನ್ನಡಕ್ಕೆ ನಿಘಂಟಿನ ಮೂಲಕ ಕೊಡುಗೆಯನ್ನು ನೀಡಿದ ಕಿಟೆಲ್, ಶಾಸನ ಸಂಶೋಧನೆಯನ್ನು ಪತ್ತೆಹಚ್ಚಿದ ಬಿ.ಎಲ್.ರೈಸ್‌ರವರನ್ನು ಅಧ್ಯಾಯ ನಾಲ್ಕರಲ್ಲಿ ವಿವರಿಸಲಾಗಿದೆ. ಅದರ ಜೊತೆಗೆ ನಿಘಂಟಿನ ಆಧುನಿಕ ಅವಶ್ಯಕತೆ ಮತ್ತು ವಿವಿಧ ನಿಘಂಟುವಿನ ರಚನೆಯನ್ನು ತಿಳಿಸಲಾಗಿದೆ.

ಶೋಧನೆ ಮತ್ತು ಸಂಶೋಧನೆಗಳ ಕೆಲಸ ಒಂದೇ ಆದರೂ ಅವುಗಳಿಗೆ ಇರುವ ಅರ್ಥಮಾತ್ರ ಬೇರೆಯಾಗಿದೆ. ಶೋಧಿಸು, ಪುನರ್ ಶೋಧಿಸು ಎನ್ನುವಂತೆ ಶೋಧನೆಯ ಗ್ರಂಥಗಳು ಆಧುನಿಕ ಕಾಲದ್ದಾಗಿದ್ದರೆ ನವೋದಯದಲ್ಲಿ ಪುನರ್ ಶೋಧನೆಯ ಗ್ರಂಥಗಳು ರಚನೆಯಾಗುತ್ತಿದ್ದವು. ಲಿಪಿ. ಶಾಸನ, ಹಸ್ತಪ್ರತಿ, ಎಲ್ಲವು ಶೋಧನೆ ಇವುಗಳನ್ನು ಆಧುನಿಕರಿಸಿದ್ದು ಸಂಶೋಧನೆ, ಇಂತಹ ನೂರಾರು ಗ್ರಂಥಗಳು ಬೆಳಕಿಗೆ ಬಂದು ಆಧುನಿಕ ಯುಗದಲ್ಲಿ ಹೊಸದಾಗಿ ರಚನೆಯಾದ ದಲಿತ-ಬಂಡಾಯ ಸಾಹಿತ್ಯ ಘಟ್ಟಗಳು ಮತ್ತು ಸ್ತ್ರೀ ವಾದಿ ಸಾಹಿತ್ಯ ಸಂಶೋಧನೆಯ ಗ್ರಂಥಗಳನ್ನು ಅಧ್ಯಾಯ ಐದರಲ್ಲಿ ಅಳವಡಿಸುವುದರ ಮೂಲಕ ಸಮಾರೋಪವನ್ನು ರಚಿಸಲಾಗಿದೆ.

ಕೆಲವು ಅಧ್ಯಾಯಗಳಲ್ಲಿ ಮೂಲವನ್ನು ಹುಡುಕಿ ತೋರಿಸುವುದು ಬಹುಮುಖ್ಯ ಅಂಶ. ಅಂತಹ ಕೆಲಸವನ್ನು ಎಷ್ಟೋ ಅಧ್ಯಾಯಗಳು ಇಂದಿಗೂ ನಡೆಸುತ್ತಿದ್ದು, ಉಗಮ ಸ್ಥಾನಗಳು ಸಿಗದೆ ಊಹ-ಪೋಹಗಳ ಮೇರೆಗೆ ಪತ್ತೆಹಚ್ಚುವುದು, ಸರಿಯಾದ ಮಾಹಿತಿ ಸಿಕ್ಕ ನಂತರ ಅದನ್ನು ರೂಢಿಗೆ ತರುವುದು ಒಂದು ಹಂತವಾದರೆ, ಕೆಲವು ಆಕರ ಆಧಾರಗಳ ಮೇಲೆ ಸತ್ಯವನ್ನು ಕಂಡು ಹಿಡಿಯುವುದು ಇನ್ನೊಂದು ಹಂತ. ಒಂದು ಪದಕ್ಕೆ ಎಷ್ಟೋ ಬಗೆಯ ವಿವಿಧ ಅರ್ಥಗಳು ನಮಗೆ ಸಿಗುತ್ತವೆ. ಆದರೆ ನಮಗೆ ತೀರ ಹತ್ತಿರವಾದ ಪದವನ್ನು ಗುರುತಿಸುವುದು ಬಹುಮುಖ್ಯವಾದುದು. ಅಂತಹುದರಲ್ಲಿ ಸಂಶೋಧನೆ ಎನ್ನುವುದಕ್ಕೆ ಅನೇಕ ವಿದ್ವಾಂಸರು ವ್ಯಾಖ್ಯಾನಗಳನ್ನು ನೀಡುವುದರ ಜೊತೆಗೆ ಗ್ರಂಥ ಎನ್ನುವುದಕ್ಕೆ ಚಿಕ್ಕ ಚಿಕ್ಕದಾಗಿ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಗ್ರಂಥ ಎನ್ನುವುದಕ್ಕ ವಿಶೇಷವಾದ ಪದ ಸೂಚಿಸಿ ಬೆಳೆದು ಬಂದ ದಾರಿಯನ್ನು ಗುರುತಿಸುವುದು ಸಂಶೋಧನೆಯ ಕೆಲವು ಗ್ರಂಥಗಳನ್ನು ಮತ್ತು ರೀತಿ-ನೀತಿಗಳನ್ನು ತಿಳಿಸುವುದು ಈ ಅಧ್ಯಯನದ ಮಹತ್ವವಾದ ಅಂಶವಾಗಿದೆ.

ಗ್ರಂಥಗಳು ಜ್ಞಾನದ ಬೀಜವನ್ನು ಬಿತ್ತುವುದಾದರೆ, ಸಂಶೋಧನೆ ಅದನ್ನು ಪೋಷಿಸಿ ಬೆಳೆಸುವುದಾಗಿದೆ, "ಸಂಶೋಧನೆ ಸೃಜನಾತ್ಮಕ ಸಾಹಿತ್ಯವಲ್ಲ. ಆದ್ದರಿಂದ ಒಂದೆರಡು ತಿಂಗಳಲ್ಲಿ ನೂರಾರು ಪುಟಗಳನ್ನು ತುಂಬುವ ಸಂಶೋಧನ ಕಾರ್ಯವನ್ನು ಮುಗಿಸುವುದು ಅಸಾಧ್ಯ. ಹಾಗೆ ಮಾಡಿದರೆ ಅದು ಸಂಶೋಧನೆ ಎನಿಸಿ ಕೊಳ್ಳಲಾರದು. ಸಂಶೋಧನೆ ಎನ್ನುವುದು ಗಣಿಯಿಂದ ಚಿನ್ನವನ್ನು ತೆಗೆದಂತೆ"[4] .ಎಂದು ಹೇಳುವಂತೆ ಎಲ್ಲ ಪುಸ್ತಕಗಳು ಗ್ರಂಥ ಎನಿಸಿಕೊಳ್ಳುವುದಿಲ್ಲ, ನಾವು ಎಷ್ಟನ್ನೇ ಓದಿದರೂ, ಬರೆದರೂ ನಮಗೆ ಸಿಗಬೇಕಾದದ್ದು ಸತ್ಯತೆ ಅಂದಾಗ ಈ ಅಧ್ಯಯನದ ಸ್ವರೂಪಕ್ಕೆ ಬೇಕಾದ ಕೆಲವನ್ನು ಮಾತ್ರ ಆರಿಸಿಕೊಂಡು ಗ್ರಂಥಗಳ ಮಹತ್ವವನ್ನು ನಮೂದಿಸಲಾಗಿದೆ. ಹೆಚ್ಚಾಗಿ ಆಧುನಿಕ ಸಂಶೋಧನೆಗೆ ಒತ್ತನ್ನು ನೀಡಲಾಗಿದೆ, ಸಂಶೋಧನೆ ಕೆಲವು ಇರುವುದನ್ನು ತೆಗೆದು ತೋರಿಸುವ ಕೆಲಸ ಮಾಡುತ್ತದೆ. ಆದರೆ ಗ್ರಂಥ ಆ ವಿಷಯವನ್ನು ಕೂಲಂಕೂಷವಾಗಿ ಬರೆಯುವುದರ ಮೂಲಕ ಅದನ್ನು ಇತಿಹಾಸದ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡುತ್ತದೆ.

4.ಡಾ.ಸಂಗಮೇಶ ಸವದತ್ತಿಮಠ-ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ.ಪುಟ 11

ನಾವು ಇಲ್ಲಿಯವರೆಗೆ ಪುಟ ಪುಟಗಳಲ್ಲಿ ಗೀಚಿದ ಅಕ್ಷರಗಳನ್ನು ಒಂದು ಪುಸ್ತಕವೆಂದೂ, ಒಂದು ಗ್ರಂಥವೆಂದೂ ಹೇಳುತ್ತಿದ್ದೆವು. ಆದರೆ ಈ ಅಧ್ಯಯನದ ಮೂಲಕ ಗ್ರಂಥಕ್ಕೆ ವಿಶೇಷವಾದ ಅರ್ಥ ಕಲ್ಪಿಸುವ ಮಹತ್ವವನ್ನು ಬರೆದಿದ್ದೇನೆ. ಮನುಷ್ಯನ ಶೋಧನೆಗಳು ಇತಿಹಾಸಬದ್ಧ ಇಲ್ಲವೆ ಭಾವನೆಗಳ ಶೋಧನೆಯಾಗಿರುತ್ತದೆ. ಇಲ್ಲಿ ಎರಡಕ್ಕೂ ಅವಕಾಶಗಳಿರುವುದರಿಂದ ಭಾವಾನುಬದ್ಧವಾಗಿರುವುದಕ್ಕೆ ಸಾಹಿತ್ಯದ ರೂಪದಲ್ಲಿ ಕಾದಂಬರಿ ಎಂದೊ, ಕಾವ್ಯ ಎಂದೊ, ಕಥೆ, ನಾಟಕ, ಎಂದು ಮುಂತಾದ ರೀತಿಯಲ್ಲಿ ಹೆಸರಿಸಿದರೆ. ಸಂಶೋಧನೆಯನ್ನು ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ಎನ್ನುವ ಹೆಸರನ್ನು ಸೇರಿಸಿ ವಿವರಿಸಲಾಗುತ್ತದೆ ಎಂದು ಹೇಳಬಹುದು. ಈ ಅಧ್ಯಯನದ ಕೊನೆಯಲ್ಲಿ ಸ್ತ್ರೀವಾದಿ ಸಾಹಿತ್ಯ, ಸಂಶೋಧನೆ ಮತ್ತು ದಲಿತ–ಬಂಡಾಯ ಸಂಶೋಧನೆಗಳನ್ನು ನೀಡಲಾಗಿದೆ.

ಗ್ರಂಥ ಎನ್ನುವ ಪದ ವಿಶೇಷವಾಗಿ ಪ್ರಾಚೀನ ಸಾಹಿತ್ಯ ಕಾಲದಲ್ಲಿ ಬಂದಿರುವಂತದ್ದು ಅಂತಹ ಪದಕ್ಕೆ ಯಾವುದೇ ರೀತಿಯ ಸ್ವರೂಪವಿಲ್ಲದೆ ಹೇಳಲಾರರು. ಅಂದರೆ ಹಸ್ತಪ್ರತಿ, ಶಾಸನ,ಇತರೆ ವಸ್ತುಗಳಿಂದ ತಯಾರಿಸುತ್ತಿದ್ದ ಸಾಹಿತ್ಯವನ್ನು ಒಂದು ಕಡೆ ನೀಟಾಗಿ ಸೇರಿಸಿ ಅದು ಸುಮಾರು ನೂರರಿಂದ ಸಾವಿರಾರು ಪ್ರತಿಗಳವರೆಗೆ ಸೇರಿದಾಗ ಅದಕ್ಕೆ ಗ್ರಂಥ ಎಂದು ಹೇಳಬಹುದು. ಅದು ಹಾಗೆಯೇ ಮುಂದುವರೆದು ಬರಹದ ದಾಖಲೆಗಳನ್ನು ಹಿಡಿದಿಡುವ ಪ್ರತಿಗಳಿಗೆ ಗ್ರಂಥ ಎಂದು ಅಥವಾ ಪ್ರತಿಗಳನ್ನು ರಚಿಸಿ ದಾನ ಮಾಡುತ್ತಿದ್ದಾಗ ಯಾರಾದರೂ ಇದನ್ನು ಏನು ಎಂದು ಕೇಳಿದಾಗ ಗ್ರಂಥಗಳು ಎಂದು ಹೇಳಿರಬಹುದು. ಗ್ರಂಥ ಎನ್ನುವುದು ಯಾವ ಸ್ಥಾನವನ್ನು ಹೊಂದಿದೆ ಎನ್ನುವುದನ್ನು ವಿವರಿಸುವುದೆ ಇದರ ಸ್ವರೂಪ ಮತ್ತು ಇದು ರಚನೆಯಾದ ಉದ್ದೇಶವನ್ನು ತಿಳಿಸುವುದೇ ಈ ಅಧ್ಯಯನದ ಮಹತ್ವವಾಗಿದೆ.

ಸಂಶೋಧನೆ ಎನ್ನುವಂತದ್ದು ಮನುಷ್ಯನ ಜೊತೆಯಲ್ಲಿ ಬಂದಿದ್ದರೂ, ಅದು ಕಾಣಿಸಿಕೊಂಡಿದ್ದು 19ನೇ ಶತಮಾನದ ನಂತರ ಅದಕ್ಕೆ ಒಂದು ಅರ್ಥ ಸಿಕ್ಕಿದ್ದು 20ನೇ ಶತಮಾನದಲ್ಲಿ, ಇತ್ತೀಚಿಗೆ ಅದು ಒಂದು ವಿಭಾಗವಾಗಿ ಬೆಳೆದಿದೆ. ಎಲ್ಲಾ ವಿದ್ಯಾರ್ಥಿಗಳು ತಿಳಿಯಲೇ ಬೇಕಾದ ಅಧ್ಯಯನ ಮಾಡಲೇ ಬೇಕಾದ ಅಂಶವಾಗಿ ಮುಂದುವರೆಯುತ್ತಿದೆ.

ಅದರ ಸ್ವರೂಪ ವಿಸ್ತಾರವಾಗಿದ್ದು ಜಾನಪದದಿಂದ ವಿಜ್ಞಾನದವರೆವಿಗೂ ಬೆಳೆದು ನಿಂತಿದೆ. ಪ್ರತಿಯೊಬ್ಬನೂ ಯಾವುದಾದರೂ ಒಂದು ಗುರಿಯನ್ನಿಟ್ಟು ಮುಂದುವರೆಯಬೇಕು. ಅಗ ಅದನ್ನು ದಾಖಲಿಸಲು ಸಂಶೋಧನೆಯ ದಾಖಲು ಗ್ರಂಥದ ಮೂಲಕ ಜನರಿಗೆ ತಿಳಿಯುತ್ತದೆ ಅಂಥ ನೂರಾರು ಸಂಶೋಧನ ಗ್ರಂಥಗಳನ್ನು ನಾವು ನೋಡಬಹುದು ಮತ್ತು ವಿವಿಧ ಕ್ಷೇತ್ರಗಳ ಅಧ್ಯಯನಗಳು ಸಂಶೋಧನೆಯ ಬೆಳವಣಿಗೆಯನ್ನು ತಿಳಿಸುತ್ತವೆ.

ಅಧ್ಯಾಯ: 2

ಸಂಶೋಧನ ಗ್ರಂಥಗಳ ಬೆಳವಣಿಗೆ

2.1 ಸಂಶೋಧನ ಗ್ರಂಥ ಎಂದರೇನು?

2.2 ನವೋದಯ ಪೂರ್ವ ಬೆಳವಣಿಗೆ

2.3 ಆಧುನಿಕ ಸಂಶೋಧನ ಗ್ರಂಥಗಳು

ಅಧ್ಯಾಯ – 2

ಸಂಶೋಧನ ಗ್ರಂಥಗಳ ಬೆಳವಣಿಗೆ

"ಕಾವೇರಿಯಿಂದಮಾ ಗೋದಾವರಿವರಮಿರ್ಪಾ ನಾಡದ ಕನ್ನಡದೊಳ್"ಎಂದು ಭೌಗೋಳಿಕ ಎಲ್ಲೆಯನ್ನು ಶೋಧಿಸಿ ತೋರಿಸಿದ ಕವಿರಾಜಮಾರ್ಗಕಾರನಿಂದಲೇ ಈ ಸಂಶೋಧನೆ ಎನ್ನುವ ಮಾತು ಬಂದಿದೆ ಎಂದು ಹೇಳಬಹುದು. ಮಾನವ ವಿಶ್ವರೂಪಿ ತಾನು ಅಂದುಕೊಂಡಿದ್ದನ್ನು ಸಾಧಿಸಿಯೇ ಬಿಡುತ್ತಾನೆ. ಹಾಗೆಯೇ ಅನಕ್ಷರತೆಯ ಪರಂಪರೆಯಿಂದ ಅಕ್ಷರಗಳವರೆಗೆ ಸಾಗಿದ ಇವನು ಒಬ್ಬ ಮಹಾನ್ ಸಂಶೋಧಕನೆ. ಪ್ರಕೃತಿ ಸೃಷ್ಟಿಸಿದ್ದನ್ನು ಆರಾಧಿಸುತ್ತಾನೆ. ಪುನರ್‌ಸೃಷ್ಟಿ ಮಾಡುತ್ತಾನೆ. ಆದರೆ ಮನುಷ್ಯನ ದಿನನಿತ್ಯ ಅವಶ್ಯಕಗಳು ಎಲ್ಲವೂ ಶೋಧನೆಯ ಒಂದು ಭಾಗವೆಂದು ಹೇಳಬಹುದು. ಮನುಷ್ಯನಿಗಿರುವ ಕುತೂಹಲ, ತಿಳುವಳಿಕೆ, ಆಶ್ಚರ್ಯ, ಆಸಕ್ತಿ, ನಿತ್ಯ ಜೀವನಾವಶ್ಯಕತೆಗಳೆಲ್ಲವೂ ಮತ್ತೊಂದು ಭಾಗವಾಗಿವೆ.

ಬೆಂಕಿ, ಆಹಾರ. ವೈದ್ಯಕೀಯ, ಉಡುಪು ಮುಂತಾದುವುಗಳನ್ನು ಪಡೆದು ಪ್ರಾಣಿ–ಪಕ್ಷಿಗಳ ಕೂಗನ್ನು ಅನುಸರಿಸಿ ಲಿಪಿಗಳನ್ನು ಸೃಷ್ಟಿಸಿ ಮರ, ಬಂಡೆಗಳು, ತಾಳೆಗರಿ, ಭೂರ್ಜಪತ್ರ ಬಳಸಿಕೊಂಡು ವ್ಯವಹಾರ, ಸಂಪರ್ಕ, ಸಾಹಿತ್ಯ, ಮನರಂಜನೆ ಮುಂತಾದವುಗಳನ್ನು ದಾಖಲಿಸಿ, ನಂತರ ಪಾಶ್ಚಿಮಾತ್ಯ ಸಂಪರ್ಕ ಬಂದಾಗಿನಿಂದ ಕಾಗದ ಬಳಕೆ ಮಾಡಿದನು. ಕೈಬರಹಗಳಲ್ಲಿ ಕಾಗದಗಳ ಮೇಲೆ ಮಸಿ ಬಳಸಿಕೊಂಡು ಬರಹ ಬರೆಯುತ್ತಿದ್ದು, ನಂತರ ಅಚ್ಚುಮೊಳೆಗಳ ಜೋಡಣೆ ಬಂದು ಕೆಲವು ಬಿಡಿ ಲೇಖನಗಳ ಪ್ರಚಾರ, ಕ್ರೈಸ್ತ ಮಿಷನರಿಗಳ ಆಗಮನ, ಭೂಶೋಧನೆ ಎಲ್ಲವನ್ನು ಕೈಗೊಂಡು ಇಲ್ಲಿ ಸಿಗುವ ವಸ್ತುಗಳನ್ನು ಪಾಶ್ಚಿಮಾತ್ಯ ದೇಶಕ್ಕೆ ಕೊಂಡೊಯ್ದು ಅಧ್ಯಯನ ನಡೆಸಿದ್ದರು. ಅನೇಕ ಮಿಷನರಿ ಅಧಿಕಾರಿಗಳು ಶೋಧಿಸಿದ್ದನ್ನು, ಬಿಡಿ ಲೇಖನಗಳಲ್ಲಿ ಪತ್ರಿಕೆಗಳ ಮೂಲಕ ಪ್ರಚಾರ ಮಾಡುತ್ತಿದ್ದರು. ಇದರ ಉದ್ದೇಶ ಮತ ಪ್ರಚಾರಕ್ಕಾಗಿ. ಆದರೆ ಇಲ್ಲಿ ಸಿಕ್ಕ ಕೆಲವು ಐತಿಹಾಸಿಕ ವಸ್ತುಗಳು ಮನಸೆಳೆದು ಅವುಗಳ ಮೇಲೆ ಪಾಶ್ಚಿಮಾತ್ಯರ ಕಣ್ಣು ಬಿದ್ದು ಸಂಶೋಧನೆಗೆ ತೊಡಗುವಂತೆ ಮಾಡಿದವು.

ಇದರಲ್ಲಿ ಕನ್ನಡದ ಕೆಲವು ವಿದ್ವಾಂಸರು ಸಹ ಪಾಲ್ಗೊಂಡಿದ್ದು ಸಂಶೋಧನೆಯ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸುವಂತಹ ಕೆಲಸ ಮಾಡುವುದರ ಮೂಲಕ ಸಂಶೋಧನೆಗೆ ದಾರಿ ಹಾಕಿಕೊಟ್ಟರು. ಅಂದಿನಿಂದ ಕಾಗದದ ಬಳಕೆ ಪ್ರಾರಂಭಿಸಿ ಮುಂದೆ ಯಥೇಚ್ಛವಾಗಿ ಮುದ್ರಣ ಮಾಧ್ಯಮಗಳು ಪ್ರಾರಂಭವಾಗಿ ಗ್ರಂಥಗಳು ಮುದ್ರಣಗೊಂಡು ಪ್ರಚಾರ ಪಡೆದವು. ಹಾಗಾಗಿ ಸಂಶೋಧನಗ್ರಂಥ ಎನ್ನುವ ಪದ ಮತ್ತು ಅದರ ಬೆಳವಣಿಗೆಯನ್ನು ನವೋದಯ ಪೂರ್ವ ಆಧುನಿಕ ಯುಗದಿಂದಲೂ ಗ್ರಂಥಗಳು ಬೆಳೆದು ಬಂದ ಬಗೆಯನ್ನು ಈ ಅಧ್ಯಾಯದಲ್ಲಿ ತಿಳಿಯಬಹುದಾಗಿದೆ.

ಪಾಕಶಾಸ್ತ್ರ, ವೈದ್ಯಶಾಸ್ತ್ರ, ದೇವರುಗಳ ನಾಮ ಸ್ತುತಿಗಳ ಮೂಲಕ ಸಾಮಾನ್ಯ ಜನರು ಸಹ ಕರಗತ ಮಾಡಿಕೊಂಡು ಬಾಯಿಪಾಠದ ಮೂಲಕ ಮುಂದಿನ ಜನರಿಗೆ ಹರಿದುಬಂದು ಮುಂದೆ ಹಸ್ತಪ್ರತಿಗಳಲ್ಲಿ ದಾಖಲೆಯಾಗಿ ಅಂತಹ ಎಷ್ಟೋ ಹಸ್ತಪ್ರತಿಗಳನ್ನು ಕೂಡಿಟ್ಟು ಗ್ರಂಥಗಳನ್ನಾಗಿ ಮಾಡಿರುವ ಸಂದರ್ಭಗಳನ್ನು ಕಾಣಬಹುದು.

ಈ ಗ್ರಂಥಗಳು ದೇವರ ಹೆಸರಿನಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದು ಸಾಮಾನ್ಯ ಜನರು ದೇವಪುರುಷರಾಗಿ ಕಂಡುಬಂದದ್ದು ಸಮಾಜ ಸುಧಾರಣೆಯ ಸಂದರ್ಭದಲ್ಲಿ. ನಮ್ಮ ಪೂರ್ವಿಕರ ಗ್ರಂಥಗಳನ್ನೇ ಲಕ್ಷ್ಮಿ, ಸರಸ್ವತಿ, ಐಶ್ವರ್ಯಗಳ ಹೆಸರಿನಲ್ಲಿ ಗ್ರಂಥಗಳನ್ನು ಕೂಡಿಟ್ಟು ಸಂರಕ್ಷಿಸಿ ಪೂಜಿಸುತ್ತಿದ್ದರು. ಒಂದು ಗ್ರಂಥ ಮನೆಯಲ್ಲಿದೆ ಎಂದರೆ ಅವರಿಗೆ ಐಶ್ವರ್ಯ ಲಕ್ಷ್ಮಿ ಒಲಿದಿದ್ದಾಳೆ ಎಂಬ ನಂಬಿಕೆ. ಇಂತಹ ಗ್ರಂಥಗಳು ಕಾಲಕ್ರಮೇಣ ಸಾಹಿತ್ಯದ ಹಾದಿಯನ್ನಿಡಿದು ಅದಕ್ಕಾಗಿ ಮಠ, ಮಾನ್ಯಗಳಲ್ಲಿ ವಿದ್ಯಾಭ್ಯಾಸಗಳು ಮುಂದುವರಿದು. ಆನೇಕ ಬಗೆಯ ಸಂಖ್ಯೆಯಲ್ಲಿ ವಿವಿಧ ವಿಷಯಗಳಲ್ಲಿ ಗ್ರಂಥಗಳು ರಚನೆಯಾಗಿದ್ದು, ಈ ಒಂದು ದಾರಿ ಪ್ರಾಚೀನ ಕಾಲದಿಂದ ಆಧುನಿಕದವರೆವಿಗೂ ಮುಂದುವರಿದುಕೊಂಡೇ ಬಂದಿದೆ.

ಮೊದಲು ಬಂದ ಗ್ರಂಥಗಳೆಲ್ಲವು ಜಾನಪದೀಯವಾಗಿ ರಚನೆಯಾಗಿದ್ದು, ಪ್ರಕೃತಿಯಲ್ಲಿ ಸಿಗುವ ಸಾಮಾನ್ಯ ವಸ್ತುಗಳನ್ನು ಉಪಯೊಗಿಸುವುದಕ್ಕಿಂತ ಮುಂಚೆ ಒಂದುಕಡೆ ದಾಖಲಿಸುವ ಯತ್ನ ನಡೆದಿದ್ದು ಆ ಸಮಯದಲ್ಲೇ ಯಾಕೆಂದರೆ ತಿನ್ನದೆ ಇರುವ, ತಿನ್ನುವ ವಸ್ತು ಜಾನಪದೀಯ ಪರೀಕ್ಷೆಗಳು ನಡೆದಿದ್ದು ಮತ್ತು ಔಷದಿಗಳನ್ನು ಕಂಡುಕೊಂಡು, ಪೂರ್ವಿಕರು ಪ್ರಯೋಗಿಸಿ ಔಷದಿ ತಯಾರಿಸಿದ ಬರಹವನ್ನು ದಾಖಲಿಸಿದ ಆ ಗ್ರಂಥಗಳೇ ಮೊದಲು ತಯಾರಾದ ಗ್ರಂಥ ಎಂದು ಹೇಳಬಹುದಾಗಿದೆ.

ಬರೆದ ಪ್ರತಿಗಳನ್ನು ಒಂದು ಕಡೆ ಸಂರಕ್ಷಿಸಿ ಇಟ್ಟಾಗ ಮುಂದಿನ ಪೀಳಿಗೆಯವರು ಅದನ್ನೆ ಪ್ರಯೋಗಿಸಿ, ಮುಂದುವರೆಸಿಕೊಂಡು ಬಂದು ಉಂಟು, ಹಾಗೆಯೇ ಮುಂದುವರೆದು ಬರೆಯುವುದೇ ಅವರಿಗೆ ಕಾಯಕವಾಗಿದ್ದು ಗ್ರಂಥಗಳನ್ನು ಸಹ ತಯಾರಿಸುತ್ತಿದ್ದರು. ಕಥೆಗಳು, ಹಾಡುಗಳು, ಸಂಪ್ರದಾಯಗಳು, ಗ್ರಂಥಗಳ ರೂಪದಲ್ಲಿ ರಚಿತವಾಗಿ ಮುಂದೆ ಗ್ರಂಥ ಎನ್ನುವಂತಹ ದಾಖಲೆಯ ಬರಹಗಳು ಯಥೇಚ್ಚವಾಗಿ ಸೃಷ್ಟಿಯಾದವು. ಗ್ರಂಥಗಳು ಯಾವಾಗ ರೂಪಗೊಂಡವೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಕೆಲವು ಉಲ್ಲೇಖವಾಗಿರುವಂತೆ ವೇದ, ಶಾಸ್ತ್ರ, ಉಪನಿಷತ್‌ಗಳ ಉಗಮದೊಂದಿಗೆ ಗ್ರಂಥ ಎನ್ನುವಂತಹದ್ದು ಉಗಮವಾಗಿದೆ.

ಈ ಮೊದಲಿಗೆ ದಾರ್ಶನಿಕರು ತಯಾರಿಸಿದ್ದು ವೇದ ಉಪನಿಷತ್ತಾಗಿರುವುದರಿಂದ ಭಗವದ್ಗೀತೆಯನ್ನು ಸಹ ಹೆಸರಿಸಬಹುದು. ಮಹಾಭಾರತ, ರಾಮಾಯಣಗಳ ಕಾಲದಲ್ಲಿ ಮಹಾಪುರುಷರು ಸೃಷ್ಠಿಸಿದ ವಾಕ್ಯಗಳನ್ನು ಮುಂದು ಮಾಡಿ ನಂತರದ ಸಾಹಿತ್ಯಗಳು, ಶಾಸ್ತ್ರ, ಪುರಾಣಗಳು ರಚನೆಯಾದವೆಂದು, ಅದು ಹಾಗೆಯೇ ಬೆಳೆದು ಇತಿಹಾಸ, ಪುರಾಣ, ಸಾಹಿತ್ಯಗಳಂತಹ ಗ್ರಂಥಗಳಿಗೆ ಮಾರ್ಗದರ್ಶನವಾಗಿದ್ದವು.

2.1. ಸಂಶೋಧನ ಗ್ರಂಥ ಎಂದರೇನು ?

ಸಂಶೋಧನ ಗ್ರಂಥ ಎಂದರೇನು? ಎನ್ನುವ ಪದಕ್ಕೆ ಸರಿಯಾದ ಉತ್ತರ ಹುಡುಕುವುದು ಕಷ್ಟವಾದರು ಕೆಲವು ಅಂಶಗಳ ಮೂಲಕ ಹೇಳುವುದಾದರೆ, ಇತಿಹಾಸ ಮತ್ತು ಪಾರಂಪರಿಕ ಬರಹಗಳನ್ನು ಮುಂದಿನ ಪೀಳಿಗೆಗಾಗಿ ತೋರಿಸುವ ದಾಖಲೆಯನ್ನು 'ಗ್ರಂಥ' ಎಂದು ಕರೆಯುತ್ತೇವೆ. ನಮ್ಮ ಹಿಂದಿನ ಪೀಳಿಗೆಯ ಜನರು ಹೀಗೆ ಇದ್ದರೆಂದು ತಿಳಿಯಲು ನಮಗೆ ಸಿಗುವಂತಹ ಮೂಲ ದಾಖಲೆಯ ಬರಹವನ್ನು ಆದಾರವಾಗಿಟ್ಟುಕೊಂಡು ಅದನ್ನ ಅನುಸರಿಸುತ್ತ ಮುಂದಿನದನ್ನು ಒಳಗೊಳ್ಳುತ್ತ ಮುಂದೆ ಸಾಗುವುದು ಈ ದಾಖಲೆಯ ಕಾರ್ಯವಾಗಿದೆ.

ಗ್ರಂಥ ಎನ್ನುವ ಪದಕ್ಕೆ ವಿವಿಧ ವಿದ್ವಾಂಸರುಗಳು ಗುರುತಿಸಿರುವಂತೆ ಗ್ರಂಥಭಂಡಾರ, ಗ್ರಂಥಸಂಪಾದನೆ, ಗ್ರಂಥಶೋಧನೆ, ಗ್ರಂಥೋದ್ಯಮ ಎಂದು ಮುಂತಾದ ಹೆಸರುಗಳಿಂದ ಗುರುತಿಸಿದ್ದಾರೆ. ಗ್ರಂಥ ಎನ್ನುವ ಪದವು ಪ್ರಾಚೀನ ಮೂಲ ದಾಖಲೆಗಳಾಗಿದ್ದು. ಕೆಲವು ಗ್ರಂಥ ಎನ್ನುವ ಪದವನ್ನು ಮುಂದಿಟ್ಟುಕೊಂಡು ಸೃಷ್ಟಿಯಾದ ಪದಗಳಾಗಿವೆ. ಗ್ರಂಥವನ್ನು ಮೊದಲು ಸರಸ್ವತಿ ಭಂಡಾರ ಎಂದು ಕರೆಯುತ್ತಿದ್ದರು. ಗ್ರಂಥ ಎನ್ನುವ ಪದಕ್ಕೆ "ಬರೆದ ಓಲೆಯ ಕಟ್ಟು, ಕವಿರಚಿಸಿದ ಪುಸ್ತಕ"5 ಎಂದು ಟಿ.ವಿ. ವೆಂಕಟಾಚಲಶಾಸ್ತ್ರೀಯವರು ವ್ಯಾಖ್ಯಾನಿಸಿದ್ದಾರೆ, ಹಿಂದಿನ ಕಾಲದಲ್ಲಿ ಹಸ್ತಪ್ರತಿಗಳಿಂದ ತಯಾರಿಸಿದ ಪ್ರತಿಗಳನ್ನು ಒಂದು ಕಟ್ಟಿಗೆ ಕಟ್ಟಿ ಇಡುತ್ತಿದ್ದರು ಅದರಲ್ಲಿ ಸುಮಾರು ನೂರರ ಮೆಲ್ಪಟ್ಟು ಓಲೆಗರಿಗಳಿರುತ್ತಿದ್ದವು ಅಂತಹ ಕೂಡಿಟ್ಟ ಕಟ್ಟಿಗೆ ಒಂದು ಕಟ್ಟು ಎಂದು ಕರೆಯುತ್ತಿದ್ದರು, ಹಾಗಾದರೆ ಗ್ರಂಥ ಎನ್ನುವುದು ಕೂಡಿಟ್ಟ ಬರಹ ಎನ್ನುವ ಅರ್ಥದಲ್ಲಿ ಗುರುತಿಸಬಹುದು. ಕವಿಗಳು ಹಸ್ತಪ್ರತಿಗಳಲ್ಲಿ ತನ್ನ ಭಾವನೆಗಳ ಸಾಹಿತ್ಯವನ್ನು ಬರಹದ ಮೂಲಕ ಹಿಡಿದಿಡುತ್ತಿದ್ದರು, ಅವುಗಳನ್ನು ಒಂದು ಕಡೆ ಕೂಡಿಡುತ್ತಿದ್ದು ಇದಕ್ಕೆ 'ಸರಸ್ವತಿ ಭಂಡಾರ' ಎಂದು ಕರೆದರು.

ಕಾಲಕ್ರಮೇಣ 'ಗ್ರಂಥ' ಎನ್ನುವ ಪದ ಉತ್ಪತ್ತಿಯಾಗಿ ಬಳಕೆಗೆ ಬಂದಿದೆ. ಅರವಿಂದಸುಗುರ ರವರ ಕನ್ನಡ-ಕನ್ನಡ ಶಬ್ದರ್ಥಕೋಶದಲ್ಲಿ "ಗ್ರಂಥ ಎನ್ನುವ ಪದಕ್ಕೆ ಸಂಪತ್ತು, ದಾನ, ಕಟ್ಟುವಿಕೆ, ಗದ್ಯ ಇಲ್ಲವೇ ಪದ್ಯ ಬರಹ" ಎಂದು ವ್ಯಾಖ್ಯಾನಿಸಿದ್ದಾರೆ. ಗ್ರಂಥಗಳನ್ನು ಹಿಂದೆ ಲಕ್ಷ್ಮಿ ಅದೃಷ್ಟ ಎನ್ನುವ ರೀತಿಯಲ್ಲಿ ಕಾಪಾಡಿಕೊಂಡು ಬರುತ್ತಿದ್ದರು. ಇದು ಗಂದ್ ಗ್ರಂಥ ಎನ್ನುವ ಮೂಲ ಪದವಾದ್ದರಿಂದ ಗಂಧವನ್ನು ಅರೆದು ಭಂಡಾರಗಳಲ್ಲಿ ಇಟ್ಟು ದಾನ ಮಾಡುತ್ತಿದ್ದರು. ಅದ್ದರಿಂದ ಗಂಧದ ರೀತಿಯಲ್ಲಿ ಗ್ರಂಥಗಳನ್ನು ದಾನ ಮಾಡುತ್ತಿದ್ದರೆಂದು ಹೇಳಬಹುದು. ಗಂಧ ಬೆಲೆ ಬಾಳುವ ವಸ್ತುವಾದ್ದರಿಂದ 'ಸಂಪತ್ತು' ಎನ್ನುವ ಅರ್ಥದಲ್ಲಿ ಬಳಸಲಾಗಿದೆ. ಗ್ರಂಥ ಅದಕ್ಕೆ ಸರಿಸಮಾವಾದ ಪದವಾಗಿದ್ದು ಆಸ್ತಿಗಳ ರೀತಿಯಲ್ಲಿ ಕಾಪಾಡಿಕೊಂಡು ಬರುತ್ತಿದ್ದರು. ಹೆಚ್ಚಾಗಿ ಮಠಗಳಲ್ಲೋ, ದೇವಸ್ಥಾನಗಳಲ್ಲೊ, ಸುರಕ್ಷಿತವಾಗಿಡುತ್ತಿದ್ದರು.

---

5. ಟಿ. ವಿ. ವೆಂಕಟಚಾಲಶಾಸ್ತ್ರಿ – ಗ್ರಂಥ ಸಂಪಾದನಾ ಪಾರಿಭಾಷಾಕೋಶ – ಪುಟ. 13

"ಗ್ರಂಥಗಳು ಜ್ಞಾನದ ಭಂಡಾರಗಳು"6 ಎಂದು ಹೇಳುವಂತೆ ಒಂದು ಗ್ರಂಥ ತಯಾರಿಸಿದವನು ಅತ್ಯಂತ ಶ್ರೇಷ್ಠ ಜ್ಞಾನಿ ಎಂದು ಗೌರವಿಸುತ್ತಿದ್ದರು. ಗ್ರಂಥಗಳ ಸಂಗ್ರಹವೇ ಉದ್ಯೋಗ ಎನ್ನುವಂತೆ ಆನೇಕ ಗ್ರಂಥಗಳನ್ನು ಸಂಗ್ರಹಿಸಿದ್ದು ಉಂಟು. ಬರಹ ಹೆಜ್ಜಾದಂತೆ 'ಗ್ರಂಥ' ವನ್ನ ಪುಸ್ತಕ, ಪತ್ಯ ಎನ್ನುವ ಅರ್ಥಗಳಲ್ಲಿ ಕರೆಯುತ್ತಿದ್ದು, ಆದರೆ ಗ್ರಂಥವನ್ನು ಪುಸ್ತಕ ಎನ್ನುವ ಅರ್ಥದಲ್ಲಿ ಗ್ರಹಿಸಿದರೆ ಸರಿಯಾದ ಹಿಡಿತಕ್ಕೆ, ಅರ್ಥಕ್ಕೆ ಸಿಗುವುದಿಲ್ಲ ಎನ್ನುವುದು ನನ್ನ ಭಾವನೆ. ಪುಸ್ತಕ ಎನ್ನುವುದು ಸಣ್ಣತನವಾಗಿ ಕಾಣಬಹುದು ಮತ್ತು ಗ್ರಂಥ ಎನ್ನುವ ಅರ್ಥಕ್ಕೆ ಹೊಂದಿಕೆಯಾಗುವುದಿಲ್ಲವಾದ್ದರಿಂದ ಗ್ರಂಥ ಎನ್ನುವುದು ಮಹಾಕಾವ್ಯದಷ್ಟೆ ದೊಡ್ಡದೆಂದು ಹೇಳಬಹುದು. ಕಾವ್ಯಕ್ಕೂ, ಮಹಾಕಾವ್ಯಕ್ಕೂ ಇರುವ ವ್ಯತ್ಯಾಸದಂತೆ ಪುಸ್ತಕಕ್ಕೂ, ಗ್ರಂಥಕ್ಕು ವ್ಯತ್ಯಾಸಗಳಿರುವುದುಂಟು. ಮಹಾಕಾವ್ಯದ ಲಕ್ಷಣದಷ್ಟೆ ಗ್ರಂಥಕ್ಕೆ ಲಕ್ಷಣಗಳನ್ನು ಗುರುತಿಸಬಹುದು.

ಸಾಮಾನ್ಯವಾಗಿ ಒಂದು ಸೀಮಿತವಲ್ಲದ ಪುಟಗಳಿಗೆ ಗ್ರಂಥ ಎಂದರೆ ಬಹುಶಃ ಅದು ಸರಿಯಾದ ಅರ್ಥ ನೀಡುವುದಿಲ್ಲ ಯಾಕೆಂದರೆ, ಒಂದು ಪುಸ್ತಕವಿಟ್ಟು 'ಗ್ರಂಥಾಲಯ'ವೆಂದು ಕರೆದರೆ ಅದು ಗ್ರಂಥಾಲಯ ಎನಿಸಿಕೊಳ್ಳುತ್ತದೆಯೇ? ಒಂದು ಗ್ರಂಥವನಿಟ್ಟು 'ಗ್ರಂಥಭಂಡಾರ' ಎಂದರೆ ಗ್ರಂಥ ಭಂಡಾರವಾಗುತ್ತದೆಯೆ? ಹೀಗೆ ಗ್ರಂಥ ಎನ್ನುವ ಪದ ಸಂಕುಚಿತ ಅರ್ಥವನ್ನು ನೀಡದೆ ವಿಸ್ತಾರವಾದ ಅರ್ಥವನ್ನು ನೀಡುತ್ತದೆ.

ಉದಾಹರಣೆಗೆ:- ಒಬ್ಬ ರಾಜನಿಗೆ ಒಬ್ಬಿಬ್ಬರು ಸೈನಿಕರು ಒಬ್ಬ ಮಂತ್ರಿ ಇದ್ದರೆ ಸಾಕಾಗುವುದೇ?

ಅವುಗಳಿಗೆ ಇರು ಮಿತಿಗಳಂತೆ ಗ್ರಂಥ ಎನ್ನುವ ಪದಕ್ಕೆ ಇಂತಿಷ್ಟು ಪುಟಗಳವರೆಗೆ ಎಂಬ ಮೀಸಲಾತಿ ಇರಲೇ ಬೇಕಾಗುತ್ತದೆ. ಅನೇಕ ಹಸ್ತಪ್ರತಿಗಳನ್ನು ಕೂಡಿಟ್ಟು ಅವು ಒಂದರಿಂದ ನೂರಾರು ಗರಿಗಳನ್ನು ಕಟ್ಟಿದ ಕಟ್ಟಿಗೆ ಒಂದು ಕಟ್ಟು ಎಂದು ಕರೆಯುವುದಾದರೆ, ಸಂಶೋಧಕನ ಯಾವುದೇ ಲೇಖನ ಪ್ರತಿಯಾಗಿರಲಿ ಅದು ಆತನಿಂದ ಹಿಡಿದಿಟ್ಟ ವಿಷಯಗಳ, ಸಂಕೇತಗಳ ಮಿತಿಯಲ್ಲಿದ್ದು ಅಂಥ ಅನೇಕ ಸಂಶೋಧನಾ ಲೇಖನಗಳನ್ನು ಒಂದುಗೂಡಿಸಿ ಒಂದು ಗ್ರಂಥವಾಗಿ ಮುದ್ರಣಮಾಡುತ್ತಾರೆ. ಸಂಶೋಧನೆಗೂ ಮತ್ತು ಗ್ರಂಥಕ್ಕೂ ಒಂದಕ್ಕೊಂದು ಸಂಬಂಧವಿದೆ. ಸಂಶೋಧಕ ಮೊದಲು ಟಿಪ್ಪಣಿ ರೂಪದಲ್ಲಿ ಬರೆದುಕೊಳ್ಳುತ್ತಾನೆ. ನಂತರ ಅದನ್ನು ಒಂದು ಕಡೆ ಸಂಗ್ರಹಿಸಿ ತನ್ನ ಶೋಧನೆಯ ವಿಷಯದ ಭಾವನೆಗಳನ್ನು ಪರೀಕ್ಷಿಸಿ ಶೋಧಿಸಿದ್ದನ್ನು ಕಟ್ಟಿಕೊಡುತ್ತಾನೆ. ಅದು ಗ್ರಂಥದ ರೂಪದಲ್ಲಿ ಹೊರಬರುತ್ತದೆ. ಪ್ರತಿಗಳನ್ನು ಕೂಡಿಟ್ಟಿದ್ದು, ಶೋಧನೆಯಲ್ಲಿ ಹಿಡಿದಿಟ್ಟಿದ್ದನ್ನು ಗ್ರಂಥ ಎಂದು ಕರೆಯುತ್ತಾರೆ. ಸರ್ಚ್ ಎನ್ನುವುದು ಶೋಧನೆ ಎನ್ನುವ ಅರ್ಥವನ್ನು ಬಿಂಬಿಸಿದರೆ ರಿಸರ್ಚ್ ಪುನಃ ಶೋಧಿಸು, ಸಂಶೋಧಿಸು, ಶುದ್ಧಮಾಡು ಎಂದು ಅರ್ಥೈಸುತ್ತದೆ.

---

6. ಡಾ. ಸಂಗಮೇಶ ಸವದತ್ತಿ ಮಠ – ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ. – ಪುಟ.

ಸಂಶೋಧನೆಗೂ, ಗ್ರಂಥಕ್ಕೂ ಸಂಬಂಧವಿರುವುದರಿಂದ ಹಿಡಿದಿಡು, ಕೂಡಿಡು ಎನ್ನುವ ಪದ ಇಂಗ್ಲೀಷಿನ 'ಆಕ್ಯೂಮಿಲೇಟ್' ಎಂಬ ಪದದಿಂದ ಬಂದಿದೆ. ಇದರ ಮೂಲ 'ಅಕ್ಟವೋ' ಎನ್ನುವುದರಿಂದ ಸೃಷ್ಟಿಗೊಂಡಿದೆ. 'ಅಕ್ಟವೋ' ಎಂದರೆ 'ಮಡಿಕೆಯಾಕಾರದ ಕಾಗದ' ಅಥವಾ 'ಅಷ್ಟಪತ್ರ' ಎಂದು ಗುರುತಿಸಬಹುದು. ಮರದ ಅಥವಾ ಇನ್ನಿತರ ವಸ್ತುಗಳಿಂದ ತಯಾರಿಸಿದ ಕಾಗದವನ್ನು ಬರವಣಿಗೆ ಮುಗಿದ ನಂತರ ಸಣ್ಣಸಣ್ಣಗೆ ಮಡಚಿ ಇಡುತ್ತಿದ್ದರು. ಇದೇ ಒಂದು ಗ್ರಂಥವಾಗಿ ಮುಂದೆ ಅನೇಕ ಮಡಿಕೆಗಳನ್ನು ಒಳಗೊಂಡಂತೆ ತಯಾರಿಸಿ ಗ್ರಂಥಗಳಾಕಾರದಲ್ಲಿ ಇಡುತ್ತಿದ್ದರು. ಹಾಗಿನ್ನೂ ಕಾಗದದ ಬಳಕೆ ಬಂದಿರಲಿಲ್ಲ. ಶುದ್ಧಗೊಳಿಸಿದ್ದನ್ನು ಬರವಣಿಗೆಯ ಮೂಲಕ ಕೊರೆದು ಒಂದು ಕಡೆ ಹಿಡಿದಿಡುವ, ಕೂಡಿಡುವ ಬರಹಕ್ಕೆ ಗ್ರಂಥವೆಂದು ಕರೆಯುತ್ತೇವೆ.

ಉದಾಹರಣೆಗೆ:– ಎಂ.ಎಂ.ಕಲ್ಬುರ್ಗಿಯವರ 'ಮಾರ್ಗ ಸಂಪುಟ'
ಚಿದಾನಂದ ಮೂರ್ತಿಯವರ 'ಹೊಸತು ಹೊಸತು'
ಶಂಬಾ ಜೋಷಿಯವರ 'ಸಂಪುಟಗಳು'

ಈ ರೀತಿಯ ಗ್ರಂಥಗಳನ್ನು ಅನೇಕ ರೀತಿಯಲ್ಲಿ ವಿಂಗಡಿಸಲಾಗಿದೆ. ಭಾಷಾತ್ಮಕ ಗ್ರಂಥಗಳು ಸಾಹಿತ್ಯಕ ಗ್ರಂಥಗಳು, ಸಂಶೋಧನಾ ಗ್ರಂಥಗಳು, ಧಾರ್ಮಿಕ ಗ್ರಂಥಗಳು, ಸಾಂಸ್ಕೃತಿಕ ಗ್ರಂಥಗಳು, ವೈಜ್ಞಾನಿಕ ಗ್ರಂಥಗಳು ಎಂದು ವಿವಿಧ ರೀತಿಯಲ್ಲಿ ಗ್ರಂಥಗಳ ಪಟ್ಟಿಯನ್ನು ನೀಡಬಹುದಾಗಿದೆ. ಹಾಗೆಯೇ ಗ್ರಂಥಕರ್ತೃ, ಗ್ರಂಥರಾಶಿ, ಗ್ರಂಥಶೀಲ ಎಂದು ವಿವಿಧ ಹೆಸರುಗಳಿಂದ ಗ್ರಂಥ ಎನ್ನುವ ಪದ ಜೋಡಿಸಿ ಕರೆಯುವುದು ರೂಢಿಯಲ್ಲಿದೆ. ಗ್ರಂಥಗಳು ಇಂದು ಸರಪಳಿಯ ರೀತಿಯಲ್ಲಿ ಸೃಷ್ಟಿಯಾಗಿವೆ. ಒಂದಕ್ಕೊಂದು ಹಳೆಯ ಬಣ್ಣವನ್ನು ಜೋಡಿಸಿಕೊಂಡು ಹೊಸ ಹೊಳಪನ್ನು ಪಡೆಯುವಂತಹ ಬಗೆಯಲ್ಲಿವೆ.

ತನ್ನ ಮನಸ್ಸನ್ನು ಶೋಧಿಸಿದ್ದಾಗ ಕಾದಂಬರಿಯೋ, ಕಥೆಯೋ, ಕಾವ್ಯವೋ, ನಾಟಕವೋ ಸೃಷ್ಟಿಯಾಗುತ್ತದೆ. ಒಂದು ಗ್ರಂಥವನ್ನು ಶೋಧಿಸಿ ತಪ್ಪು ಒಪ್ಪುಗಳನ್ನು ಕಂಡುಹಿಡಿದರೆ ಸಂಶೋಧನೆಯಾಗುತ್ತದೆ. ಸಂಶೋಧಕನನ್ನು ಮುನ್ನಡೆಸುವ ಮಾರ್ಗದರ್ಶನ ನೀಡುವ ಅಂಶವೇ ಗ್ರಂಥವಾಗಿದೆ. ಪ್ರತಿಯೊಬ್ಬ ಸಂಶೋಧಕನು ತನ್ನ ವಿಷಯಗಳಿಗೆ ಪೂರಕವಾಗಿ ಸಿಗುವ ಗ್ರಂಥಗಳನ್ನು ಅಭ್ಯಾಸ ನಡೆಸಿ ಮುಂದಿನ ಬರಹವನ್ನು ರಚಿಸುತ್ತಾನೆ. "ಮನುಷ್ಯನ ಜ್ಞಾನ ಕ್ಷೇತ್ರದ ಯಾವುದೇ ಮಾಹಿತಿಯಾಗಿರಲಿ, ದಾಖಲೆಗೊಳ್ಳುವುದು ಗ್ರಂಥಗಳಲ್ಲಿ" ಎಂದು ಸವದತ್ತಿ ಮಠರವರು ಹೇಳಿರುವಂತೆ. ಮನುಷ್ಯನ ಯಾವುದೇ ವಿಷಯದ ಮಾಹಿತಿಯಾದರೂ ಗ್ರಂಥಗಳು ತಿಳಿಸುತ್ತವೆ. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಸಂಪರ್ಕವನ್ನು ಹೊಂದಿರುವುದು ಗ್ರಂಥದ ಮಹತ್ವವಾಗಿದೆ. ಅನಕ್ಷರಸ್ಥನು ನೋಡಿದೊಡನೆ ಇದು ಗ್ರಂಥ ಇದನ್ನು ಹಾಳು ಮಾಡಬಾರದೆಂಬ ಬುದ್ಧಿಯನ್ನು ಅದನ್ನು ನೋಡಿದಾಕ್ಷಣ ತಿಳಿಯುತ್ತಾನೆ. ಯಾಕೆಂದರೆ 'ಮಾನವನನ್ನು ಪ್ರತಿಮಾನವನನ್ನಾಗಿ ರೂಪಿಸುವುದು ಗ್ರಂಥ.

ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಗ್ರಂಥಗಳು ಸಾಹಿತ್ಯದಲ್ಲಿ ರಚನೆಯಾಗಿವೆ. ಮುದ್ರಣ ಬಂದಾಗಿನಿಂದ ಗ್ರಂಥಗಳ ರಾಶಿಯನ್ನು ಸೃಷ್ಟಿಸಿದ ಕಣಜವಾಗಿ ಕನ್ನಡ ಭಾಷೆ ಕಂಡುಬರುತ್ತದೆ. ಇಂದು ಸಾಮಾನ್ಯವಾಗಿ ಸಣ್ಣಪುಟ್ಟ ಪುಸ್ತಕಗಳೇ ರಚನೆಯಾಗುತ್ತಿದ್ದು ಗ್ರಂಥಗಳ ರಚನೆಯೂ ಸಾಕಷ್ಟು ಹೆಚ್ಚುತ್ತಿದೆ.

ಒಟ್ಟಿನಲ್ಲಿ ಗ್ರಂಥ ಎನ್ನುವಂಥಹದ್ದು ಮನುಷ್ಯನ ಶೋಧನೆಯನ್ನು ಒಳಗೊಂಡು ನಿಂತಿರುವಂತದ್ದು. ಮನುಷ್ಯನ ಶೋಧನೆ ಯಾವುದೇ ರೀತಿಯದ್ದಾದರೂ ಬರವಣಿಗೆಯನ್ನು ಕೂಡಿಡುವ, ಹಿಡಿದಿಡುವ ಅಂಶಕ್ಕೆ ಗ್ರಂಥ ಎಂದು ಕರೆಯಲಾಗಿದೆ. ಗ್ರಂಥಕ್ಕೂ, ಸಂಶೋಧನೆಗೂ ನಿಕಟ ಸಂಬಂಧವಿದ್ದು ಒಂದಕ್ಕೊಂದು ಪೂರಕವಾಗಿ ಸಂಶೋಧನೆಯೆಂದರೆ ಗ್ರಂಥ ರಚನೆ ಎನ್ನುವಷ್ಟರ ಮಟ್ಟಿಗೆ ಬೆಳೆದು ನಿಂತಿವೆ.

ಬರವಣಿಗೆಯ ರೂಪದಲ್ಲಿದ್ದ ಪ್ರತಿಗಳನ್ನು ಬರೆದ ಮೇಲೆ ಸುರಕ್ಷಿತವಾಗಿ ಒಂದು ಕಡೆ ಇಡುತ್ತಿದ್ದರು. ಅದು ನೂರಾರು ಪ್ರತಿಗಳಾದಾಗ ಅದನ್ನು ಕಟ್ಟಿ ಒಂದು ಕಟ್ಟು ಎನ್ನುವ ಅರ್ಥದಲ್ಲಿ ಕೂಡಿಟ್ಟಿದೇ ಗ್ರಂಥ ಎನ್ನುವ ಅರ್ಥ ಬಂದಿರಬೇಕು, ಪ್ರತಿಯ ರೂಪದಲ್ಲಿದ್ದ ಗ್ರಂಥಗಳನ್ನು ದಾನ ಮಾಡುತ್ತಿದ್ದಾಗ ಆಶ್ಚರ್ಯದಿಂದ ಜನರು ಏನೆಂದು ಕೇಳಿದಾಗ ಪಂಡಿತರು, ಕವಿಗಳು ಗ್ರಂಥ ಎಂದು ಉಚ್ಚರಿಸಿರಬೇಕು ಇದು ಗ್ರಂಥ ಎನ್ನುವುದಕ್ಕಿಂತ ಹೆಚ್ಚಾಗಿ ಲಕ್ಷ್ಮಿ, ಸರಸ್ವತಿ ಎನ್ನುವ ಅಂಶದಿಂದ ಜನರ ಮನಸ್ಸಿನಲ್ಲಿ ಇವುಗಳು ಉಳಿದುಕೊಂಡು ಬಂದಿರಬೇಕು. ಮನುಷ್ಯನ ಬದುಕಿನ ದಿನನಿತ್ಯ ಚರಿತ್ರೆಯ ದಾಖಲೆಗಳನ್ನ ಕಟ್ಟಿ ಕೊಡುವಂತವು ಗ್ರಂಥವಾಗಿವೆ.

ಗಾತ ಎನ್ನುವಂತ ಶಬ್ದದಿಂಥ ಗ್ರಂಥ ಎನ್ನುವ ಶಬ್ದ ಬಂದಿರಬೇಕು ಗಾತ > ಗ್ರಾತ, ಗ್ರಥ ಗ್ರಂಥ ಎಂದು ಉನ್ನತವಾಗಿ ಕರೆದಿದ್ದರೆ ಗ್ರಂಥಕ್ಕೆ ಮೂಲ ಹಸ್ತಪ್ರತಿ, ಇದಾದ ನಂತರ ಆಧುನಿಕ ಯುಗದಲ್ಲಿ ಹಸ್ತಪ್ರತಿ ಎಂಬ ಹೆಸರು ನಿಂತು ಕಾಗದ ಬಳಕೆಗೆ ಬಂದವು. ಗ್ರಂಥ ಎನ್ನುವ ಪದಮಾತ್ರ ಹಾಗೆಯೇ ಉಳಿದು ಬಂದಿದೆ. ಕಾಗದ ಎನ್ನುವ ಪದವನ್ನು ಕಾಗಜ, ಕಡತ ಎನ್ನುವ ಹೆಸರಿಂದ ಕರೆಯುತ್ತಾರೆ.

2.2. ನವೋದಯ ಪೂರ್ವ ಬೆಳೆವಣಿಗೆ

ಕನ್ನಡ ಸಂಶೋಧನೆ ಆರಂಭವಾದ ಎಷ್ಟೋವರ್ಷಗಳ ಕಾಲದ ನಂತರ ಸಂಶೋಧನೆ ಎಂದರೇನು? ಎನ್ನುವ ನಿಖರವಾದ ಮಾಹಿತಿ ಇಲ್ಲವಾದರೂ, ಕರ್ನಾಟಕದಲ್ಲಿ ಅಳಿದುಳಿದ ರಾಜಮನೆತನಗಳಿಂದ ಇತಿಹಾಸ ಪೂರ್ವಭಾವಿ ಸಂಗ್ರಹ ಸಂಶೋಧನ ಕಾರ್ಯ, ಸಂಶೋಧನ ಕಾರ್ಯಗಳನ್ನು ಪಾಶ್ಚಿಮಾತ್ಯರು ಮಾಡಿದರು. ಪಾಶ್ಚಿಮಾತ್ಯರ ಆಗಮನದೊಂದಿಗೆ ಭಾರತಕ್ಕೆ ಮುದ್ರಣ ಯಂತ್ರ ಬರಲು ಸಾಧ್ಯವಾಯಿತು. ಅಲ್ಲಿಯವರೆಗೂ ಯಾವುದೇ ರೀತಿಯ ಅಚ್ಚು ಗ್ರಂಥಗಳು ಇರಲಿಲ್ಲ. ಪೋರ್ಚುಗೀಸ್ ಪಾದ್ರಿಗಳು ಝೇವಿಯರ್ ವಿರಚಿತ 'ಡಾಟ್ರಿನ ಕ್ರಿಸ್ತ' ಗ್ರಂಥವನ್ನು ಕ್ರಿ.ಶ. 1557ರಲ್ಲಿ ಮುದ್ರಿಸಿದರು. ಇದುವೇ ಮೊದಲ ಗ್ರಂಥ.

ಧರ್ಮಪ್ರಚಾರಕ್ಕೆಂದು ಬಂದ ಕ್ರೈಸ್ತ ಮಿಷನರಿಗಳು ತಮ್ಮ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸುತ್ತಿದ್ದು ಅದನ್ನು ಜನರಿಗೆ ಸರಳವಾಗಿ ಭೋಧಿಸುತ್ತಿದ್ದರು. ಉದ್ಯೋಗ ಅರಸಿ ಬಂದವರಿಗೆ ಸ್ವಾಗತಿಸಿದ್ದು ಇಲ್ಲಿನ ಇತಿಹಾಸ ಹೊಂದಿರುವ ವಸ್ತುಗಳು. ಪಾಶ್ಚಿಮಾತ್ಯರು ಆ ವಸ್ತುಗಳನ್ನು ಸಂಗ್ರಹಿಸಿ ಸಂಶೋಧನೆಗೆ ತೊಡಗಿದರು. ಮೊದಲು ಮುದ್ರಣಗೊಂಡಂತಹ ಗ್ರಂಥ ರೂಪಗಳೆಂದರೆ ಶಬ್ದಕೋಶಗಳು, ಅನುವಾದಗ್ರಂಥಗಳು, ಬಳ್ಳಾರಿ, ಬೆಂಗಳೂರು, ಮಂಗಳೂರುಗಳಲ್ಲಿ, ಮುದ್ರಣಯಂತ್ರಗಳು ಬಂದ ಮೇಲೆ ಕನ್ನಡ ಅಚ್ಚುಮಣೆಗಳು ಸಿದ್ಧಗೊಂಡು ಸಂಶೋಧನೆ ಲೇಖನಗಳು ಪ್ರಕಟಗೊಂಡವು.

"ಸಂಶೋಧನೆ ಎಂದಿನಿಂದ ಆರಂಭವಾಯಿತು ಎಂಬುದು ನಿಖರವಾಗಿ ತಿಳಿದಿಲ್ಲ. ಕ್ರಿ.ಶ.1784ರಲ್ಲಿ ಸ್ಥಾಪಿತವಾದ ರಾಯಲ್ ಏಷ್ಯಾಟಿಕ್ ಸೊಸೈಟಿಯ ಚಟುವಟಿಕೆಗಳೇ ಆ ಸಂಸ್ಥೆಯ ಏಷ್ಯಾಟಿಕ್ ರಿಸರ್ಚಸ್ ಹಾಗೂ ಜರ್ನಲ್ ಆಫ್ ರಾಯಲ್ ಏಷ್ಯಾಟಿಕ್ ಸೊಸೈಟಿಯ ಪತ್ರಿಕೆಗಳೇ ಕರ್ಣಾಟಕದ ಸಂಶೋಧನೆಗೆ ಕನ್ನಡಭಾಷೆ–ಸಾಹಿತ್ಯಗಳ ಶೋಧಗಳಿಗೆ ವೇದಿಕೆಯಾದವು."7 ಎಂದು ಸಂಪಾದಕ ತಾರಾನಾಥ್‌ರವರು ಶತಮಾನದ ಸಂಶೋಧನೆ ಗ್ರಂಥದಲ್ಲಿ ಸಂಶೋಧನೆಯ ಪ್ರಾರಂಭವನ್ನು ಗುರುತು ಹಚ್ಚಿದ್ದಾರೆ. ನಿಖರವಾಗಿ ಹೇಳುವುದಾದರೆ ಮನುಷ್ಯನ ಸೃಷ್ಟಿಯ ನಂತರವೇ ಸಂಶೋಧನೆ ಪ್ರಾರಂಭವಾಗಿರಬೇಕು. ಆದರೆ ಸಾಹಿತ್ಯದ ಸಂಶೋಧನೆಯ ಆರಂಭಗಳು ಎಲ್ಲಿ? ಯಾವಾಗ? ಎಂಬುದು ತಿಳಿಯದು, ಪಾಶ್ಚಾತ್ಯರು ಬರುವುದಕ್ಕಿಂತ ಮುಂಚಿತವಾಗಿ ಮೊದಲ ರಾಷ್ಟ್ರಕವಿ ಗೋವಿಂದ ಪೈರವರು ಸಂಶೋಧನಗೆ ತೊಡಗಿದ್ದರೆಂದು ಮತ್ತು ಸಂಶೋಧನೆ ಒಂದು ಸಾಂಸ್ಕೃತಿಕ ಜವಾಬ್ದಾರಿಯಾಗಿತ್ತೆಂದು ಹೇಳಿದ್ದಾರೆ. ಅಂದರೆ 20ನೇ ಶತಮಾನದ ಪೂರ್ವಾರ್ಧದಲ್ಲಿ ಸಂಶೋಧನೆ ಇತ್ತೇಂಬುದು ಅಭಿಪ್ರಾಯವಾಗಿದೆ. 18 ಮತ್ತು 19ನೇ ಶತಮಾನದಲ್ಲಿ ಸಂಶೋಧನೆ ಇದ್ದು ಸ್ವಾತಂತ್ರ್ಯ ಹೋರಾಟದ ಗುಂಗಿನಲ್ಲಿ ಇದಾವುದು ಬೆಳಕಿಗೆ ಬಂದಿಲ್ಲವೆಂದು ನನ್ನ ಅನಿಸಿಕೆ.

7.ಡಾ. ಎನ್, ಎಸ್, ತಾರಾನಾಥ – ಶತಮಾನ ಸಂಶೋಧನೆ – ಪ್ರಾಸ್ತವಿಕ ನುಡಿ.

ಇದುವರೆಗೂ ನಡೆದಿರುವ ಸಂಶೋಧನೆಗಳೆಲ್ಲವೂ ಲೇಖನ ರೂಪದಲ್ಲಿ ಪ್ರಕಟಿತಗೊಂಡು ನಂತರ ಗ್ರಂಥಗಳ ರೂಪದಲ್ಲಿ ಸಂಪುಟಗಳು ರಚನೆಯಾದವು. "ಕ್ರಿ.ಶ.1862ರ ಹೊತ್ತಿಗೆ ಪ್ರಮುಖ ನಗರಗಳಾದ ಕಲ್ಕತ್ತಾ, ಮದ್ರಾಸ್, ಮುಂಬಾಯಿಗಳು ರೈಲು ಮಾರ್ಗದಿಂದ ಜೋಡಿಸಲ್ಪಟ್ಟಿದ್ದವು. ತಂತಿಯ ಸಂಪರ್ಕವೂ ಇದೇ ಸಮಯಕ್ಕೆ ಹಬ್ಬುತ್ತಾ ನಡೆಯಿತು. ಅಂಚೆಯ ವ್ಯವಸ್ಥೆಯಲ್ಲಿ ಸುಧಾರಣೆಗಳಾಗಿದ್ದವು. ಮತ್ತು ಗ್ರಂಥ ಪ್ರಸಾರಕ್ಕೆ ನೆರವಾಗತಕ್ಕ ಬುಕ್ ಪೋಸ್ಟ್ ವ್ಯವಸ್ಥೆಯೂ ಪ್ರಥಮವಾಗಿ ಆಚರಣೆಯಲ್ಲಿ ಬಂದಿತು."8 ವೈಜ್ಞಾನಿಕ ಸಂಶೋಧನೆಗಳು ನಡೆದು ಅನೇಕ ಬದಲಾವಣೆಗಳು ಕರ್ನಾಟಕದಲ್ಲಿ ಕಂಡು ಬಂದವು.

ನವೋದಯ ಪೂರ್ವದ ಕಾಲಘಟ್ಟಗಳಲ್ಲಿ ನಡೆದ ಪ್ರಾಚೀನ ಸಂಶೋಧನಾ ಗ್ರಂಥಗಳು ಶೋಧನೆಯ ಮೊದಲ ಪ್ರಯತ್ನ ಎಂದು ಹೇಳಬಹದು. ಅಂದು ಸಿಗುತ್ತಿದ್ದ ಯಥೇಚ್ಚವಾದ ವಸ್ತುಗಳನ್ನು ಬಳಸಿಕೊಂಡು ಅವುಗಳ ಸಂಶೋಧನೆಯಿಂದ ಇತಿಹಾಸ, ಸಾಹಿತ್ಯ, ಇನ್ನಿತರ ಅಂಶಗಳನ್ನು ಮತ್ತು ಈ ನಾಡಿನ ಸಂಸ್ಕೃತಿಗಳನ್ನು ತಿಳಿಯಲು ಪ್ರಾರಂಭಿಸಿದರು. ಕನ್ನಡ ಸಂಶೋಧನೆಗಳು ಮೊದಲು ಪ್ರಾರಂಭವಾಗಿದ್ದು, ಹೊರದೇಶಗಳಾದ ಲಂಡನ್, ಇಂಗ್ಲೆಂಡ್‌ಗಳಲ್ಲಿ. ಎಲ್.ಡಿ.ಬಾರ್ನೆಟ್ ಮಾರ್ಗದರ್ಶನದೊಂದಿಗೆ ಎಸ್.ನಂದಿಮಠರವರ ಸಂಶೋಧನಾ ಗ್ರಂಥವೇ ಮೊದಲನೆ ಪಿ.ಎಚ್.ಡಿ. ಪದವಿ ಗ್ರಂಥವಾಗಿದೆ.

19ಮತ್ತು 20ನೇಶತಮಾನದ ವೇಳೆಗೆ ಸಂಶೋಧನಾ ಗ್ರಂಥಗಳು ರಚನೆಯಾಗಿದ್ದು ಪಾಶ್ಚಾತ್ಯರಿಂದಲೇ, ಆದರೂ ಎಲ್ಲವೂ ಕನ್ನಡ ಸಂಶೋಧನೆಗಳು. ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವುದರ ಮೂಲಕ ಶೋಧನೆಯನ್ನು ಮುಂದುವರೆಸಿದರು. ಸಂಶೋಧನೆಗಿಂತ ಹೆಚ್ಚಿನದಾಗಿ ಸಾಹಿತ್ಯ ಕಾರ್ಯದ ಗ್ರಂಥಗಳು ಯಥೇಚ್ಚವಾಗಿ ರಚನೆಯಾಗಿದ್ದವು. 20ನೇ ಶತಮಾನದಲ್ಲಿ ನಡೆದ ಎಲ್ಲವೂ ಕವಿ, ಕೃತಿ, ಕಾಲನಿರ್ಣಯಗಳ ಸಂಶೋಧನೆ. ಈ ಸಂದರ್ಭದಲ್ಲಿ ಟೀಕೆ, ಟಿಪ್ಪಣಿಗಳು ರಚನೆಯಾದವು. ಇದಕ್ಕಿಂತ ಮುಂಚಿತವಾಗಿ ಸಂಶೋಧನೆ ಎಂದರೆ ಏನು? ಯಾರು ಸಂಶೋಧಕ? ಲಕ್ಷಣ, ಸ್ವರೂಪ, ಯಾವುದು ಪತ್ರಿಕೆಗಳ ಮೂಲಕ ತಿಳಿದಿರಲಿಲ್ಲ, ಲೇಖನದ ರೂಪದಲ್ಲಿ ಪ್ರಕಟಿಸುವುದು ಇಷ್ಟೇ ಆಗಿತ್ತು.

ಮುಂದೆ ಕನ್ನಡ ವಿದ್ವಾಂಸರು ಸಂಶೋಧನೆಗೆ ತೊಡಗಿ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ಆರ್ ನರಸಿಂಹಚಾರ್ಯರು 'ಕರ್ನಾಟಕ ಕವಿಚರಿತೆ', ಡಿ.ಎಲ್.ನರಸಿಂಹಚಾರ್ಯರ ಗ್ರಂಥಸಂಪಾದನಾಶಾಸ್ತ್ರ, ಆರ್.ವೈ.ಧಾರಾವಾಡಕರ್‌ರವರ 'ಹೊಸಗನ್ನಡಕಾವ್ಯ ಉದಯಕಾಲವಿವೇಚನೆ' ರಂ.ಶ್ರೀ.ಮುಗಳಿಯವರ 'ಕನ್ನಡಸಾಹಿತ್ಯಚರಿತ್ರೆ' ಮುಂತಾದವುಗಳು ಕನ್ನಡ ಸಂಶೋಧನೆಗೆ ದಾರಿದೀಪವಾದವು. ಇದಕ್ಕೂ ಮುಂಚೆ ಗೋವಿಂದ ಪೈರವರು ತಮ್ಮ ಗ್ರಂಥಗಳ ಮೊದಲಿಗೆ ಸಂಶೋಧನೆ ಎಂದರೇನು ಎಂಬುದನ್ನು ತಿಳಿಸಿದ್ದಾರೆ. ನವೋದಯ ಪೂರ್ವದಲ್ಲಿ ನಡೆದುದ್ದೆಲ್ಲವೂ ಪಾಶ್ಚಿಮಾತ್ಯರ ಶೋಧನೆಯ ಗ್ರಂಥಗಳು. ಆಗಿದ್ದರೂ ಇವರ ಜೊತೆಗೆ ಕನ್ನಡದ ಅನೇಕ ವಿದ್ವಾಂಸರುಗಳು ಸಂಶೋಧನೆಯ ಕೆಲಸ ಮಾಡಿದ್ದರು.

---

8. ಶ್ರೀನಿವಾಸ ಹಾವಾನೂರು – ಹೊಸಗನ್ನಡ ಅರುಣೋದಯ – ಪುಟ. 8

ಇವರ ನಂತರ ಅನೇಕ ಕನ್ನಡ ವಿದ್ವಾಂಸರುಗಳೇ ಸಂಶೋಧನೆಯ ಹೊಸದಾರಿಯನ್ನು ಕಂಡು ಹಿಡಿದು ಅನೇಕ ಶಾಸನಗಳು ಹಸ್ತಪ್ರತಿಗಳು, ಗ್ರಂಥಗಳನ್ನು ಸಂಗ್ರಹಿಸಿ ಸಂಶೋಧನೆಗೆ ದಾರಿಹಾಕಿಕೊಟ್ಟರು. ತದನಂತರ ಕೆಲವು ವಿದ್ವಾಂಸರುಗಳಾದ, ಫ.ಗು. ಹಳಕಟ್ಟಿಯವರ 'ವಚನಸಾಹಿತ್ಯಸಂಪುಟ', ಉತ್ತಂಗಿ ಚನ್ನಪ್ಪನವರ 'ಸರ್ವಜ್ಞನ ವಚನಗಳು', ಅಂಬಳೆ ವೆಂಕಟಸುಬ್ಬಯ್ಯನವರ ಕೆಲವು 'ಕನ್ನಡ ಕವಿಗಳ ಜೀವನ ಕಾಲವಿಚಾರ, ಇವರಲ್ಲದೆ ಆರ್.ಸಿ.ಹಿರೇಮಠ, ಬಿ.ಎಂ.ಶ್ರೀ, ಎಂ.ವಿ.ಸೀ, ಬಸವನಾಳ ಕುಂದಣಗಾರ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ ಯಂತಹ ನವೋದಯ ಪೂರ್ವದ ಸಂಶೋಧಕರನ್ನು ಗುರುತಿಸಬಹುದು.

ನವೋದಯ ಪೂರ್ವ ಸಂದರ್ಭದ ಸಂಶೋಧನ ಗ್ರಂಥಗಳು ಹಸ್ತಪ್ರತಿಯಿಂದ ರಚಿತವಾದ ಹಳಗನ್ನಡ ಗ್ರಂಥಗಳಾಗಿದ್ದು, ಆದಿಪುರಾಣ, ಕವಿರಾಜಮಾರ್ಗ, ಕರ್ನಾಟಕಕಾದಂಬರಿ, ಪಂಪರಾಮಾಯಣ ಮಹಾಭಾರತ, ಹರಿಶ್ಚಂದ್ರಕಾವ್ಯಗಳಂತಹ ಗ್ರಂಥಗಳು ರಚಿತವಾಗಿವೆ. ಈ ಸಂದರ್ಭದಲ್ಲಿ ಹೆಚ್ಚಾಗಿ ಧಾರ್ಮಿಕ ಗ್ರಂಥಗಳೇ ಹೆಚ್ಚು. ಜೈನ, ವೀರಶೈವ, ವೈಷ್ಣವ ಪಂಥಗಳು ಸಮಾಜವನ್ನು ಮುಂದೆ ನಡೆಸುವಲ್ಲಿ ಪಾತ್ರವಹಿಸಿವೆ. ಇಂತಹ ಸಂದರ್ಭದಲ್ಲಿ ಅನೇಕ ರೀತಿಯ ಸಂಶೋಧನ ಗ್ರಂಥಗಳನ್ನು ವಿವಿಧ ಕ್ಷೇತ್ರಕ್ಕೆ ಅನ್ವಯಿಸಿ ಅಧ್ಯಯನ ನಡೆಸಲಾಗಿತ್ತು.

ಅವುಗಳೆಂದರೆ:–

1) ಚಾರಿತ್ರಿಕ ಸಂಶೋಧನ ಗ್ರಂಥಗಳು
ಮತ್ತು ಸಾಹಿತ್ಯ ಸಂಶೋಧನ ಗ್ರಂಥಗಳು
2) ಭಾಷಾತ್ಮಕ ಸಂಶೋಧನ ಗ್ರಂಥಗಳು.

ಸಂಶೋಧನೆ ಎನ್ನುವಂತಹದ್ದು ಮನುಷ್ಯನ ಬದುಕನ್ನು ಹುಡುಕುವಂತದ್ದು ಮೊದಲ ಸಂಶೋಧನೆ ನಂತರ ಹುದುಗಿರುವ ಹಿಂದಿನ ಪೀಳಿಗೆಯ ಸಂಬಂಧಗಳನ್ನು ಪತ್ತೆಹಚ್ಚಿ ಅದಕ್ಕೆ ಒಂದು ಹೊಸ ಬಣ್ಣ ತುಂಬಿ ಮುಂದಿನ ಜನರಿಗೆ ತಿಳಿಸುವ ಯತ್ನ ಮಾಡಬೇಕಾಗುತ್ತದೆ. ಹುಡುಕು ಶುದ್ದಗೊಳಿಸು , ಶುದ್ದಗೊಳಿಸಿ ಸಂಗ್ರಹಿಸು, ಸಂಗ್ರಹಿಸಿ ಮುದ್ರಿಸು, ಮುದ್ರಿಸಿ ಸಮಾಜಕ್ಕೆ ತಿಳಿಸು. ಎನ್ನುವ ರೀತಿಯಲ್ಲಿ ಸಂಶೋಧನೆ ನಡೆಯುತ್ತಿರುವ ಸಂದರ್ಭದಲ್ಲಿ ಎಲ್ಲವು ಈ ಸಮಾಜಕ್ಕೆ ತೋರಿಸುವಂತ ಕಾರ್ಯವಾಗಿರುವುದರಿಂದ ಈ ಸಮಾಜಕ್ಕೆ ಗೊತ್ತಿಲ್ಲದ ಮತ್ತು ಸತ್ಯವಾದ ಅಂಶವನ್ನು ತಿಳಿಸುವಂಥ ಕಾರ್ಯವನ್ನು ಸಂಶೋಧನೆಯ ಗ್ರಂಥಗಳು ಮಾಡುತ್ತವೆ.

ನಮಗೆ ಮೊದಲು ಬಂದದ್ದು ಭಾಷೆ, ಭಾಷೆಯಿಂದ ಬಂದದ್ದು ಸಾಹಿತ್ಯ, ಸಾಹಿತ್ಯದಿಂದ ಚರಿತ್ರೆ ಎನ್ನುವ ರೀತಿಯಲ್ಲಿ ನಮಗೆ ಆಧಾರಗಳು ದೊರೆತರೂ ನಾವು ಅಧ್ಯಯನ ನಡೆಸುತ್ತಿರುವುದು ಚರಿತ್ರೆ ನಂತರ ಭಾಷೆ ಸಾಹಿತ್ಯ ಹೀಗೆ ವಿವಿಧ ಅಧ್ಯಯನಗಳನ್ನು ನಾವು ಸಂಶೋಧನ ಗ್ರಂಥಗಳಲ್ಲಿ ರಚಿಸಿದ್ದೇವೆ.

2.2.ಅ) ಚಾರಿತ್ರಿಕ ಸಂಶೋಧನ ಗ್ರಂಥಗಳು ಮತ್ತು ಸಾಹಿತ್ಯ ಗ್ರಂಥಗಳು

ಪ್ರಜಾಪ್ರಭುತ್ವ ಆಡಳಿತ ಬರುವುದಕ್ಕಿಂತ ಮುಂಚಿತವಾಗಿ ರಾಜರ ಆಳ್ವಿಕೆ ಇದ್ದು, ಆ ಸಂದರ್ಭದಲ್ಲಿ ರಾಜರೇ ಸ್ವತಹ ಗ್ರಂಥಗಳನ್ನು ರಚನೆ ಮಾಡುತ್ತಿದ್ದರು ಮತ್ತು ಬರೆಸುತ್ತಿದ್ದರು, ಅದರಲ್ಲಿ ಅವರ ಚರಿತ್ರೆಯ ಬರವಣಿಗೆಯ ರಚನೆ ಇರುತ್ತಿದ್ದು, ಪ್ರಾಣಿ, ಪಕ್ಷಿಗಳ ವೀರ ಚಿತ್ರಗಳು, ಸೈನಿಕರ ಯುದ್ಧ ಸಮಯದ ಚಿತ್ರ, ಅಯುಧಗಳ ಚಿತ್ರ ರಚನೆಯಿದ್ದು ರಾಜಾಡಳಿತದ ಪೂರ್ತಿಯಾದ ಚಿತ್ರಣ ಅವುಗಳಿಂದ ತಿಳಿಯುತ್ತಿತ್ತು. ಪ್ರತಿಯೊಬ್ಬರು ಲಾಂಛನಗಳನ್ನು ಹೊಂದಿದ್ದು, ಪರಾಕ್ರಮ ಪ್ರಾಣಿ ಪಕ್ಷಿಗಳ ಗುರುತ್ತನ್ನು ಹೊಂದಿರುತ್ತಿದ್ದರು. ಸಂಶೋಧನೆಯ ಮುಂದುವರಿಕೆಗೆ ಇವುಗಳು ಪೂರಕ ಆಕರಗಳಾಗಿವೆ. ಚರಿತ್ರೆಗೂ ಸಂಶೋಧನೆಗೂ ಸಂಬಂಧವಿದ್ದು ಚರಿತ್ರೆಯನ್ನು ತಿಳಿಯುವುದೇ ಸಂಶೋಧನೆ ಆಗಿದೆ.

ಒಂದು ಚಿತ್ರ ಸಾವಿರಾರು ಪದಗಳನ್ನು ಸಂಶೋಧನೆಯಲ್ಲಿ ಕಟ್ಟಿ ಕೊಡುತ್ತದೆ. ಸಿಗುವ ವಸ್ತುಗಳನ್ನು ಸಂಗ್ರಹಿಸುವುದು ಅವುಗಳ ವಿಷಯವನ್ನು ಚಿತ್ರಿಸುತ್ತಿದ್ದರು. ಕರ್ನಾಟಕವನ್ನಾಳಿದ ಎಷ್ಟೋ ಮನೆತನಗಳು ಕರ್ನಾಟಕದ ಇತಿಹಾಸವನ್ನು ತಿಳಿಸುತ್ತವೆ. ಸಂಶೋಧನೆಯ ಮುಕ್ಕಾಲು ಪಾಲು ಚಾರಿತ್ರಿಕ ಸಂಶೋಧನೆಯನ್ನು ಒಳಗೊಂಡಿವೆ. ಅಶೋಕನಿಂದ ಹಿಡಿದು ಮೈಸೂರು ಸಂಸ್ಥಾನದವರೆಗೂ ಈ ಇತಿಹಾಸ ಗ್ರಂಥಗಳು ಬೆಳೆದಿವೆ. ಶಾಸನಗಳಿಂದ, ಹಸ್ತಪ್ರತಿಗಳಿಂದ ಹಾಗೂ ಗ್ರಂಥಗಳ ಸಹಾಯದಿಂದ ಈ ಚರಿತ್ರೆ ಸೃಷ್ಠಿಯಾಗಿವೆ, ಈ ಗ್ರಂಥಗಳಲ್ಲಿ ಆಗಿನ ಕಾಲದ ಭಾಷೆ, ಸಾಹಿತ್ಯ, ಚರಿತ್ರೆ, ಸಾಂಸ್ಕೃತಿಕ ಅಂಶಗಳು ಈ ಗ್ರಂಥಗಳಲ್ಲಿ ರಚಿತವಾಗಿವೆ. ಸಾಮಾನ್ಯವಾಗಿ ಈ ಗ್ರಂಥಗಳು ರಚನೆಯಾದ ಉದ್ದೇಶ ರಾಜನ ದಿಗ್ವಿಜಯವನ್ನು ಕೈಗೊಂಡಾಗ, ಯುದ್ದದಲ್ಲಿ ವಿಜಯಶಾಲಿಯಾದಾಗ, ಕೆಲವು ಆಜ್ಞೆಗಳನ್ನು ಹೊರಡಿಸಿದಾಗ, ಸಾಹಿತ್ಯ ರಚನೆ ಮಾಡುವ ಕಾಲದಲ್ಲಿ, ರಾಜನ ವೈಯಕ್ತಿಕ ಅಂಶಗಳು ಸೇರಿಸಿ ರಚನೆಯಾಗಿರುತ್ತವೆ. ಇವು ಹೆಚ್ಚಾಗಿ ಹಳಗನ್ನಡ ಭಾಷೆಯನ್ನು ಒಳಗೊಂಡಿದ್ದ ಗ್ರಂಥಗಳಾಗಿವೆ.

ಇಂಥ ಗ್ರಂಥಗಳನ್ನು ಸಂಶೋಧಿಸಿ ಬೆಳಕಿಗೆ ತಂದ ಗ್ರಂಥಗಳೆಂದರೆ. ಎಂ. ಎಚ್. ಕೃಷ್ಣರವರ 'ಕರ್ನಾಟಕದಪೂರ್ವಚರಿತ್ರೆ' , ಕಪಟರಾಳ ಕೃಷ್ಣರಾಯರ 'ಕರ್ಣಾಟಕಸಂಸ್ಕೃತಿಸಂಶೋಧನೆ,' ಆರ್, ನರಸಿಂಹಚಾರ್ಯರ 'ಕರ್ನಾಟಕ ಕವಿಚರಿತೆ, ಆಲೂರು ವೆಂಕಟರಾಯರ ಕರ್ನಾಟಕತ್ವವಿಕಾಸ, ತಿಪ್ಪೇರುದ್ರಸ್ವಾಮಿರವರ ಕರ್ನಾಟಕಸಮೀಕ್ಷೆ ಮತ್ತು ಇತಿಹಾಸ ಒಳಗೊಂಡಂತೆ ರಚಿತವಾದ ಗ್ರಂಥಗಳನ್ನು ನಾವು ನೋಡಬಹುದು. ರಾಜರ ಕಾಲದಲ್ಲಿ ಅಂದರೆ ರಾಷ್ಟ್ರಕೂಟ, ಚಾಲುಕ್ಯ, ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ರಚನೆಯಾದ ಗ್ರಂಥಗಳು, ಮೈಸೂರು ಸಂಸ್ಥಾನವನ್ನು ಕುರಿತ ಗ್ರಂಥಗಳನ್ನು ರಚಿಸಿ ಪ್ರಕಟಿಸಲಾಗಿತ್ತು. ಅವರ ಚರಿತ್ರೆಗೆ ಕಾರಣ ಅಂದು ಅಸ್ಥಾನ ಕವಿಗಳಾಗಿದ್ದವರು, ಪಂಡಿತರು, ಲಿಪಿಕಾರರು, ರಾಜನ ಚರಿತ್ರೆಯನ್ನು ಕುರಿತು ಬರೆದ ಸಾಹಿತ್ಯ ಗ್ರಂಥಗಳೇ ಆಗಿವೆ ಎಂದು ಹೇಳಬಹುದು.

ಇಲ್ಲಿ ಸಾಹಿತ್ಯವೇ ಚರಿತ್ರೆಯಾಗಿರುವುದು ಉಂಟು ಯಾಕೆಂದರೆ ಈ ಸಮಯದ ಮಹಾಕಾವ್ಯವಾಗಿರುವ ರಾಮಾಯಣ, ಮಹಾಭಾರತದ ನಾಯಕರುಗಳಿಗೆ ಹೋಲಿಸಿ ಬರೆದ ಬರಣಿಗೆಯೇ ಇಂದಿನ ಚರಿತ್ರೆಯಾಗಿ ನಿಂತಿದೆ. ಚರಿತ್ರೆಯು ಸಾಹಿತ್ಯದ ಮತ್ತೊಂದು ಕ್ಷೇತ್ರವಾಗಿರುವುದರಿಂದ ಅದಕ್ಕೆ ಅದರದ್ದೇ ಆದ ನಿಯಮಗಳಿದ್ದು ಆಶೋಕನಿಂದ ಹಿಡಿದು ಮೈಸೂರು ರಾಜರವರೆಗೆ ಎಷ್ಟೋ ರಾಜ ಮನೆತನಗಳು ಕರ್ನಾಟಕದಲ್ಲಿ ಆಳ್ವಿಕೆ ನಡೆಸಿವೆ ಎಂದು ಹೇಳಬಹುದಾಗಿದೆ.

ಸಾಹಿತ್ಯ ಸಂಶೋಧನೆ ಎನ್ನುವಂತಹದ್ದು ಯಾವಾಗ ಆರಂಭವಾಯಿತೆಂದು ತಿಳಿಯುವುದು ಕಷ್ಟವಾದರೂ ಸಿಕ್ಕಿರುವ ಕವಿರಾಜಮಾರ್ಗದ ಹಿನ್ನೆಲೆಯಲ್ಲಿ 2–3ನೇಶತಮಾನದಿಂದ ಕನ್ನಡಸಾಹಿತ್ಯ ಬಳಕೆಯಲ್ಲಿದೆ ಎಂದು ತಿಳಿಯಬಹುದಾಗಿದೆ. ನವೋದಯ ಪೂರ್ವದಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಭಾಷೆಗಳನ್ನು ಒಳಗೊಂಡಂತೆ ಆದಿಕವಿಪಂಪನಿಂದ ಹಿಡಿದು ಮುದ್ದಣ್ಣನವರೆವಿಗೂ ಸಾಹಿತ್ಯದ ಆರಂಭದ ಹೆಜ್ಜೆಗಳನ್ನು ಶೋಧಿಸಿ ನೋಡಬಹುದು. ಮೊದಲು ಸಾಹಿತ್ಯಕ್ಕೆ ಪ್ರೇರಣೆ ದೊರೆತ್ತದ್ದು ಧಾರ್ಮಿಕ ಗ್ರಂಥಗಳನ್ನು ರಚನೆ ಮಾಡುವುದರ ಮೂಲಕ ಜೈನಧರ್ಮ, ವೀರಶೈವಧರ್ಮ, ವೈಷ್ಣವಧರ್ಮ ಮುಂತಾದ ಧರ್ಮಗಳ ಮೂಲಕ ರಚನೆಯಾದ ಸಾಹಿತ್ಯವು ಸಂಶೋಧನೆಗೆ ಪ್ರೇರಣೆ ನೀಡಿದವು.

ನವೋದಯದ ಪೂರ್ವ ಸಂಶೋಧನೆಗಳೆಲ್ಲವೂ ಹಳಗನ್ನಡ, ನಡುಗನ್ನಡ ಸಾಹಿತ್ಯದ ಮೇಲೆ ನಡೆದವುಗಳೇ ಆಗಿವೆ. ಶಾಸನ, ಹಸ್ತಪ್ರತಿಗಳನ್ನು ಸಂರಕ್ಷಿಸಿ ಸಂಗ್ರಹಿಸಿ ಅವುಗಳಿಂದ ಸಾಹಿತ್ಯ ಗ್ರಂಥಗಳನ್ನು ತಯಾರಿಸಿದರು. ನಂತರ ಭಾರತಕ್ಕೆ ಬಂದ ಪಾಶ್ಚಿಮಾತ್ಯರ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದಾಗ ವರ್ಡ್ಸ್‌ವರ್ತ್, ಷೆಲ್ಲಿ, ಕೋಲ್‌ರಿಚ್, ಷೇಕ್ಸ್‌ಪೀಯರ್‌ರಂತಹ ಸಾಹಿತ್ಯ ಪ್ರಭಾವದ ಹಿನ್ನಲೆಯಲ್ಲಿ ಅನುವಾದ ಗ್ರಂಥಗಳು ಮುದ್ರಣಗೊಂಡವು. ಆ ಸಂದರ್ಭಕ್ಕಾಗಲೆ ಸಂಶೋಧನೆಯ ಪ್ರಭಾವದ ಅರಿವು ಮೂಡಿ ಎಲ್ಲರು ಸಂಶೋಧನೆಗೆ ತೊಡಗಿದರು. ಆಗ ವಡ್ಡಾರಾಧನೆ, ಕವಿರಾಜಮಾರ್ಗ, ಆದಿಪುರಾಣದಂತಹ ಗ್ರಂಥಗಳು ಹೊರಬಿದ್ದವು. ಡಿ.ಎಲ್. ನರಸಿಂಹಚಾರ್ಯ, ಎಸ್. ಅನಂತನಾರಾಯಣ, ಎಂ.ವಿ.ಸೀತಾರಾಮಯ್ಯ, ಕೆ.ಜಿ.ಪಾಠಕ, ಟಿ.ವಿ.ವೆಂಕಟಚಾಲಶಾಸ್ತ್ರಿ, ಕೆಂಪುನಾರಾಯಣರಂತಹ ಗ್ರಂಥ ಸಂಶೋಧನಕಾರರು ಕನ್ನಡ ಬೆಳವಣಿಗೆಗೆ ಏಣಿಯಾದರು.

ಸಂಶೋಧನೆ ಎನ್ನುವುದು ನವೋದಯ ಪೂರ್ವದಲ್ಲಿ ಪ್ರಾಚೀನ ಮತ್ತು ಇಂಗ್ಲೀಷ್ ಪ್ರಭಾವದಿಂದ ಪ್ರೇರಣೆಗೊಂಡಿತ್ತು. ಅತಿ ಹೆಚ್ಚು ಗ್ರಂಥಗಳ ಮುದ್ರಣವು ಈ ವೇಳೆಯಲ್ಲಿಯೇ ನಡೆದಿರುವಂತದ್ದು ಅಧ್ಯಯನದಲ್ಲಿ ಸಾಹಿತ್ಯದ ಸವಿವರವನ್ನು ನೀಡಲಾಗಿದೆ. ಸಾಹಿತ್ಯ ಮತ್ತು ಚರಿತ್ರೆ ಎರಡು ಒಟ್ಟಿಗೆ ಬರುವ ಉದ್ದೇಶದಿಂದ ಇಲ್ಲಿ ಈ ಅಧ್ಯಯನವನ್ನು ಅಳವಡಿಸಲಾಗಿತ್ತು.

2.2 ಆ) ಭಾಷಾತ್ಮಕ ಸಂಶೋಧನ ಗ್ರಂಥಗಳು

ಮಾನವ ಕಾಡು ಮೇಡುಗಳಲ್ಲಿ ಅಲೆಯುತ್ತ ಪ್ರಾಣಿ ಪಕ್ಷಿಗಳ ಕೂಗನ್ನೇ ಅನುಕರಿಸಿ ಸಂಜ್ಞೆ, ಸಂಕೇತಗಳ ಮೂಲಕ ನಡೆದು ಬಂದು ದ್ರಾವಿಡ ಮತ್ತು ಆರ್ಯರ ಅಗಮನದಿಂದ ವಿವಿಧ ಲಿಪಿಗಳು ಹುಟ್ಟಿಕೊಂಡು, ನಂತರ ಅನೇಕ ಭಾಷೆಗಳನ್ನು ಮಾತಾನಾಡುವ ಶಕ್ತಿಯನ್ನು ಬೆಳೆಸಿಕೊಂಡನು. ಅದರೆ ಕನ್ನಡ ಭಾಷೆಗೆ ದ್ರಾವಿಡ ಭಾಷೆಯ ಮೂಲದಿಂದ ಮರದ ಮೇಲೆ, ಬಂಡೆಗಳ ಮೇಲೆ, ಎಲೆಗಳ ಮೇಲೆ ಪ್ರಕೃತಿಯ ವಸ್ತುಗಳನ್ನು ಬಳಸಿಕೊಂಡು ಅರೆ ಬರೆ ಗೀಚುಗಳಲ್ಲಿ ಸುಮಾರು 2–3ನೇ ಶತಮಾನದ ವೇಳೆಗೆ ಕೊಟ್ಟ, ಪೊಟ್ಟ, ತುಪ್ಪ, ಎನ್ನುವ ಪದಗಳ ಬಳಕೆ ಬಂದಿದ್ದು 5–6ನೇ ಶತಮಾನಕ್ಕಾಗಲೆ ಪೂರ್ಣ ಪ್ರಮಾಣದಲ್ಲಿ ಲಿಪಿಗಳು ಬಂದಿದ್ದು ಸಾಮಾನ್ಯ ಜನರೆಲ್ಲರೂ ಬಲಿತ ಭಾಷೆಯಂತೆ ವ್ಯವಹಾರ, ಸಂಬಂಧಗಳ ಮಾತುಗಳನ್ನು ಆಡುತ್ತಿದ್ದರು. ನಂತರ ಭಾಷೆಯು ಸಮೃದ್ಧವಾಗಿ ಬೆಳೆದು ಸಮೂಹ, ಗುಂಪು, ಜಾತಿ, ಜನಾಂಗವಾರು ಭಾಷೆಗಳು ಸೃಷ್ಟಿಯಾದವು.

ಸಾಹಿತ್ಯವು ಸಹ ಬೆಳೆದು ಬಲಿತ್ತಿದ್ದರಿಂದ ಹಸ್ತಪ್ರತಿಗಳ ಮೇಲೆ ಸಾಹಿತ್ಯ ರಚನೆಯಾಗುತ್ತಿದ್ದು ಪಾಠ ಪ್ರವಚನಗಳೆಲ್ಲವೂ ನಡೆಯುತ್ತಿದ್ದವು. ಈ ರೀತಿಯಾಗಿ ಬಂದ ಭಾಷೆಯು ದೇಶಿಯ, ರಾಜ್ಯ, ನಗರ, ಗ್ರಾಮ, ಹಳ್ಳಿಗಳ ರೀತಿ ಪ್ರಾದೇಶಿಕ ಭಾಷೆಗಳು ಬಳಕೆಗೆ ಬಂದು ಜಾತಿಗನುಗುಣವಾಗಿ ಒಂದು ಭಾಷೆಯಾದರೆ, ಧರ್ಮಕ್ಕೆ ಅನುಗುಣವಾಗಿ ಮತ್ತೊಂದು ಭಾಷೆಯ ಬಳಕೆ ಇದ್ದವು. ಮನೆಯ ಭಾಷೆ ಒಂದಾದರೆ ಸಂವಹನಕ್ಕೆ ಬೇಕಾದ ಮತ್ತೊಂದು ಭಾಷೆಯನ್ನು ಅವರು ಕಲಿತ್ತಿದ್ದರು. ಏಕಭಾಷೆ, ದ್ವಿಭಾಷೆಗಳ ರೀತಿಯಲ್ಲಿ ಭಾಷ ಬೆಳವಣಿಗೆಯಾಗಿ ಸಾಹಿತ್ಯದ ಆಗಾಧವಾದ ಶಕ್ತಿ ಬೆಳೆದು ಸಾಕಷ್ಟು ಪ್ರಮಾಣದಲ್ಲಿ ಬರವಣಿಗೆಗಳು ರಚನೆಯಾದವು.

ಕೆಲವು ಭಾಷೆಗಳ ಪ್ರಭಾವ ಇತರ ಭಾಷೆಗಳ ಮೇಲೆ ಆಗಿದ್ದು ಅನ್ಯಭಾಷೆ, ದೇಶಿಯಭಾಷೆಗಳು ಬೆಳೆದು ಬಂದವು. ಭಾಷೆಯ ಮೇಲಿನ ಸಂಶೋಧನೆಗಳು ಅನೇಕ ರೀತಿಯಲ್ಲಿ ಇಂದಿಗೂ ನಡೆಯುತ್ತಿದ್ದು ಭಾಷಾ ಸಂಶೋಧನ ವಿದ್ವಾಂಸರು ಅನೇಕ ಅಧ್ಯಯನಗಳನ್ನು ನಡೆಸಿ ಸಂಶೋಧನ ಗ್ರಂಥಗಳನ್ನಾಗಿ ಮುದ್ರಿಸಿದ್ದಾರೆ.

ಅಂಥವುಗಳೆಂದರೆ, 1) ಕ್ರಿ.ಶ. 1817 ರಲ್ಲಿ ರೆವ್ಹರೆಂಡ್ ವಿಲಿಯಂಕ್ಯಾರಿಯವರ 'ದ ಗ್ರಾಮರ್ ಆಫ್ ಕರ್ನಾಟಕ ಲಾಂಗ್ವೇಜ್', ಜಾನ್ ಮೆಕೆರೆಲ್‌ರ ಕರ್ನಾಟಕ ವ್ಯಾಕರಣ, ಕಿಟೆಲ್ ರವರ 'ಕನ್ನಡ ವ್ಯಾಕರಣ ಸೂತ್ರಗಳು,' ಎ ಗ್ರಾಮರ್ ಅಫ್ ಕನ್ನಡ ಲಾಂಗ್ವೇಜ್, ಬ್ರೈಟ್ ವಿಲಿಯಂ ರವರ ಆನ್ ಔಟ್ ಲೈನ್ ಆಫ್ ಕೋಲ್ಲ್ಯುಲ್ ಕನ್ನಡ, ಆರ್, ನರಸಿಂಹಚಾರ್‍ಯರ ಇಸ್ಟರಿ ಅಫ್ ಕನ್ನಡ ಲಾಂಗ್ವೇಜ್, ಶಂಕರಭಟ್ಟರ ಸಂಕ್ಷಿಪ್ತ ಕನ್ನಡಭಾಷೆಯಚರಿತ್ರೆ, ಕುಶಲಪ್ಪಗೌಡರ 'ಎ ಗ್ರಾಮರ್ ಆಫ್ ಕನ್ನಡ,' ಕುಲಕರ್ಣಿ 'ಕನ್ನಡ ಭಾಷೆಯ ಚರಿತ್ರೆ', ಕುಳ್ಳಿ.ಜಿ.ಎಸ್. ಐತಿಹಾಸಿಕ ಭಾಷಾವಿಜ್ಞಾನ, ಕೃಷ್ಣರಾವ್. ಕೆ.ಎಮ್. 'ಕನ್ನಡಭಾಷಾಸ್ವರೂಪ', ಎಂ.ಚಿದಾನಂದಮೂರ್ತಿರವರ 'ಭಾಷಾವಿಜ್ಞಾನದ ಮೂಲತತ್ವಗಳು', ಡಿ.ಎಲ್.ನರಸಿಂಹಚಾರ್‍ಯರ 'ಶಬ್ದಮಣಿದರ್ಪಣ,' ಕೆ.ವಿ.ಪುಟ್ಟಪ್ಪರವರ 'ಕನ್ನಡಕೈಪಿಡಿ.' ಇನ್ನೂ ಮುಂತಾದ ಭಾಷಾಗ್ರಂಥಗಳನ್ನು ನೋಡಬಹುದಾಗಿದೆ.

ಸಂಸ್ಕೃತದಿಂದ ಕನ್ನಡಕ್ಕೆ ಬದಲಾದ ಭಾಷೆ ಮತ್ತು ಇಂಗ್ಲೀಷ್ ಪ್ರಭಾವದಿಂದ ಆದ ಭಾಷಾ ವ್ಯತ್ಯಾಸಗಳು, ಗಡಿರಾಜ್ಯದ ಭಾಷೆಗಳು, ವಿವಿದ ರಾಜರುಗಳ ದಾಳಿಯಿಂದಾದ ಪ್ರಭಾವಗಳನ್ನು ಭಾಷಸಂಶೋಧನೆ ನಿಖರವಾಗಿ ಕಟ್ಟಿಕೊಡುತ್ತದೆ.

ಪಂಪ ಹೇಳಿಕೊಂಡಿರುವಂತೆ 'ಪುಲಿಗೆರೆಯ ತಿರುಳ್ಗನ್ನಡದಲ್ಲಿ ತನ್ನ ಕಾವ್ಯ ಪ್ರಯೋಗ ಮಾಡುತ್ತಿದ್ದೇನೆ.' ಎಂದು ಸ್ಪಷ್ಟವಾಗಿ ತಿಳಿಸಿರುವಂತೆ ಅನೇಕ ಕವಿಗಳು ಈ ರೀತಿಯ ಸ್ಪಷ್ಟಮಾತುಗಳನ್ನು ಹೇಳಿರುವುದನ್ನು ನಾವು ಗ್ರಂಥಗಳಲ್ಲಿ ತಿಳಿಯಬಹುದು. ಈ ಅಂಶದಿಂದ 10 ನೇ ಶತಮಾನದಲ್ಲಿ ಈ ಭಾಷೆ ರೂಡಿಯಲ್ಲಿತ್ತು ಎಂದು ತಿಳಿಯಬಹುದಾಗಿದೆ. ಇಂತಹ ಅನೇಕ ಕವಿಗಳ ಭಾಷೆಯ ಮೇಲೆ ಸಂಶೋಧನ ಗ್ರಂಥಗಳ ಪ್ರಭಾವದಿಂದ ಸಂಶೋಧನೆ ಗ್ರಂಥಗಳ ಬೆಳವಣಿಗೆಯನ್ನು ತಿಳಿಯಬಹುದಾಗಿದೆ.

ನವೋದಯ ಪೂರ್ವದಲ್ಲಿ ಆದ ಗ್ರಂಥದ ಇತಿಹಾಸ, ಸಂಶೋಧನೆಯ ಬೆಳವಣಿಗೆ ಮತ್ತು ಸಂಶೋಧನೆಯ ಪಾತ್ರವನ್ನ ತಿಳಿಯಬಹುದಾಗಿದೆ. ಭಾಷೆ ಎನ್ನುವಂತದ್ದು ಮನುಷ್ಯನ ನಡುವೆ ಸಂಬಂಧಗಳನ್ನು ಬೆಳೆಸುವಂತಾಗಿದೆ. ಆತನ ಭಾವನೆಗಳನ್ನು ಅರ್ಥೈಸಿಕೊಂಡು ನಡೆಯುವ ಸಂಪರ್ಕಗಳು ಈ ಸಮಾಜದೊಂದಿಗೆ ಹೊಂದಾಣಿಕೆ ನಡೆಸುವ ಮಧ್ಯಮ ಭಾಷೆಯಾಗಿದೆ. ಭಾಷೆ ಇಲ್ಲದಿದ್ದರೆ ಪ್ರಾಣಿಗಳಿಗೂ, ಮನುಷ್ಯರಿಗೂ ಯಾವುದೇ ವ್ಯತ್ಯಾಸಗಳು ಇರಲಿಲ್ಲ. ಕಿವಿಯಿಂದ ಕೇಳುವ ಕ್ರಿಯೆ, ಕಣ್ಣಿಂದ ನೋಡುವ, ಬಾಯಿಂದ ಮಾತಾಡುವ ಕ್ರಿಯೆಯನ್ನು ಒಳಗೊಂಡ ಮನುಷ್ಯ ಈ ಸಮಾಜದಲ್ಲಿ ನಿಕಟವಾದ ಸಂಬಂಧಗಳನ್ನು ಹೊಂದಿದ್ದಾನೆ. ಸಂಶೋಧನೆಯ ಮೂಲಕ ಅನೇಕ ಭಾಷೆಗಳನ್ನು ಪತ್ತೆ ಹಚ್ಚಿ ಲಿಪಿ ಇರುವ ಭಾಷೆ, ಲಿಪಿ ಇಲ್ಲದ ಭಾಷೆ ಎಂದು ವಿಂಗಡಿಸಿದ್ದಾನೆ.

2. 3. ಆಧುನಿಕ ಸಂಶೋಧನ ಗ್ರಂಥಗಳ ಬೆಳವಣಿಗೆ

20ನೇ ಶತಮಾನದ ನಂತರ ಕಾಲಘಟ್ಟವನ್ನು ಸಂಶೋಧನೆಯ ಆಧುನಿಕ ಯುಗವೆಂದು ಕರೆಯುತ್ತಾರೆ. ಸಂಶೋಧನೆ ಎನ್ನುವ ಮತ್ತು ಗ್ರಂಥಗಳ ಮಹತ್ವವನ್ನು ತಿಳಿದಿದ್ದು ಈ ಆಧುನಿಕ ಸಂದರ್ಭದಲ್ಲಿಯೇ ಎಂದು ಗುರುತಿಸಬಹುದಾಗಿದೆ. ಕನ್ನಡಿಗರ ಕೈಗೆ ಸಿಕ್ಕ ಸಂಶೋಧನೆ ಹೊಸ – ಹೊಸ ಆಲೋಚನೆಗಳನ್ನು ಶೋಧಿಸಿತ್ತು. ಸಂಶೋಧನೆ ಎಂದರೇನು? ಯಾರು ಸಂಶೋಧಕ ಆತನ ಅರ್ಹತೆಗಳೇನು? ಎನ್ನುವ ಅರಿವು ಮೂಡಿದ್ದು ಆಧುನಿಕ ಸಂದರ್ಭದ ಗ್ರಂಥಗಳಲ್ಲಿ ಆಧುನಿಕ ಯುಗದಲ್ಲೂ ಸಹ ಗ್ರಂಥ ಎನ್ನುವ ಪದಕ್ಕೆ ಸರಿಯಾದ ಅರ್ಥಗಳು ಸಿಗದೇ ಪುಸ್ತಕ ಎನ್ನುವ ಪದಗಳಿಂದಲೇ ನಡೆಯುತ್ತಿದೆ. ಅದ್ದರಿಂದ ಇದರ ಅರ್ಥವನ್ನು ವಿವಿಧ ಅರ್ಥಗಳಿಂದ ಗುರುತಿಸುವ ಪ್ರಯತ್ನ ಮಾಡಿದ್ದೇನೆ. ಅಳಿಯದೇ ಉಳಿದ ಕೆಲವು ಹಳೆಯ ವಸ್ತುಗಳನ್ನು ಜಾಲಾಡಿಸಿ ಶೋಧಿಸುವುದರ ಮೂಲಕ ಹೊಸ ಶೋಧನೆಗಳನ್ನು ಕೈಗೊಳ್ಳುವುದು ಈ ಸಂದರ್ಭದ ಶೋಧನೆಯ ಕೆಲಸವಾಗಿದೆ.

ಆಧುನಿಕ ಘಟ್ಟದಲ್ಲಿ ಕೃತಿ ಸಂಪಾದನೆ, ಸಂಗ್ರಹ, ಮುಕ್ತಾಭಿವ್ಯಕ್ತಿ, ಹೊಸ ಜ್ಞಾನಶಾಖೆಗಳ ಪರಿಚಯ ಹಾಗೂ ಅವುಗಳ ತತ್ವಗಳ ಅನ್ವಯಿಕತೆ, ವಿಮರ್ಶೆ, ವಿಶ್ಲೇಷಣಾಮುಖಿ, ಸಂಶೋಧನೆ ಪದವಿಗಾಗಿ ಸಂಶೋಧನೆ ಗ್ರಂಥಗಳ ರಚನೆ ಹೀಗೆಯೇ ಹತ್ತಾರು ವಿಧಗಳಲ್ಲಿ ಸಂಶೋಧನೆ ನಡೆದು ಭಾವನಾಭಿವ್ಯಕ್ತಿಯ ಪದಗಳನ್ನು ಗ್ರಂಥಗಳ ಮೂಲಕ ಬರೆಯಲಾಯಿತು. ಇಂಗ್ಲೀಷ್ ಪ್ರಭಾವವನ್ನು ತೊಡೆದುಹಾಕಿ ಕನ್ನಡಕ್ಕೆ ಹೊಸ ಬಗೆಯ ಸಾಹಿತ್ಯ ಸಂಶೋಧನೆಗಳು ಹೊರಬಂದವು, ಬಿ.ಎಂ.ಶ್ರೀ. ಯವರು 'ಕನ್ನಡತಲೆಎತ್ತುವಬಗೆ' ಎನ್ನುವುದರ ಮೂಲಕ ಕನ್ನಡಕ್ಕೆ ಸ್ವಂತಿಕೆಯನ್ನು ತಂದು ಕೊಟ್ಟರು. ಅನುವಾದ ಗ್ರಂಥಗಳು ಕಡಿಮೆಯಾಗಿ ಹೊಸ ಗ್ರಂಥಗಳ ರಚನೆ ಆರಂಭವಾಯಿತು. ಇಂಗ್ಲೀಷ್‌ನ 'ರೋಮ್ಯಾಂಟಿಸಂ' ನ ಬದಲಾಗಿ ನವೋದಯ ಯುಗ ಎಂದು ಸಾರಿದರು. ಅ ವೇಳೆಗಾಗಲೇ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಜನ ಹೋರಾಟದ ಗೀತೆಗಳನ್ನು ಬರೆಯ ತೊಡಗಿದರು.

ಪ್ರಕೃತಿಯನ್ನು ಸಾಹಿತ್ಯವನ್ನಾಗಿ ರಚಿಸಿ ಕಥೆ, ಕಾದಂಬರಿ, ನಾಟಕ, ಕವನದ ಸಾಲುಗಳು ಬಂದು ಇಂಗ್ಲೀಷ್ ಸಾಹಿತ್ಯವನ್ನು ಪೂರ್ತಿಯಾಗಿ ಬಿಟ್ಟು ಕನ್ನಡವನ್ನು ಬೆಳೆಸಲು ಮುಂದಾದರು. ಇದರ ಫಲವಾಗಿಂಯೇ ಏಳು ಜ್ಞಾನ ಪೀಠ ಪ್ರಶಸ್ತಿಗಳು ಕನ್ನಡಕ್ಕೆ ಬರಲು ಸಾಧ್ಯವಾಯಿತು ಅನೇಕ ಕನ್ನಡ ಕವಿಗಳ ಹುಟ್ಟುವಿಕೆಗೆ ಸಾಕ್ಷಿಯಾಗಿ ನಿಂತಿತೆಂದು ಹೇಳಬಹುದು. ಆಧುನಿಕ ಯುಗದಲ್ಲಿ ವಿಜ್ಞಾನವು ಸಹ ಬೆಳವಣಿಗೆಯನ್ನು ಕಂಡು ವೈಜ್ಞಾನಿಕ ಸಂಶೋಧನೆಯು ಮುಂದುವರೆಯುತ್ತ ಪ್ರಾಚೀನ ವಸ್ತುಗಳನ್ನು ಶೋಧಿಸುವ ಮಾರ್ಗ ಕಂಡುಕೊಂಡರು. ವಿದ್ಯಾರ್ಥಿಯಿಂದ ವಿದ್ವಾಂಸರವರೆಗೂ, ಪದವಿಯಿಂದ ಪ್ರಶಸ್ತಿಯವರೆವಿಗೂ ಸಂಶೋಧನ ಗ್ರಂಥಗಳು ರಚನೆಯಾದವು.

ಹಳೆಯ ಗ್ರಂಥಗಳೆಲ್ಲವು ವಿಮಾರ್ಶತ್ಮಾಕ ಗ್ರಂಥಗಳಾಗಿದ್ದು ಆಧುನಿಕ ಯುಗದ ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಯು ಮುಂದುವರೆಯುತ್ತ ಬಂದಿತ್ತು. ಅದಕ್ಕಾಗಿಯೇ ವಿಶ್ವ ವಿದ್ಯಾಲಯಗಳಲ್ಲಿ ಪ್ರತ್ಯೇಕ ಅಧ್ಯಯನ ವಿಭಾಗಗಳು ಸ್ಥಾಪನೆ ಗೊಂಡವು "ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನ ಕಾಲವನ್ನು ಸರಿಪಡಿಸುವುದಾಗಿದೆ".[9] ಸಂಶೋಧನೆಯು ಸತ್ಯ ಎನ್ನುವಂತಹದನ್ನು ಶೋಧಿಸಿ ಗ್ರಂಥದಲ್ಲಿ ವಿವರಿಸುವಂತಹದನ್ನು ಮಾಡುತ್ತದೆ. ಕಲೆ, ವಿಜ್ಞಾನ, ವಾಣಿಜ್ಯಗಳಂತಹ ಕ್ಷೇತ್ರಗಳು ಸಂಶೋಧನ ಗ್ರಂಥಗಳಿಂದ ಇಡೀ ಪ್ರಪಂಚವನ್ನೇ ಬೆರಗು ಗೊಳಿಸುವಂತಾಗಿವೆ. ಒಂದರಿಂದ ಒಂದು ಮುಂದುವರೆಯುವಂತಹ ಕೆಲಸಗಳು ವಿಧಾನಗಳು ಸಂಶೋಧನೆಯಿಂದ ಸಾಗುತ್ತಿವೆ. ಇಲ್ಲಿ ಹೊಸ ವಿವೇಚನೇಯ ಶೋಧಗಳು ಮುಂದುವರೆಯುತ್ತಿರುವುದನ್ನು ನೋಡಬಹುದು.

ಮೊದಲು ಸಂಶೋಧನೆಯ ಗ್ರಂಥಗಳಿಗೆ ದಾರಿ ಮಾಡಿಕೊಟ್ಟ ಆರ್. ನರಸಿಂಹಚಾರ್ಯರು 'ಕರ್ನಾಟಕಕವಿಚರಿತೆಯ' ಮೂಲಕ ಕರ್ನಾಟಕದ ಸಾವಿರಾರು ಕವಿಗಳನ್ನು ಹೆಸರಿಸಿದರು. ಆಲೂರುವೆಂಕಟರಾಯರ 'ಕರ್ನಾಟಕವಿಕಾಸ' ಮತ್ತು ಕರ್ನಾಟಕ ಗತವೈಭವ, ಗ್ರಂಥಗಳ ಮೂಲಕ ಮೊದಲ ಮೈಸೂರು ಹೆಸರಿನ ಶೋಧ ನಡೆಯಿತು. ಬಿ. ಎಂ. ಶ್ರೀ. ಎಂ.ವಿ.ಸೀತಾರಾಮಯ್ಯನವರು ಸಂಶೋಧನೆಗೆಂದು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿದ್ದರು. ಪ್ರಾಚ್ಯ ಸಂಶೋಧನ ಕೇಂದ್ರಗಳಲ್ಲಿ ಸಂಗ್ರಹಗೊಂಡ ಅನೇಕ ಕಾರ್ಯಗಳನ್ನು ಮರುಶೋಧನೆಯನ್ನು ಕೈಗೊಂಡು ಅನೇಕ ಅಲೋಚನೆಗಳಿಗೆ ದಾರಿಮಾಡಿಕೊಟ್ಟರು.

ಸಂಶೋಧನೆಯ ಗ್ರಂಥಗಳನ್ನು ವಿವಿಧ ಕ್ಷೇತ್ರಗಳಲ್ಲಿ ಕೈಗೊಂಡು ವಿವಿಧ ಕಾಲಘಟ್ಟಗಳ ಮೂಲಕ ಅಧ್ಯಯನಕ್ಕೆ ಒಳಪಡಿಸಲಾಯಿತು. ಅಂತಹ ಕ್ಷೇತ್ರಗಳೆಂದರೆ ಸಾಮಾಜಿಕ ಮತ್ತು ಸಾಂಸ್ಕೃತಿಕ, ವೈಜ್ಞಾನಿಕ, ವಿಮರ್ಶಾತ್ಮಕ ಸಂಶೋಧನಾ ಗ್ರಂಥಗಳೆಂದು ವಿಂಗಡಿಸಲಾಗಿತ್ತು. ಕನ್ನಡ ನಾಡು ನುಡಿಯ ಬಗ್ಗೆ ಅಪಾರ ಕಾಳಜಿ ವಹಿಸಿದ್ದ ವಿದ್ವಾಂಸರು ಅನೇಕ ಗ್ರಂಥಗಳನ್ನು ಸಂಶೋಧನೆಗಳನ್ನು ಕೈಗೊಂಡರು. ಆಧುನಿಕ ಯುಗದ ನಂತರ ಪ್ರತಿಯೊಬ್ಬನು ಎಲ್ಲವನ್ನು ಪ್ರಶ್ನಿಸುವ ಉತ್ತರ ಹುಡುಕುವ ಕೆಲಸ ಮಾಡಬೇಕಾಯಿತು. ಸಂಶೋಧನೆ ಎನ್ನುವಂತಹದಕ್ಕೆ ನಿಗದಿಯಾದ ಅರ್ಥಹುಡುಕುವ ಪ್ರಯತ್ನವನ್ನು ಸಂಶೋಧಕ ಓದುಗನಾದರೂ ಗ್ರಂಥ ನಿಜವಾಗಿದ್ದರೆ ಅದಕ್ಕೆ ಉತ್ತಮ ಬೆಲೆ ಸಿಗುತ್ತದೆ.

---

9. ಎಂ.ಎಂ.ಕಲ್ಬುರ್ಗಿ – ಮಾರ್ಗ–2 – ಪುಟ. ಮುನ್ನುಡಿ

2.3.ಅ) ಸಂಶೋಧನ ಗ್ರಂಥಗಳು

ಪಾಶ್ಚಿಮಾತ್ಯರು ಕರ್ನಾಟಕಕ್ಕೆ ಬಂದಾಗ ಇನ್ನೂ ಪ್ರಾಚೀನ ಗ್ರಂಥಗಳ ಗುಂಗಿನಲ್ಲಿದ್ದ ಜನರಿಗೆ, ಯಾವುದೋ ಬೆಲೆ ಇಲ್ಲದ ವಸ್ತುವೆಂದು ತಿಳಿದಿದ್ದವರಿಗೆ ಅರಿವು ಮೂಡಿಸುವುದರ ಮೂಲಕ ವಸ್ತುಗಳನ್ನು ಸಂಗ್ರಹಿಸಿ ಸಂಶೋಧನೆಯ ಹಾದಿಯನ್ನು ತೋರಿಸಿಕೊಟ್ಟರು ಕಲೆ, ವಿಜ್ಞಾನ, ವಾಣಿಜ್ಯ ಕ್ಷೇತ್ರಗಳ ಮೂಲಕ ಸಂಶೋಧನೆಯ ವಿವಿಧ ಬಗೆಗಳನ್ನು ಈ ಗ್ರಂಥಗಳು ನಮ್ಮ ಮುಂದಿಡುತ್ತವೆ ಎಂದು ಹೇಳಬಹುದಾಗಿದೆ. ಇಲ್ಲಿಯವರೆಗೆ ನಡೆದ ಅಧ್ಯಯನದಲ್ಲಿ ಸಂಶೋಧಕನ ಬಗ್ಗೆ ಯಾವುದೇ ರೀತಿಯ ಅಕ್ಷೇಪಗಳನ್ನೇತ್ತದೆ ಬರಿ ಸಂಶೋಧನ ಲೇಖನಗಳನ್ನು ಪ್ರಕಟಿಸುತ್ತಿದ್ದರು.

ಆದರೆ ಆಧುನಿಕ ಯುಗದ ಸಂಶೋಧನೆಯ ಬಗ್ಗೆ ಸಂಶೋಧಕನಿಗೆ ಇರಬೇಕಾದ ಆರ್ಹತೆಗಳನ್ನು ತಿಳಿಸುವಂಥ ಗ್ರಂಥಗಳು ಬೆಳಕು ಕಂಡವು. ಕವಿಯಾದವನಿಗೆ, ವಿಮರ್ಶಕನಿಗೆ, ಇರಬೇಕಾದ ನಿಯಮಗಳನ್ನು ತಿಳಿಸುವ ಗ್ರಂಥಗಳು ಹೊರಬಂದಿವೆ. ಶ್ರೀನಿವಾಸ ಹಾವಾನೂರರ' ಹೊಸಗನ್ನಡ ಅರುಣೋದಯ, ಗ್ರಂಥವು ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಕನ್ನಡ ಸಂಸ್ಕೃತಿಯವರೆಗೂ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ್ದಂತೆ ಮತ್ತು ಹೊಸ ನಿಟ್ಟಿನ ಅಧ್ಯಯನಗಳನ್ನು ತೋರಿಸಿದ್ದಾರೆ. ಯಾವುದೇ ಅಧ್ಯಯನದ ವಿದ್ಯಾರ್ಥಿ ಓದಲೇ ಬೇಕಾದ ಗ್ರಂಥ ಇದಾಗಿದೆ. ಡಾ. ಎಂ. ಚಿದಾನಂದಮೂರ್ತಿಯವರ ಸಂಶೋಧನ ಗ್ರಂಥವು ಚಿಕ್ಕದಾದರೂ ಸಂಶೋಧನೆ ಅಂಶಗಳನ್ನು, ಅರ್ಹತೆ, ಸಂಶೋಧಕನ ಗುಣಾವಗುಣಗಳನ್ನು, ಪ್ರಬಂಧ ರಚನೆಯ ವಿಧಾನಗಳನ್ನು ಸಂಶೋಧಕನಿಗೆ ತಿಳಿಸಿಕೊಟ್ಟಿದ್ದಾರೆ. ಯಾವುದೇ ವಿದ್ಯಾರ್ಥಿಯಾದರು ಓದಲೇ ಬೇಕಾದ ಗ್ರಂಥವಾಗಿದೆ.

ಎಂ.ಎಂ. ಕಲ್ಬುರ್ಗಿಯವರ ಮಾರ್ಗಸಂಪುಟಗಳು ವಿವಿಧ ಅಧ್ಯಯನಗಳನ್ನು ತಿಳಿಸುವ ಗ್ರಂಥಗಳಾಗಿವೆ. ಡಾ.ಸದಾನಂದ ಕನವಳ್ಳಿಯವರ 'ಮಹಾಮಾರ್ಗ,' ಹೊಸಗನ್ನಡ ಉದಯಕಾಲ, ರಾ.ಯ.ಧಾರವಾಡಕರ, ಡಾ. ಸಂಗಮೇಶ ಸವದತ್ತಿಮಠರ ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ ಗ್ರಂಥವು ಸಂಶೋಧನೆಯ ವಿವಿಧಮುಖಗಳನ್ನು ಅಕರಗಳ ಸಂಗ್ರಹವನ್ನು ಪ್ರಬಂಧ ರಚನೆಯ ಅಂಶಗಳ ಬಗ್ಗೆ ತಿಳಿಸಿದ್ದಾರೆ. ಕೆ.ವಿ.ನಾರಾಯಣರ ಸಂಶೋಧನೆ ಪರಿಕಲ್ಪನೆ, ರಹಮತ್ ತರಿಕೆರೆಯವರ 'ಕನ್ನಡ ಸಂಶೋಧನೆಯ ಅಧ್ಯಯನ' ಮುಂತಾದ ಸಂಶೋಧನ ಗ್ರಂಥಗಳು ಕನ್ನಡ ಸಂಶೋಧನೆಯ ದಾರಿಯನ್ನು ಸುಗಮವಾಗಿ ಸಾಗುವಂತೆ ಮಾಡಿವೆ ಎಂದು ಹೇಳಬಹುದಾಗಿದೆ. ಸಂಶೋಧನೆಯ ವಿವಿಧ ರೂಪಗಳನ್ನು ಸಂಶೋಧನ ಗ್ರಂಥಗಳು ತಿಳಿಸುತ್ತವೆ.

ವಿಶ್ವವಿದ್ಯಾಲಯಗಳು, ಸಂಸ್ಥೆಗಳು, ಅಧ್ಯಯನ ಕೇಂದ್ರಗಳು ಸಂಶೋಧನೆಯ ವಿವಿಧ ರೂಪಗಳನ್ನು ಪರಿಚಯಿಸುತ್ತವೆ. ಸಂಶೋಧನೆ ಎಂದರೆ ಹೀಗೆ ಇರಬೇಕೆಂಬುದನ್ನು ತಿಳಿಸುವ ಗ್ರಂಥಗಳಾಗಿವೆ. ಸಂಶೋಧಕನ ಆರ್ಹತೆಗಳು, ಗ್ರಂಥ ರಚನೆಯ ಉದ್ದೇಶ, ಅಕರಗಳನ್ನು ಕೂಡಿಟ್ಟುಕೊಳ್ಳುವ ವಿಧಾನಗಳನ್ನು ತಿಳಿಸುವ ಗ್ರಂಥಗಳಾಗಿವೆ.

2.3. ಆ) ಸಾಮಾಜಿಕ ಮತ್ತು ಸಾಂಸ್ಕೃತಿಕ ಗ್ರಂಥಗಳು.

ಕ್ರಿ.ಶ.1950ರ ನಂತರದ ಅಧ್ಯಯನಗಳೆಲ್ಲವು ಸಾಮಾಜಿಕ ಮತ್ತು ಸಾಂಸ್ಕೃತಿಕವಾದವುಗಳೇ ಆಗಿವೆ. ಮನುಷ್ಯನು ಜನಪದ ಹಾದಿಯನ್ನಿಡಿದು ಬಂದರೆ ಅತ ದಿನ ನಿತ್ಯ ಜೀವನದಲ್ಲಿ ಅನುಭವಿಸಿದ ಅನುಭವಗಳನ್ನು ಮತ್ತು ಸಾಮಾಜಿಕ ಜೀವನವನ್ನು ಕಟ್ಟಿಕೊಡುವ ಈ ಸಂಶೋಧನೆಗಳು ತಾನು ವಾಸಿಸುತ್ತಿರುವ, ಆಡುತ್ತಿರುವ ಭಾಷೆ ಎಲ್ಲವನ್ನು ಒಟ್ಟಾಗಿ ಕಟ್ಟಿಕೊಟ್ಟಂತಹದ್ದು, ಹಿಂದೆ ಇದ್ದ ಜನಜೀವನ ಸ್ಥಿತಿಗತಿಗಳನ್ನು ಮತ್ತು ಇನ್ನು ಅಳಿಯದೇ ಉಳಿದ ಯಾವುದೇ ಲಿಪಿಗಳಿಲ್ಲದ ಜನಾಂಗ, ಬುಡಕಟ್ಟು ಸಂಸ್ಕೃತಿಯಲ್ಲಿ ಜೀವಿಸುತ್ತಿದ್ದು ಅಂತಹ ಅಧ್ಯಯನಗಳನ್ನು ಶೋಧಿಸಿ ಗ್ರಂಥಗಳನ್ನಾಗಿ ಮಾಡಲಾಗಿದೆ. ಜೀವನ, ಆಚರಣೆಗಳು, ಸಂಪ್ರದಾಯ, ನಂಬಿಕೆ, ಮೌಢ್ಯತೆಗಳಿಂದ ಬೇರ್ಪಡದೆ ಇನ್ನು ಅದೇ ಜೀವನವನ್ನು ನಡೆಸುತ್ತಿರುವವರ ಪರಂಪರೆಯನ್ನು ಸಂಶೋಧನೆಗೆ ಒಳಪಡಿಸಿದ ಎಷ್ಟೋ ಗ್ರಂಥಗಳಿವೆ. "ಸಾಮಾಜಿಕ ಸಂಶೋಧನೆಗೆ ಅಭ್ಯಸಿಸಲು ಮತ್ತು ಪರಿಶೋಧಿಸಲು ಸಾಧ್ಯತೆಯುಳ್ಳ ಸಮಸ್ಯೆಗಳ ಮುಗಿಯದ ದಾಸ್ತಾನೇ ಇದೆ. ಸಾರ್ವತ್ರಿಕ ಅನ್ವಯಿಕತೆ ಇರುವ ಕೆಲವೊಂದು ವಿಶಿಷ್ಟಿಕೃತ ಸಿದ್ಧಾಂತಗಳನ್ನು ಸಾಮಾಜಿಕ ಸಂಶೋಧನೆ ಕೊಡುಗೆಯಾಗಿ ನೀಡಿದೆ, ಈ ಸಿದ್ಧಾಂತಗಳಲ್ಲಿ ಹೆಚ್ಚಿನವು ಸನ್ನಿವೇಶ ಮತ್ತು ಸಂಸ್ಕೃತಿಗೆ ಸೀಮಿತವಾದವು".10

ಕರ್ನಾಟಕದಲ್ಲಿ ಎಷ್ಟೋ ಬುಡಕಟ್ಟು ಜನಾಂಗಗಳು ವಾಸಿಸುತ್ತಿದ್ದು ಅಂತಹವರ ಮೂಲಕ ಮನುಷ್ಯನ ಮೂಲವನ್ನು ಕಂಡುಹಿಡಿಯುವ ಯತ್ನ ನಡೆದಿದೆ. ಕೆಲವು ಸಂಸ್ಕೃತಿಗಳು ಭಿನ್ನವಾಗಿದ್ದು ಅವುಗಳನ್ನು ಉಳಿಸುವ ಸಲುವಾಗಿ ಮತ್ತು ಮುಂದಿನ ಪೀಳಿಗೆಗೆ ತೋರಿಸುವ ಸಲುವಾಗಿ ಈ ಸಂಶೋಧನೆಯು ನಡೆಯುತ್ತಿವೆ. ಶಂಭಾ ಜೋಶಿಯವರ 'ಕರ್ನಾಟಕ ಸಂಸ್ಕೃತಿ' ಹೊಸ ಸಂಸ್ಕೃತಿಯನ್ನು ಬೆಳಕಿಗೆ ತರುವುದರ ಜೊತೆಗೆ ಕೆಲವು ಪುರಾಣಗಳನ್ನು ತಿಳಿಯಲಾಗಿದೆ. ಇಲ್ಲಿ ಪ್ರತಿಯೊಂದು ಜನಾಂಗಕ್ಕೂ ತನ್ನದೇಯಾದ ಇತಿಹಾಸ ಪುರಾಣಗಳು ಇರುವುದರಿಂದ ಜಾನಪದೀಯಾವಾದ ಸಂಶೋಧನೆಗಳಿಂದ ಅನೇಕ ವಿಷಗಳನ್ನು ತಿಳಿಯಬಹುದಾಗಿದೆ. ಆದರೆ ಯಾವುದೇ ರೀತಿಯ ದಾಖಲೆಗಳಿಲ್ಲದೆ ಇರುವುದರಿಂದ ಅದನ್ನು ಒಂದು ಕ್ಷೇತ್ರಕಾರ್ಯವಾಗಿ ಅಧ್ಯಯನ ನಡೆಸಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ಅನೇಕ ಮಹಾಕಾವ್ಯಗಳು ಹೊರಬಂದಿವೆ ಎಂದು ಹೇಳಬಹುದಾಗಿದೆ. ಹಿ.ಚಿ. ಭೋರಲಿಂಗಯ್ಯನವರ 'ಮಹಾದೇಶ್ವರಕಾವ್ಯ,' ಸಿದ್ದಲಿಂಗಯ್ಯನವರ 'ಗ್ರಾಮದೇವತೆಗಳು,' ಬರಗೂರವರ ಸಂಸ್ಕೃತಿ ಉಪಸಂಸ್ಕೃತಿ, ಪಿ,ಕೆ ಖಂಡೋಬಾ ಅವರ ಲಂಬಾಣಿ ಸಂಸ್ಕೃತಿ, ಬೆಟಗೇರೆ ಕೃಷ್ಣ ಶರ್ಮರ ಕರ್ನಾಟಕ ಜನಜೀವನ, ಸಾಮಾಜಿಕ ಜನಜೀವನ ಎಂದಾಗ ಒಂದು ಊರಿನ ಅಥವಾ ಒಂದು ವಿಷಯಕ್ಕೆ ಸಂಬಂಧಿಸಿದ್ದ ಚರಿತ್ರೆ ಪುರಾಣಗಳನ್ನೊಳಗೊಂಡಂತೆ ಇರುವ ಬರವಣಿಗೆ ಅಥವಾ ಅಂತಹ ವಿಷಯ ಅದನ್ನು ಕುರಿತು ಅಧ್ಯಯನ ನಡೆಸುವುದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಶೋಧನೆಯಾಗಿದೆ, ಸಂಸ್ಕೃತಿ ಸಮಾಜದ ಹೆಸರನ್ನ ಸೇರಿಸಿಕೊಂಡು ಹೇಳುವಂತದ್ದು ಇದರಲ್ಲಿ ಧರ್ಮ, ಜಾತಿ, ಸಂಪ್ರದಾಯ, ಆಚರಣೆಗಳು, ನಂಬಿಕೆ, ಮೌಢ್ಯತೆ, ನಿಯಮಗಳು ಎಲ್ಲವು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನಗಳೇ ಆಗಿವೆ,

10. ಪ್ರೊ.ಜಿ. ಸುಬ್ರಮಣ್ಯ – ಸಾಮಾಜಿಕ ಸಂಶೋಧನೆ ಪದ್ಧತಿಗಳು ಮತ್ತು ತಂತ್ರಗಳು –

ಪುಟ. 20

2.3.ಇ) ವೈಜ್ಞಾನಿಕ ಸಂಶೋಧನ ಗ್ರಂಥಗಳು

ವಿಜ್ಞಾನ ಎಂಬುದು ಜ್ಞಾನಗಳ ಸಂಕೇತವಾದುದು. ಆಧುನಿಕ ಯುಗವನ್ನು ವಿಜ್ಞಾನ ಯುಗವೆಂದು ಕರೆಯಬಹುದಾಗಿದೆ. "ವೈಜ್ಞಾನಿಕ ನಿಖರತೆಯನ್ನು ಸಾಧಿಸುವುದು ಪ್ರತಿಯೊಂದು ಸಂಶೋಧನೆಯ ಗುರಿಯಾಗಿದೆ. ಜ್ಞಾನ ಸಂಪಾದನೆಯೇ ವಿಜ್ಞಾನದ ಗುರಿ ಇದಕ್ಕಾಗಿ ಹಲವಾರು ಸಾಧನಗಳನ್ನು, ಪದ್ಧತಿಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ವ್ಯವಸ್ಥೆಯು ಜ್ಞಾನವನ್ನು ಸಂಪಾದಿಸುವ ಎಲ್ಲ ಸಾಧನಗಳನ್ನು ಒಳಗೊಂಡಿದೆ"11 ವಿಜ್ಞಾನ ಯಾವುದೇ ಅಕರಗಳಿಂದ ಸೃಷ್ಟಿಯಾದುದ್ದಲ್ಲ ಪ್ರಯೋಗದ ಮೂಲಕ ದಾಖಲಾದದ್ದು, ವಿಜ್ಞಾನದಲ್ಲಿ ಸತ್ಯವನ್ನು ಕಾಣದೆ ಯಾವುದೇ ರೀತಿಯ ಪ್ರಯೋಗವನ್ನು ನಡೆಸಲಾಗದು. ಸಸ್ಯಶಾಸ್ತ್ರ, ಭೌತಶಾಸ್ತ್ರ, ಭೂಗೋಳ, ರಸಾಯನಶಾಸ್ತ್ರ, ಜೀವಶಾಸ್ತ್ರ, ಮನೋವಿಜ್ಞಾನಗಳಂತಹ ಕ್ಷೇತ್ರದಲ್ಲಿ ಯಾವುದೇ ರೀತಿಯಲ್ಲಿ ದಾಖಲಾದರು ಅದು ಪ್ರಯೋಗದ ಸಿದ್ಧಾಂತಗಳಾಗಿರುತ್ತವೆ. ಇಲ್ಲಿ ಯಾವುದೇ ರೀತಿಯ ಭಾವನೆ,ಊಹೆಗಳಿಗೆ ಅವಕಾಶಗಳಿಲ್ಲ ಯಾವುದೇ ಕೆಲಸವಾದರೂ ಸಂಶೋಧನೆಯ ಮೂಲಕವೇ ನಡೆಯಬೇಕು, ಐನ್‌ಸ್ಟೀನ್, ಗೇಲಿಲಿಯೋ, ಪ್ಲಾಂಕ್ಸ್, ನ್ಯೂಟನ್, ಸಿಗ್ಮಾಂಡ್‌ಪ್ರಾಯ್ಡ್, ಆಗಸ್ಟ್‌ಕೊಮ್ಟೆ, ಚಾರ್ಲ್ಸ್‌ಬ್ಯಾಬೇಲ್ಜ್, ನಂತಹ ಎಷ್ಟೋ ವಿಜ್ಞಾನಿಗಳನ್ನು ಗುರುತಿಸಬಹುದಾಗಿದೆ.

ಮೊದಲ ಸಂಶೋಧನೆ ಎಲ್ಲವೂ ಜಾನಪದೀಯ ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದ್ದಾಗಿದೆ. ಪೂರ್ಣಚಂದ್ರತೇಜಸ್ವಿಯವರ ಮೀಕ್ಸಿಂಗ್ ಲಿಂಕನ್ ಮಾನವ ಶೋಧದ ಪ್ರಮುಖ ಗ್ರಂಥವಾಗಿದೆ. ಹಾಗೆಯೇ ವಲ್ಲಭಚಾರ್ಯರ ವೈದ್ಯಚಿಂತಾಮಣಿ, ಪಿ.ರಾಘವೇಂದ್ರರಾಯರ ಪ್ರಾಣಿಶಾಸ್ತ್ರ, ಬಿ.ಎನ್.ದಾಸಪ್ಪನ ಖನಿಜಶಾಸ್ತ್ರ, ಕುಕ್‌ರವರ ಕನ್ನಡಯಂತ್ರಶಾಸ್ತ್ರ, ರಾಮಕೃಷ್ಣ.ಜಿ.ರವರ ಭಾರತೀಯ ವಿಜ್ಞಾನ, ವೀರೇಶ ಬಡಿಗೇರ 'ಕನ್ನಡಹಸ್ತಪ್ರತಿಸಂಶೋಧನೆ' ಮತ್ತು 'ಸಾಫ್ಟ್‌ವೇರ್' ತಂತ್ರಜ್ಞಾನಗಳಂತಹ ಗ್ರಂಥಗಳನ್ನು ನೋಡಬಹುದು, ಇಲ್ಲಿ ವಿಜ್ಞಾನದ ಮೇಲೆ ಅದ ಪ್ರಯೋಗಗಳು ಕನ್ನಡದಲ್ಲಿ ಬೆರಳಣಿಕೆ ಮಾತ್ರವಾಗಿವೆ.

ಬೆಳೆಯುತ್ತಿರುವ ಸಮಾಜದಲ್ಲಿ ನಡೆದು ಬರುತ್ತಿರುವ ವಿಜ್ಞಾನವು ಮನುಷ್ಯನ ಹೊಸ ಆಲೋಚನೆಗಳಿಗೆ ದಾರಿಮಾಡಿಕೊಟ್ಟಿವೆ. ಹಸ್ತಪ್ರತಿಗಳ ಬಳಕೆಯಲ್ಲಿ ಮತ್ತು ಕೆಲವು ಸಾಹಿತ್ಯಕ್ಕೆ ಸಂಬಂಧಿಸಿದ್ದ ವಿಷಯಗಳನ್ನು ತಿಳಿಯಲು, ಕಾಲವನ್ನು ಗುರುತಿಸಲು, ಗ್ರಂಥಗಳನ್ನು ವ್ಯವಸ್ಥಿತವಾಗಿ ಮುದ್ರಿಸಲು ವಿಜ್ಞಾನವನ್ನು ಬಳಸಲಾಗುತ್ತಿದೆ. ವಿಜ್ಞಾನವು ಈ ಸಮಾಜವನ್ನು ಮುನ್ನಡೆಸುವ ಮತ್ತು ಮನುಷ್ಯನ ಅಭಿವೃದ್ಧಿಯಲ್ಲಿ ಪಾತ್ರವಹಿಸಿದೆ. ಆಧುನಿಕ ಮನುಷ್ಯನ ಆಲೋಚನೆಗಳು ಬದಲಾಗುತ್ತಿರುವ ಸಂದರ್ಭದಲ್ಲಿ ಅದಕ್ಕೆ ತಕ್ಕನಾದ ಸಮಾಜವನ್ನು ಸೃಷ್ಟಿ ಮಾಡುತ್ತಿದೆ.

---

11. ಪ್ರೋ.ಜಿ. ಸುಬ್ರಮಣ್ಯ – ಸಾಮಾಜಿಕ ಸಂಶೋಧನೆ ಪದ್ಧತಿಗಳು ಮತ್ತು ತಂತ್ರಗಳು – ಪುಟ. 2

2.3.ಈ) ವಿಮರ್ಶಾತ್ಮಕ ಸಂಶೋಧನ ಗ್ರಂಥಗಳು

ಯಾವುದೇ ಗ್ರಂಥವಾದರೂ ವಿಮರ್ಶೆಯಿಲ್ಲದೆ ಇರಲಾರದು ಒಂದು ಗ್ರಂಥದ ಬೆಲೆಯನ್ನು ನಿರ್ಣಯಿಸುವುದು ವಿಮರ್ಶೆಯಾಗಿದೆ. ವಿಮರ್ಶೆ ಎನ್ನುವುದು ಪ್ರಾಚೀನ ಸಾಹಿತ್ಯ ಕಾಲದಲ್ಲಿ ಟೀಕೆ ಟಿಪ್ಪಣಿ ಮೂಲಕ ಬಂದು ಪಾಶ್ಚಿಮಾತ್ಯರ 'ಕ್ರೀಟಿಸಿಸಂ' ಎನ್ನುವುದರ ಮೂಲಕ ಪರಿಚಯವಾಗಿ 'ವಿಮರ್ಶಾ' ಎನ್ನುವ ಪದವಾಗಿ ಬಳಕೆಯಲ್ಲಿದೆ. ವಿ>ಮೃಶ್=ವಿಮರ್ಶಾ ಎನ್ನುವ ಅರ್ಥ ಉಜ್ಜಿನೋಡು ಪರೀಕ್ಷಿಸು ಎನ್ನುವ ವ್ಯಾಪಕಾರ್ಥ ರೂಡಿಯಲ್ಲಿದೆ. ಯಾವುದೇ ಗ್ರಂಥವಾದರೂ ಅದರ ಪಾತ್ರವನ್ನು ಈ ಸಮಾಜದಲ್ಲಿ ಹೇಗೆ ಬಿಂಬಿತವಾಗುತ್ತದೆ ಎಂದು ನಿರ್ಣಯಿಸುವ, ಬೆಲೆ ಕಟ್ಟುವ ಕೆಲಸ ಮಾಡುತ್ತದೆ. ಕವಿ, ಲೇಖಕನಾದವನು ಗ್ರಂಥವನ್ನು ಸತ್ಯದ ಮೂಲಕ ಕಟ್ಟಿದ್ದನೊ, ಅಸತ್ಯದ ಮೂಲಕ ಕಟ್ಟಿದ್ದನೊ ಎಂದು ತಿಳಿಸುವ ಮತ್ತು ಉಪಯೋಗಿಸಿದ ಅಕರಗಳು ಹೇಳುವ ಮಾತುಗಳಿಂದ ಅದು ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಸುವ ಯತ್ನ ಮಾಡುತ್ತದೆ.

ವಿಮರ್ಶೆ ಎನ್ನುವುದು ಒಂದು ರೀತಿಯ ಸಂಶೋಧನೆಯಾಗುತ್ತದೆ. ಓದುಗ ಆ ಗ್ರಂಥವನ್ನು ಈ ಸಮಾಜದಲ್ಲಿ ನೋಡುವ ರೀತಿಯನ್ನು ಪ್ರತಿಬಿಂಬಿಸುತ್ತದೆ. ಗ್ರಂಥವು ಸಾಮಾಜಿಕವಾಗಿ,ಧಾರ್ಮಿಕವಾಗಿ, ರಾಜಕೀಯವಾಗಿ, ಸಾಹಿತ್ಯದ ಯಾವ ಕಾಲಘಟ್ಟವೆಂದು ತಿಳಿಸುವ ಯತ್ನವನ್ನು ಮಾಡುತ್ತದೆ. ಇಂಥ ಗ್ರಂಥಗಳು ಅನೇಕವಿದ್ದು ಕನ್ನಡ ಸಂಶೋಧನೆಗೆ ಎಲ್ಲಿಲ್ಲದ ಬೆಲೆಯನ್ನು ತಂದು ಕೊಟ್ಟಿದೆ. ಕುವೆಂಪುರವರ 'ರಸೋವೈಸಃ', ಬಿ.ಎಂ.ಶ್ರೀ. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ.' ಜಿ.ಎಸ್. ಶಿವರುದ್ರಪ್ಪ 'ಸೌಂದರ್ಯಸಮೀಕ್ಷೆ, 'ಕಾವ್ಯಾರ್ಥಚಿಂತನೆ,' ವಿಮರ್ಶೆಯತತ್ವಗಳು, ಆರ್.ವಿ.ಭಂಡಾರಿ 'ಸಮಾಜವಾದಿವಾಸ್ತವ,' ಎಸ್. ಶಿವಾನಂದ ವಿಮರ್ಶೆಯ ಸವಾಲುಗಳು, ಡಿ.ಆರ್.ನಾಗರಾಜುರ ಅಮೃತ ಮತ್ತು ಗರುಡ, ಸಿ.ಎನ್. ರಾಮಚಂದ್ರನ್ ಸಾಹಿತ್ಯ ವಿಮರ್ಶೆ, ರಹಮತ್ ತರಿಕೆರೆ ಸಾಂಸ್ಕೃತಿಕ ಅಧ್ಯಯನ, ಕೆ.ವಿ. ಸುಬ್ಬಣ್ಣ 'ಕವಿರಾಜಮಾರ್ಗ' ಮತ್ತು 'ಕನ್ನಡ ಜಗತ್ತು', ಕೀರ್ತಿನಾಥ ಕುರ್ತಕೋಟಿ ಯುಗಧರ್ಮಮತ್ತುಸಾಹಿತ್ಯ ದರ್ಶನ, ಕೆ.ವಿ. ನಾರಾಯಣರ ಬೇರುಕಾಂಡ ಚಿಗುರು, ಬಸವರಾಜ ಕಲ್ಗುಡಿರವರ 'ನಕ್ಷೆ ನಕ್ಷತ್ರ', ಯು.ಆರ್.ಅನಂತಮೂರ್ತಿ ಪೂರ್ವಪರ, ಪಿ.ವಿ.ನಾರಯಣರ ಧರ್ಮಮತ್ತುರಾಜಕಾರಣ, ಎಚ್.ಎಸ್.ರಾಘವೇಂದ್ರರಾವ್ ಹಾಡೇಹಾದಿಯತೋರಿತು. ಎಚ್.ಎಸ್. ಶ್ರೀಮತಿ 'ಸಾಹಿತ್ಯಾಧ್ಯಯನಸಮೀಕ್ಷೆ'ಯಂತಹ ನೂರಾರು ವಿಮರ್ಶಾ ಗ್ರಂಥಗಳನ್ನು ನೋಡಬಹುದು.

ಒಂದು ಗ್ರಂಥಕ್ಕೆ ಹತ್ತಾರು ವಿಮರ್ಶಾ ಸಂಶೋಧನೆಗಳು ರಚಿತವಾಗುತ್ತಿವೆ. ವಿಮರ್ಶೆಯು ಎಲ್ಲ ಕ್ಷೇತ್ರವನ್ನು ಒಳಗೊಂಡಂತೆ ಇಂದು ನಡೆಯುತ್ತಿದ್ದು ಓದುಗನಿಗೆ ಸರಳವಾಗಿ ಅರ್ಥವಾಗುವಂತೆ ಮಾಡುತ್ತಿವೆ. ಮೊದಲ ಓದಿನ ನಿರ್ಣಯವೆಂದರೆ ಅದು ವಿಮರ್ಶೆಯಾಗಿದೆ ಎಂದು ಹೇಳಬಹುದು. ಒಂದು ಗ್ರಂಥ ಬಿಡುಗಡೆಯಾದ ನಂತರ ಓದುಗನ ಅರ್ಥೈಸುವ ರೀತಿಯಿಂದ ಮೊದಲ ವಿಮರ್ಶೆ ಹೊರಬಿಳುತ್ತದೆ. ವಿಮರ್ಶೆ ಸಂಶೋಧನೆಯ ಎರಡನೇ ಹಂತವಾಗಿದೆ.

ಅಧ್ಯಾಯ: 3

ಸಂಶೋಧನ ಗ್ರಂಥಗಳ ವಿವಿಧ ಅಧ್ಯಯನ

3.1 ಶಾಸನ ಅಧ್ಯಯನ

3.2 ಹಸ್ತಪ್ರತಿ ಅಧ್ಯಯನ

3.3 ಸಾಹಿತ್ಯಾಧ್ಯಯನ

ಅಧ್ಯಾಯ – 3

ಸಂಶೋಧನಾ ಗ್ರಂಥಗಳ ವಿವಿಧ ಅಧ್ಯಯನಗಳು

ಕನ್ನಡ ಸಂಶೋಧನೆ ಎಲ್ಲ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದರೂ ಹೊಸ ಆಲೋಚನೆಗಳನ್ನು ಹುಡುಕತ್ತಲೇ ಬೇಕಾಗಿರುವುದರಿಂದ ಈ ಅಧ್ಯಯನವನ್ನು ಅಳವಡಿಸಿದ್ದೇನೆ. ಸಾಹಿತ್ಯದ ಇತಿಹಾಸವನ್ನು ತಿಳಿಯಲು ಸಾಕಷ್ಟು ಅಕರಗಳು ಅಂದರೆ ಭಾಷೆ, ಸಾಹಿತ್ಯ, ಶಾಸನ, ಹಸ್ತಪ್ರತಿ, ರಾಜಮನೆತನಗಳು, ಧಾರ್ಮಿಕ ಅಧ್ಯಯನಗಳು ಐತಿಹಾಸಿಕ ಸಾಹಿತ್ಯವನ್ನು ಸೃಷ್ಟಿಸಿದವು. ಸಣ್ಣ ಸಣ್ಣ ವಿಷಯಗಳಾದರೂ ಸತ್ಯವನ್ನು ತಿಳಿಯಬೇಕಾದರೂ ಸಾಕಷ್ಟು ಪ್ರಯತ್ನವನ್ನು ಮಾಡಬೇಕಾಗಿರುತ್ತದೆ.

ನಾಗವರ್ಮನ ಹೆಸರಿನ ಉಲ್ಲೇಖ, ಪಂಪನ ತಂದೆಯ ಹೆಸರಿನ ಅಧ್ಯಯನಗಳಂತಹ ಎಷ್ಟೋ ಅಧ್ಯಯನಗಳನ್ನು ನಾವು ಹುಡುಕಬೇಕಾಗಿದೆ. ಎಂ.ಚಿದಾನಂದಮೂರ್ತಿಯವರು ಹೇಳಿರುವಂತೆ ಅಬ್ಬಣ್ಣಬ್ಬೆ ಪಂಪಾಕ್ಷೇತ್ರಕ್ಕೆ ನಡೆದು ಕೊಳ್ಳುತ್ತಿದ್ದುದರಿಂದ ಈ ಹೆಸರು ಬಂದಿರಬೇಕು ಎಂಬುದು, ಯಾಕೆಂದರೆ ಸಂಪ್ರದಾಯ ನಿಷ್ಠರಾದವರು ಸಾಮಾನ್ಯವಾಗಿ ಮನೆಯ ದೇವರ ಹೆಸರನ್ನು ಇಡುವುದು ಮತ್ತು ಮನೆಯ ದೇವರಿಗೆ ಹರಕೆ ಹೊರುವುದು ಮಾನವನ ಉಗಮದಿಂದಲೂ ಬಂದಿದೆ. ಅಂದರೆ ತಾಯಿಗೆ ಪ್ರಿಯವಾದ ಪಂಪಕ್ಷೇತ್ರದಿಂದ ಪಂಪನ ಹೆಸರು ತಂದೆಗೆ ಪ್ರಿಯಾವಾದ ಜೈನಧರ್ಮಕ್ಕೆ ಅನುಗುಣವಾಗಿ ಜಿನವಲ್ಲಭನ ಹೆಸರು ಬಂದಿರಬೇಕು. ಜೈನ ಜಿನನಾಗಿ ಧಾರ್ಮಿಕ ಹೆಸರನ್ನು ಇಟ್ಟುಕೊಂಡಿರಬೇಕು. ಪಂಪನು ಸಹ ಧಾರ್ಮಿಕವಾಗಿ ಆದಿಪುರಾಣವನ್ನು ಲೌಕಿಕವಾಗಿ ವಿಕ್ರಮಾರ್ಜುನವಿಜಯವನ್ನು ರಚಿಸಿರುವಂತೆ ಹೆಸರು ಕೂಡ ಹಾಗೆಯೇ ಆಗಿದೆ.

ಈ ರೀತಿಯಾಗಿ ಯಾವುದೋ ಒಂದು ದಾರಿ ಹಿಡಿದು ಹೊರಟರೆ ಸತ್ಯವನ್ನು ಕಾಣುವ ತನಕ ಬಿಡಬಾರದು. ನಮ್ಮ ವಿದ್ವಾಂಸರು ಕನ್ನಡ ಸಾಹಿತ್ಯವನ್ನು ಅನೇಕ ಯುಗಗಳ ಮೂಲಕ ರಚಿಸಿದ್ದಾರೆ. ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ, ಎಂದು ಅದೇ ರೀತಿ ಈ ಅಧ್ಯಯನದಲ್ಲಿ ಶಾಸನ, ಹಸ್ತಪ್ರತಿ, ಸಾಹಿತ್ಯ ಎಂದು ವಿಂಗಡಿಸಿ ಅಧ್ಯಯನಕ್ಕೆ ಅಳವಡಿಸಿದ್ದೇನೆ ಮತ್ತು ಗ್ರಂಥ ಎನ್ನುವ ಪದಕ್ಕೆ ಸಂಬಂಧವನ್ನು ಕಲ್ಪಿಸಿದ್ದೇನೆ. ಇಲ್ಲಿಯವರೆವಿಗೂ ಗ್ರಂಥ ಎನ್ನುವ ಪದಕ್ಕೆ ಯಾವುದೇ ರೀತಿಯ ಅಧ್ಯಯನಗಳು ನಡೆದಿಲ್ಲವಾದರೂ ಇಲ್ಲಿ ಸ್ವಲ್ಪ ಮಟ್ಟಿಗೆ ಗ್ರಂಥ ಎನ್ನುವ ಪದವನ್ನು ಪ್ರತ್ಯೇಕವಾಗಿ ನೋಡುವ ಪ್ರಯತ್ನ ಮಾಡಲಾಗಿದೆ.

ಯಾವುದೇ ಅಧ್ಯಯನವನ್ನು ಕೈಗೊಳ್ಳಬೇಕಾದರೂ ನಾವು ಹಿಡಿಯಾಗಿ ನೋಡುವುದಕ್ಕಿಂತ ಬಿಡಿಯಾಗಿ ನೋಡುವುದು ಒಳ್ಳೆಯದು ಯಾಕೆಂದರೆ ವಿಷಯವನ್ನು ನಿರ್ಧಿಷ್ಟವಾಗಿ ತಿಳಿದು ಕೊಳ್ಳಬಹುದು. ಸಂಶೋಧನೆಯ ವಿಸ್ತಾರವನ್ನು ಅಭಿವೃದ್ಧಿ ಪಡಿಸಬಹುದು. ಯಾವುದೇ ವಿಷಯವಾದರೂ ಅದರದ್ದೇ ಆದ ಮಹತ್ವವಿರುತ್ತದೆ, ಇತಿಹಾಸವಿರುತ್ತದೆ. ಅಂತಹ ಕಾರ್ಯವನ್ನು ಈ ಅಧ್ಯಯನದಲ್ಲಿ ಶಾಸನ, ಹಸ್ತಪ್ರತಿ, ಸಾಹಿತ್ಯ ಕ್ಷೇತ್ರವಾಗಿ ವಿಂಗಡಿಸಿ ಸಂಶೋಧನ ಗ್ರಂಥಗಳಿಗೆ ಸಂಬಂಧವನ್ನು ಕಲ್ಪಿಸಿ ರಚಿಸಲಾಗಿದೆ.

3.1. ಶಾಸನ ಅಧ್ಯಯನ

ಒಂದು "ನಾಡಿನ ಇತಿಹಾಸವೆಂದರೆ ಅ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಬಹು ಪ್ರಚಲಿತವಾಗಿದೆ. ಇತಿಹಾಸವನ್ನು ಚಿತ್ರಿಸುವ ಗ್ರಂಥದ ಕೊನೆಯಲ್ಲಿ ಆ ನಾಡಿನ, ಕಲೆ, ಧರ್ಮ, ಇತ್ಯಾದಿಗಳನ್ನು ಕುರಿತ ವಿಷಯಗಳು ಒಂದು ಅನುಬಂಧದ ರೂಪದಲ್ಲಿರುವುದುಂಟು ಅಥವಾ ಅವುಗಳನ್ನು ನಿರೂಪಿಸುವ ಒಂದೆರಡು ಅಧ್ಯಯಗಳು ಬಂದಿರುವುದುಂಟು"12 ಅಂತಹ ಅಧ್ಯಯನಗಳನ್ನು ಪ್ರತಿಜಿಂಬಿಸುವ ಶಾಸನಗಳು ಈ ನಾಡಿನ ಚರಿತ್ರೆಯನ್ನು ತೋರಿಸುವ ವಸ್ತುಗಳಾಗಿವೆ, ಇಂತಹ ಶಾಸನಗಳ ಅಧ್ಯಯನ ನಡೆಸಿ ಎಷ್ಟೊ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಕ್ರಿ.ಪೂ. 3ನೇ ಶತಮಾನದ ಅಶೋಕನ ಕಾಲದಿಂದಲೂ ಶಿಲಾಲಿಪಿಗಳು ಶಾಸನಗಳು ಸಿಕ್ಕಿವೆ, ಬಂಡೆಗಳು, ಶಿಲಾಸ್ತಂಭ, ಇಟ್ಟಿಗೆ, ಮರ, ಮೂಳೆಗಳ ಮೇಲು ಈ ಶಾಸನಗಳನ್ನು ಬರೆಸಿದ್ದರು ಎಂಬ ಉದಾಹರಣೆಗಳಿವೆ. ಶಾಸನಗಳನ್ನು ಕಾಡುಗಳ ಮಧ್ಯ ಬೆಟ್ಟಗಳಲ್ಲಿ, ಗುಡ್ಡಗಳಲ್ಲಿ ಬರೆಸಿ ಹಾಕಿಸುತ್ತಿದ್ದರು. ಯಾಕೆಂದರೆ ಸಾಮಾನ್ಯವಾಗಿ ಕಾಡು ಮೇಡುಗಳಲ್ಲಿ ವಾಸಿಸುತ್ತಿದ್ದ ಜನರು ಆ ಶಾಸನಗಳನ್ನು ನೋಡುತ್ತಾರೆಂದು ಕಾಲ ಕ್ರಮೇಣ ಶಾಸನಗಳನ್ನು ಜನರ ಕೈಯಿಂದ ಹಾಳಾಗುವುದನ್ನು ತಪ್ಪಿಸಲು ಊರುಗಳ ಮಧ್ಯ ಹಾಕಿಸುತ್ತಿದ್ದರು ಎನ್ನಲಾಗಿದೆ. "ವ್ಯಕ್ತಿ ನೆಲೆಯಲ್ಲಿ ದಾಖಲೆ ಆಗತ್ಯವೆನಿಸಿರುವುದು ಸಹಜ ಆದುದರಿಂದ ಶಿಲಾಶಾಸನಗಳಿಗೆ ಬದಲು ಮನೆಯಲ್ಲಿ ಸುರಕ್ಷಿತ ಮಾಡಲು ಸಾಧ್ಯವಿರುವ ತಾಮ್ರ ಶಾಸನಗಳನ್ನು ಬರೆಸಿಕೊಂಡರು"13 ಆ ವೇಳೆಗಾಗಲೇ ತಾಮ್ರದ ಶೋಧನೆಯಾಗಿತ್ತು ಎಲ್ಲಾ ಗ್ರಂಥಗಳು ಆ ವೇಳೆಯಲ್ಲಿ ತಾಮ್ರಗಳಿಂದಲೇ ಬರೆಸಲ್ಪಟ್ಟರು. ಅದು ಮುಂದುವರೆದು ಅಷ್ಟೋತ್ತಿಗಾಗಲೇ ಹಸ್ತಪ್ರತಿಗಳಲ್ಲಿ ಸಾಕಷ್ಟು ಗ್ರಂಥಗಳು ರಚನೆಯಾಗಿದ್ದವು.

ಈ ರೀತಿಯಾಗಿ ರಚನೆಯಾದ ಆನೇಕ ಪ್ರತಿಗಳನ್ನು ಸೇರಿಸಿ ಗ್ರಂಥ ಎನ್ನುವ ಪದ ಬಳಕೆಗೆ ಬಂದದ್ದು ಪ್ರಾಚೀನ ಸಾಹಿತ್ಯ ಕಾಲ ಘಟ್ಟದಲ್ಲಿಯೇ ಸಾಲದಕ್ಕೆ ತಾಮ್ರ ಪಟಗಳು ಹೆಚ್ಚಾಗಿ ಸಿಗದೇ ಇದ್ದಾಗ ತಾಳೆಗರಿಗಳನ್ನೇ ಬಳಸುತ್ತಿದ್ದರು. ಅದರೆ ಗ್ರಂಥ ಎನ್ನುವ ಪದಕ್ಕೆ ಸರಿಯಾದ ನಿದರ್ಶನಗಳು ದೊರಕಿಲ್ಲ, ಕಟ್ಟಿನ ರೂಪದಲ್ಲಿ ಸಿಕ್ಕಿದ್ದರಿಂದ ಕವಿ ರಚಿಸಿದ ಕಟ್ಟು ಎಂದು ಕರೆದರು, ಶಾಸನಗಳನ್ನು ರಚನೆ ಮಾಡುವುದಕ್ಕಿಂತ ಮುಂಚಿತವಾಗಿ, ಅಂದರೆ ಬಂಡೆಗಳ ಮೇಲೆ ಕೊರೆಯುವುದಕ್ಕಿಂತ ಮೊದಲು ಹಸ್ತಪ್ರತಿಗಳಲ್ಲಿ ಬರೆದು ನಂತರ ಶಾಸನಗಳಲ್ಲಿ ಕೊರೆಯುತ್ತಿದ್ದರು. ಶಾಸನಕ್ಕೂ ಗ್ರಂಥಕ್ಕೂ ನಿಕಟವಾದ ಸಂಬಂಧವಿದ್ದು ಗ್ರಂಥಗಳಿಂದ ಶಾಸನ, ಶಾಸನದಿಂದ ಗ್ರಂಥ ಎನ್ನುವ ರೀತಿಯಲ್ಲಿ ಪ್ರಾಚೀನ ದಾಖಲೆಗಳಿರುವುದನ್ನು ಗಮನಿಸಬಹುದಾಗಿದೆ. ಯಾವುದೇ ಸಾಹಿತ್ಯವಾದರೂ ಅದು ಮೊದಲು ಪ್ರಯೋಗವಾಗಿದ್ದು ಹಸ್ತಪ್ರತಿ ತಾಮ್ರ ಪಟಗಳ ಮೇಲೆ, ಲಿಪಿಕಾರನಿಂದ ಕೊರೆದು ರಾಜನ ಸಮ್ಮುಖದಲ್ಲಿ ರಾಜಾಜ್ಞೆ ಪಡೆದು ನಂತರ ಶಾಸನಗಳನ್ನು ಕೊರೆಸುತ್ತಿದ್ದರು, ಅ ಸಂದರ್ಭದಲ್ಲಿ ಶಾಸನಕ್ಕೂ ಗ್ರಂಥಕ್ಕೂ ಸ್ವಲ್ಪ ಬದಲಾವಣೆಗಳಾಗುತ್ತಿದ್ದವು.

12.ಡಾ.ಎಂ.ಚಿದಾನಂದಮೂರ್ತಿ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಪುಟ. 1

13.ಎಂ, ಎಂ, ಕಲ್ಬುರ್ಗಿ – ಮಾರ್ಗ,2 – ಪುಟ. 396

ಶಾಸನ ಎನ್ನುವ ಪದ 'ಶಾಸ್' ಎನ್ನುವ ಧಾತುವಿನಿಂದ ಬಂದಿದೆ ಶಾಸ್ ಎಂದರೆ ಆಜ್ಞೆ ಎಂದಾಗುತ್ತದೆ. ಆಜ್ಞೆ, ಶಿಕ್ಷಿಸು, ಪಾಲಿಸು, ನಿಯಮ, ಎನ್ನುವ ವ್ಯಾಪಕಾರ್ಥ ನೀಡುತ್ತದೆ. ರಾಜನು ಹೊರಡಿಸಿದ ಆಜ್ಞೆಗಳನ್ನು ಕೊರೆಸಿ ಜನರಿಗೆ ತಿಳಿಯುವಂತೆ ಮಾಡುತ್ತಿದ್ದರು ಎಂದು ಹೇಳಬಹುದಾಗಿದೆ. ರಾಜನ ನಿಯಮವನ್ನು ಕೆತ್ತಲ್ಪಟ್ಟ, ಕೊರೆದ ಬರಹವನ್ನು ಶಾಸನ ಎಂದು ಕರೆಯಾಲಾಗಿದೆ. ಶಾಸನ > ಆಜ್ಞೆ, ಕೆತ್ತಲ್ಪಟ್ಟಬರಹ, ಗ್ರಂಥ > ಬರಹ ಕೂಡಿಟ್ಟಿದ್ದು, ಹಿಡಿದಿಟ್ಟಿದ್ದು ಎನ್ನುವ ಅರ್ಥವನ್ನು ನೀಡುತ್ತದೆ. ಸಂಶೋಧನೆಗೂ ಶಾಸನಕ್ಕೂ ಸಂಬಂಧವಿದ್ದು ಕೆತ್ತಲ್ಪಟ್ಟ ಆಜ್ಞೆಯನ್ನು ಹುಡುಕಿ ಶುದ್ಧಗೊಳಿಸಿ ಗ್ರಂಥಗಳಲ್ಲಿ ಹಿಡಿದಿಡುತ್ತದೆ. ರಾಜನ ಆಜ್ಞೆಯ ಬರಹವನ್ನು ಕೂಡಿಟ್ಟು, ಹಿಡಿದಿಟ್ಟು ತೋರಿಸುವಂತಹದಕ್ಕೆ ಗ್ರಂಥ ಎಂದು ಕರೆಯುತ್ತಾರೆ. ಶಾಸನ ಬರೆಸುವುದಕ್ಕಿಂತ ಮುಂಚಿನ ಪೂರ್ವ ತಯಾರಿಯೇ ಗ್ರಂಥ ಎಂದು ಕರೆಯುವುದಾಗಿದೆ.

"ಪೊಲದ ಸೀಮೆಯೆಲ್ಲಮಂ ಒ(ಓ)ಲೆಯೊಳ್ಬರೆಂದು..ನ್ದು ಕಲ್ಲು ಶಾಸನಮಾಗೆ ಬರೆದುಕೊಂಡೆಮು ಓಲೆಯ ಮೇಲೆ ಬರೆಯ ಬೇಕಾದ್ದ ವಿಷಯವನ್ನು ಒಬ್ಬ ಸಿದ್ದಪಡಿಸಿದರೆ ಇವನೇ ಕೃತಿಕಾರ, ಅದನ್ನು ಶಿಲೆಯ ಮೇಲೆ ಬಳಪದಲ್ಲಿ ಮತ್ತೊಬ್ಬ ಬರೆದು ಕೊಡುತ್ತಿದ್ದನು, ಶಿಲ್ಪಿ ಅದನ್ನು ಕೊರೆಯುತ್ತಿದ್ದನು"14 ಶಾಸನದಲ್ಲಿ ಇರುವ ಬರಹ ಗ್ರಂಥದಲ್ಲೂ ಗ್ರಂಥದಲ್ಲಿರುವುದು ಶಾಸನದಲ್ಲಿಯು ರಚಿಸುತ್ತಿದ್ದ ಸಾಹಿತ್ಯದ ದಾಖಲೆಗಳು ನಮಗೆ ಎಷ್ಟೋ ಸಿಗುತ್ತವೆ. ಕೆಲವು ವೇಳೆ ಗ್ರಂಥದಲ್ಲಿ ರಚಿಸಿದ ಬರಹವನ್ನು ಕೊರೆಯುವ ಸಂಧಂರ್ಭದಲ್ಲಿ ಕೆಲವು ಬದಲಾವಣೆಗಳಾಗಿ ಎರಡಕ್ಕೂ ಭಿನ್ನವಾಗಬಹುದು ನಮಗೆ ಸಿಕ್ಕ ಶಾಸನ ಗ್ರಂಥಗಳಲ್ಲಿ ಇತಿಹಾಸಕ್ಕೆ ಸಂಬಂಧಿಸಿದ್ದಂತೆ ಒಂದರಿಂದ ಒಂದಕ್ಕೆ ಸಂಬಂಧಗಳನ್ನು ಕಲ್ಪಿಸುವ ಕೆಲಸ ಮಾಡುತ್ತವೆ. ಶಾಸನಗಳನ್ನು ಬಂಡೆ, ಶಿಲೆಗಳಲ್ಲಿ ಕೊರೆಸುತ್ತಿದ್ದರಿಂದ ಎಲ್ಲರಿಗೂ ತೋರಿಸಲು ಸಾಧ್ಯವಿಲ್ಲದೆ ಹೋದಾಗ ಗ್ರಂಥಗಳ ನೂರಾರು ಪ್ರತಿಗಳನ್ನು ಮಾಡಿಸಿ ದಾನವಾಗಿ ನೀಡುತ್ತಿದ್ದರು. ಒಪ್ಪಂದಗಳು ನಡೆಯುವ ಸಂದರ್ಭದಲ್ಲಿ ಶಾಸನ ಒಂದನ್ನು ಕೊರೆಸಿ, ಕಾಗದ ಪ್ರತಿಗಳನ್ನು ಮೂರು ನಾಲ್ಕು ತಯಾರಿಸಿ ಸಹಿಯ ಮೂಲಕ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಇಟ್ಟುಕೊಳ್ಳುತ್ತಿದ್ದರು.

ಹೆಚ್ಚಾಗಿ ಶಾಸನ ಗ್ರಂಥಗಳು ಸಾಹಿತ್ಯದ ಅರಿವನ್ನು ಮೂಡಿಸುವಂತಾಗಿವೆ. ರಾಜನನ್ನು ಸಾಹಿತ್ಯದ ಮೂಲಕ ಮಹಾಪುರುಷ ನಾಯಕನಿಗೆ ಹೋಲಿಸಿ ಅತನ ವೀರತ್ವವನ್ನು ಕೊಂಡಾಡುತ್ತಿದ್ದ ಕವಿಗಳು ಉಂಟು. ಶಾಸನವನ್ನು ರಚಿಸುವಾಗ ಅನುಸರಿಸುತ್ತಿದ್ದ ನಿಯಮವೇ ಗ್ರಂಥವನ್ನು ಬರೆಯುವಾಗ ಅನುಸರಿಸುತ್ತಿದ್ದರು. ಶ್ಲೋಕಗಳಿಂದ ಮೊದಲಾಗುವ ಬರಹಗಳು ಶ್ರೀ, ಸ್ವಸ್ತಿಶ್ರೀ, ಓಂ ಸಿದ್ಧಾಬ್ಯಾಹ ಎನ್ನುವ ದೇವರ ನಾಮಗಳನ್ನು ಬರೆದು ನಂತರ ವಂಶವಾಳಿಯ ವಿವರ ದೇವರ ಚಿತ್ರಗಳು ಶಾಸನಗಳಲ್ಲಿ ಇರುತ್ತಿದ್ದವು ಆದರೆ ಗ್ರಂಥಗಳಲ್ಲಿ ಚಿತ್ರಗಳನ್ನು ಮುಖ ಪುಟದಲ್ಲಿ ಹಾಕಿಸಿ ಬರೆಸುತ್ತಿದ್ದರು. ಶಾಸನದಲ್ಲಿ ಇರುವ ಬರಹವನ್ನು ಗ್ರಂಥ ಎನ್ನಬಹುದು. ಆದರೆ ಅದನ್ನು ಸರಿಯಾಗಿ ಸತ್ಯದ ದಾರಿಗೆ ಒಯ್ಯುವುದು ಸಂಶೋಧನೆ.

14.ಡಾ. ಎಂ.ಚಿದಾನಂದ ಮೂರ್ತಿ- ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ 63

ಶಾಸನ, ಗ್ರಂಥಗಳೆರಡರಲ್ಲಿ ಇರುವ ಬರಹ, ಕಾಲ, ಕೃತಿಕಾರ, ರಾಜ, ಶಾಸನದ ಗ್ರಂಥದ ಉದ್ದೇಶವನ್ನು ತಿಳಿಸುವಂತದ್ದು ಸಂಶೋಧನೆಯಾಗಿದೆ. ಇಲ್ಲಿ ಮೂರಕ್ಕೂ ಸಂಬಂಧವಿದೆ ಎಂದು ಹೇಳಬಹುದು. ಗ್ರಂಥವನ್ನು ಎರಡು ರೀತಿಯಲ್ಲೂ ನೋಡಬಹುದು ಶಾಸನ ಬರೆಸುವಾಗ ರಚಿಸಿದ ಗ್ರಂಥ, ಸಂಶೋಧನೆ ನಡೆದ ಮೇಲಿನ ಗ್ರಂಥ ಯಾವುದೇ ಮೂಲವಾದರೂ ಇಲ್ಲಿ ಗ್ರಂಥಕ್ಕೆ ಮೊದಲಸ್ಥಾನವಿದೆ. ಶಾಸನ > ಸಂಶೋಧನೆ >ಗ್ರಂಥ ಇವುಗಳ ಸಂಬಂಧವನ್ನು ಕೆತ್ತಲ್ಪಟ್ಟ ಅಜ್ಞೆ > ಹುಡುಕು, ಶುದ್ಧಮಾಡು > ಬರಹ ಹಿಡಿದಿಡು, ಕೂಡಿಡು ಎನ್ನುವ ಅರ್ಥ ನೀಡುತ್ತದೆ. ಶಾಸನದಲ್ಲಿರುವ ಆಜ್ಞೆಯ ಬರಹವನ್ನು ಹುಡುಕಿ ಶುದ್ಧಗೊಳಿಸಿದ್ದನ್ನು ಒಂದು ಕಡೆ ಕೂಡಿಡುವುದಕ್ಕೆ ಹಿಡಿದಿಡುವ ಬರಹಕ್ಕೆ ಗ್ರಂಥ ಎಂದು ಕರೆಯುತ್ತಾರೆ.

ಲಿಪಿಯಿಲ್ಲದ ಸಂದರ್ಭದಲ್ಲಿ ಯಾವುದೇ ರೀತಿಯ ಆಜ್ಞೆಗಳಿರಲಿಲ್ಲ ಬದಲಿಗೆ ಚಿನ್ಹೆ, ಚಿತ್ರಗಳಿಂದ ಗುಹೆಗಳ ಗೋಡೆಗಳಲ್ಲಿ ಮರದ ಮೇಲೆ ಕೊರೆದ ಬರಹಗಳನ್ನು ಕಾಣಬಹುದು. ಅದ್ದರಿಂದ ಶಾಸನ ಅನ್ನುವುದು ಮೊದಲ ಬರವಣಿಗೆಯ ಅಕರವಾಗಿದೆ ಎಂದು ಹೇಳಬಹುದು. ಕನ್ನಡ ಪದಗಳು ಬರುವ ವೇಳೆಗೆ ಸುಮಾರು 5–6ನೇ ಶತಮಾನ ಮುಗಿಯುವ ಹಂತಕ್ಕೆ ಬಂದಿದ್ದು ಸಂಸ್ಕೃತ ಪ್ರಾಕೃತ ಗ್ರಂಥಗಳು ರಚನೆಯಾದವು. ಶಾಸನಗಳಲ್ಲಿ ಮೊದಲು ಕನ್ನಡ ಪದಗಳು ಬಳಕೆ ಗೊಂಡಿದ್ದವು. ಸಾಹಿತ್ಯ ಆರಂಭವಾದುದ್ದು ಶಾಸನಗಳಿಂದಲೇ ಎಂದು ಹೇಳಬಹುದಾಗಿದೆ." ಪೊಲಕೇಶಿ ವಲ್ಲಭಂ, ಎಂಬ ಬದಾಮಿ ಚಾಳುಕ್ಯರಾಜನ 'ವಿಕ್ರಮಯಜ್ಞವಿಧಾನ'ವನ್ನು ಬಣ್ಣಿಸಿದ ಲಕ್ಷ್ಯಪದ್ಯವೊಂದು ನಾಗವರ್ಮ ಕಾವ್ಯಾವಲೋಕದಲ್ಲಿದೆ."15 ಮತ್ತು ಅಶೋಕನ ಶಾಸನದ 'ಇಸಿಲ' ಪದವೇ ಕನ್ನಡದ ಮೊದಲ ಪದವೆಂದು ಹೇಳಬಹುದು.

ಕನ್ನಡ ಛಂದೋಪ್ರಕಾರ ಗ್ರಂಥಗಳ ಉಲ್ಲೇಖ ಸಿಗುವುದು ಶಾಸನಗಳಿಂದ ಎನ್ನಬಹುದು, ತ್ರಿಪದಿ, ಕಂದ, ಪಿರಿಯಕ್ಕರ, ಅಕ್ಕರ, ಷಟ್ಪದಿ ಮುಂತಾದ ಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಿದೆ. ಆದಿಕವಿ ಪಂಪನ ಗ್ರಂಥಗಳಲ್ಲಿ ಅವನ ವೈಯಕ್ತಿಕ ವಿಷಯದಲ್ಲಿ ಗೊಂದಲಗಳಿದ್ದ ಸಂದರ್ಭದಲ್ಲಿ ಆತನ ತಮ್ಮ ಜಿನವಲ್ಲಭ ಶಾಸನದಲ್ಲಿ ವಂಶವಾಳಿಯ ಉಲ್ಲೇಖ ಇರುವುದನ್ನು ಗುರುತಿಸಿ, ಸತ್ಯವನ್ನು ಹೊರತರಲಾಯಿತು. ಅಂದರೆ ಶಾಸನಗಳಲ್ಲಿರುವ ಸತ್ಯವನ್ನು ಯಾರು ಅಳಿಸಲು ಸಾಧ್ಯವಿಲ್ಲ ಆದರೆ ಗ್ರಂಥಗಳಲ್ಲಿ ಮೂಲ ಪ್ರತಿಯನ್ನು ಹುಡುಕುವುದು ಕಷ್ಟವಾದ ಕೆಲಸ. ಶಾಸನಗಳು ಇತಿಹಾಸಕ್ಕೆ ಹತ್ತಿರವಿರುತ್ತವೆ ಮತ್ತು ಕವಿಯ ಸ್ವ ಹಸ್ತಾಕ್ಷರ ಸಿಗುತ್ತವೆ. ಐತಿಹಾಸಿಕ, ಭಾಷಾತ್ಮಕ, ಸಾಮಾಜಿಕ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ, ಮಹತ್ವವನ್ನು ತಿಳಿಸುವಂತಹ ಕೆಲಸವನ್ನು ಶಾಸನಗಳು ಮಾಡುತ್ತವೆ. ಗ್ರಂಥಗಳು ಹೆಚ್ಚಾಗಿ ಧಾರ್ಮಿಕ ಅಂಶವನ್ನು ಒಳಗೊಂಡಿರುವಂತಾಗಿದೆ. ಗ್ರಂಥಗಳಲ್ಲಿ ಎಷ್ಟೋ ಶಾಸನಗಳ ಬರಹವಿದೆ ಅದರೆ ಅದು ಕೆಲವು ಸಂದರ್ಭಗಳಲ್ಲಿ ನಶಿಸುವುದರಿಂದ ಅಷ್ಟಾಗಿ ಬಾಳಿಕೆಗೆ ತಕ್ಕವಲ್ಲ.

15.ರಂ.ಶ್ರೀ. ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ – ಪುಟ. 24

ಶಾಸನಗಳು ಎಷ್ಟೇ ಶತಮಾನಗಳು ಕಳೆದರೂ ಯಾವುದೇ ತೊಂದರೆಗಳಾಗುವುದಿಲ್ಲ. ಕವಿರಾಜಮಾರ್ಗದಲ್ಲಿ ಸಾಕಷ್ಟು ಶಾಸನಗಳು ದಾಖಲಾಗಿರುವುದನ್ನು ನೋಡಬಹುದಾಗಿದೆ. ವೀರಗಲ್ಲು, ಮಾಸ್ತಿಗಲ್ಲು, ಶಿಲಾಶಾಸನ, ದಾನಶಾಸನ, ಪ್ರಶಸ್ತಿಶಾಸನ,ಗಳಂತಹ ದಾಖಲೆವುಳ್ಳ ಅಕರಗಳು ಕನ್ನಡ ಸಂಶೋಧನ ಬೆಳವಣಿಗೆಗೆ ದಾರಿಯಾಗಿ ನಿಂತಿವೆ. ಒಂದು ಶಾಸನ ರಚನೆಯಾದರೆ ಸಾವಿರಾರು ಗ್ರಂಥಗಳು ರಚನೆಯಾಗುತ್ತವೆ. ಸಂಶೋಧನೆಯ ಮೊದಲು ಶಾಸನಗಳನ್ನು ಸಂಗ್ರಹಿಸುವುದೇ ಆಗಿದ್ದು ಅವುಗಳು ದೊಡ್ಡದಾಗಿ ಇದ್ದುದರಿಂದ ಅವುಗಳನ್ನು ಅಲ್ಲಿಯೇ ಬಿಟ್ಟು ಅದರಲ್ಲಿರುವ ಸಾಹಿತ್ಯದ ಸೂಚಿಯನ್ನು ಮಾತ್ರ ದಾಖಲಿಸಲಾಗಿತ್ತು.

ಈ ಶಾಸನ ಸಂಶೋಧನೆಯನ್ನು ಮೊದಲು ಕೈಗೊಂಡವರು ಪಾಶ್ಚಿಮಾತ್ಯರಾದ ಮೋಂಗ್ಲಿಂಗ್, ಬಿ.ಎಲ್.ರೈಸ್, ಪ್ಲೀಟ್, ಕಿಟೆಲ್‌ರಂತಹ ವಿದ್ವಾಂಸರು ಶಾಸನಗಳನ್ನು ಸಂಶೋಧನೆಗೆ ಹಚ್ಚಿ ಅಲ್ಲಿ ಸಿಗುವ ವಿಷಯವನ್ನು ದಾಖಲಿಸಿದರು. ವಿದ್ವಾಂಸರಾದ ಎ.ಎನ್. ನರಸಿಂಹಯ್ಯನವರ A Grammar of the oldest Kanarese Inscriptions ಜಿ.ಎಸ್.ಗಾಯಿಯವರ Historical Grammar of old kannada ಸರ್.ವಾಲ್ಟರ್ ಇಲಿಯಟ್‌ರವರು ಮೈಸೂರು ಪ್ರಾಂತ್ಯದ 1300 ಶಾಸನ ಸಂಗ್ರಹಿಸಿ ಪ್ರಕಟಿಸಿದರು. karnataka Desh Inscriptions ಆರ್.ನರಸಿಂಹಚಾರ್ಯರವರ Epie grapiya karanataka ಎಚ್. ಕೃಷ್ಣಶಾಸ್ತ್ರಿ ಯವರ ಎಫಿಗ್ರಾಪಿಯಾ ಇಂಡಿಕಾ ಪತ್ರಿಕೆಯಲ್ಲಿ ಶಾಸನ ಸಂಶೋಧನ ಪ್ರಬಂಧಗಳಾಗಿ ಪ್ರಕಟವಾದವು.

ಶಾಸನಗಳನ್ನು ಶೋಧಿಸಿದವರಲ್ಲಿ ರೈಸ್‌ರವರು ಬಹುಮುಖ್ಯರಾಗಿದ್ದಾರೆ. ಇವರು ಸಂಪಾದಿಸಿ ಶಾಸನಗಳನ್ನು ಲೇಖನ ರೂಪದಲ್ಲಿ 'ಇಂಡಿಯನ್‌ಆಂಟೀಕ್ವರಿ'ಯಲ್ಲಿ ಪ್ರಕಟಿಸಿದರು. ಬ್ರಿಟಿಷ್ ಆಡಳಿತದಲ್ಲಿದ್ದ ಕರ್ನಾಟಕದಲ್ಲಿ ಕನ್ನಡಿಗರು ಕನ್ನಡತನವನ್ನು ಉಳಿಸುವುದಕ್ಕೆ ಮುಂದಾದರು. ಡಿ.ಎಲ್.ನರಸಿಂಹಚಾರ್ಯರು, ಬಿ.ಎಂ.ಶ್ರೀ, ಡಾ.ಬಿ.ಆರ್.ಹಿರೇಮಠರವರ 'ಶಾಸನದಲ್ಲಿಕರ್ನಾಟಕದ ವರ್ತಕರು, ಡಾ.ಎಂ.ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಎಂ.ಎಂ.ಕಲ್ಬುರ್ಗಿಯವರ ಮಾರ್ಗ-2, ಹಂಪನಾಗರಾಜಯ್ಯನವರ 'ಲಕ್ಕುಂಡಿಶಾಸನ', ಎಂ.ಎಚ್. ಕೃಷ್ಣರವರ 'ಹಲ್ಮಿಡಿ' ಶಾಸನ ಶೋಧ, ಸಿ.ಯು. ಮಂಜುನಾಥರ 'ಕರ್ನಾಟಕ ಶಾಸನಗಳು ಮತ್ತು ಸಂಸ್ಕೃತಿ,' ಚೆನ್ನಣ್ಣವಾಲೀಕಾರರ ಶಾಸನಗಳಲ್ಲಿ ಸ್ತ್ರಿ ಸಮಾಜ, ಗ್ರಂಥಗಳನ್ನು ನಾವು ನೋಡಬಹುದಾಗಿದೆ. ಇವರಲ್ಲದೆ, ಟಿ.ವಿ.ವೆಂಕಟಚಾಲಶಾಸ್ತ್ರಿ, ಸೀತಾರಾಮಜಾಹಗೀರ್‌ರಂತಹ ಆನೇಕ ಶಾಸನ ಸಂಶೋಧಕರನ್ನು ಕಾಣಬಹುದು.

ಡಾ. ಎಂ.ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಗ್ರಂಥವು ಶಾಸನ ಸಂಶೋಧನೆಯ ಬಹುಮುಖ್ಯ ಗ್ರಂಥವಾಗಿದೆ. ಯಾವುದೇ ಸಂಶೋಧಕನು ಓದಲೇಬೇಕಾದ ಪುಸ್ತಕವಾಗಿದೆ ಶಾಸನ ಎಂದರೇನು? ಮಹತ್ವ, ಎಂದು ಬಿಡಿಯಾಗಿ ಬಿಡಿಸುವುದರ ಮೂಲಕ ಕರ್ನಾಟಕದ ಅನೇಕ ಶಾಸನಗಳನ್ನು ಸಂಶೋಧಿಸಿ ಪ್ರಕಟಿಸಿದ್ದಾರೆ.ಧಾರ್ಮಿಕವಾದ ಹಿನ್ನಲೆ, ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಿತಿಗತಿಗಳನ್ನು ಶಾಸನಗಳಲ್ಲಿ ಹಾಕಿಸಿದ ವಿವಿಧ ಧರ್ಮಿಯರನ್ನು ವಿವಿಧ ಶಾಸನಗಳಲ್ಲಿರುವ ತಪ್ಪುಗಳನ್ನು ತಿದ್ದಿ ಅನೇಕ ರಾಜಮನೆತನಗಳನ್ನು ಹೆಸರಿಸಿದ್ದಾರೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ಜನಾಂಗ, ಸಾಮಾಜಿಕ ಸ್ಥಿತಿ, ಆರ್ಥಿಕತೆ, ಧಾರ್ಮಿಕ ಆಚರಣೆಗಳು ಲಿಪಿಕಾರರು ಕವಿಗಳು, ಶಾಸನದ ವಿವಿಧ ರೂಪಗಳನ್ನು ಈ ಗ್ರಂಥದಲ್ಲಿ ಸೂಚಿಸಿದ್ದಾರೆ. ಒಟ್ಟಿನಲ್ಲಿ ಯಾವುದೇ ಶಾಸನ ಸಂಶೋಧಕನೂ ಇದನ್ನು ನೋಡಿಯೇ ಮುಂದುವರಿಯಬೇಕು.

ಎಂ.ಎಂ. ಕಲ್ಬುರ್ಗಿಯವರ ಮಾರ್ಗ-2ರ ಸಂಪುಟದಲ್ಲಿ ಶಾಸನಶಾಸ್ತ್ರವೆಂದು ಕರೆದು, ಶಾಸನದ ಬಗೆಗಳನ್ನು ಬಣ್ಣಿಸುತ್ತ ಮೂರು ಕಾಲಘಟ್ಟಗಳಂತೆ ವಿಂಗಡಿಸಿ ಅಧ್ಯಯನ ನಡೆಸಿದ್ದಾರೆ. ಶಾಸನ ಯುಗಗಳನ್ನು 3 ರೀತಿಯ ಸಂಗ್ರಹ ಯುಗಗಳನ್ನಾಗಿ ವಿಂಗಡಿಸಿದ್ದಾರೆ."ಕರ್ನಲ್ ಮೆಕೆಂಜಿ ಯುಗ-1791 ಸರ್.ವಾಲ್ಟರ್‌ಇಲಿಯಟ್‌ಯುಗ 1837-1870, ಡಾ.ಫ್ಲಿಟ್ ಮತ್ತು ರೈಸ್‌ಯುಗ-1870ರ ತರುವಾಯ"16 ಶಾಸನ ಅಧ್ಯಯನ ನಡೆದ ರೀತಿಯನ್ನು ತಿಳಿಸಿ. ಶಾಸನ ಶಾಸ್ತ್ರದಲ್ಲಿ ಶಾಸನದ ವಿವಿಧ ರೂಪಗಳನ್ನು ತಿಳಿಸಿದ್ದಾರೆ. ಶಾಸನದಿಂದ ಬರಿ ಇತಿಹಾಸವನ್ನು ಮಾತ್ರವಲ್ಲ ಅಲ್ಲಿನ ಸಾಂಸ್ಕೃತಿಕ ಭಾಗಗಳನ್ನು ನಾವು ಕೂಲಂಕುಷವಾಗಿ ಅಧ್ಯಯನ ಮಾಡಬೇಕಾಗುತ್ತದೆ.

ಶಾಸನಗಳನ್ನು ಕೊರೆಯಲು ಎಲ್ಲರಿಂದಲೂ ಸಾಧ್ಯವಾಗುತ್ತಿರಲಿಲ್ಲ ಅದಕ್ಕೆಂದೇ ಮೀಸಲಾದ ಲಿಪಿಕಾರರನ್ನು ನೇಮಿಸುತ್ತಿದ್ದರು. ಕೆಲವು ಶಾಸನಗಳ ಸಂಶೋಧನೆಯಲ್ಲಿ ಸಾವಿರಾರು ಗ್ರಂಥಗಳ ಉಲ್ಲೇಖ ಸಿಗುವಾಗ ಲಿಪಿಕಾರನ ಮತ್ತು ರಾಜನ ಸಹಿಗಳಿಲ್ಲದೆ ಹಾಕಿಸಿದ ಶಾಸನಗಳು ಸರ್ಕಾರದ ಮುದ್ರೆ ಇಲ್ಲವೆಂಬಂತೆ ಖಾಸಗಿ ಶಾಸನಗಳಾಗಿ ಇರುತ್ತಿದ್ದವು. ಈ ಶಾಸನಗಳು ನಮ್ಮ ಪೂರ್ವಿಕರ ಚರಿತ್ರೆಯಾದರೂ ಅಂದಿನ ವಿವರಣಾತ್ಮಕ ಸಾಂಸ್ಕೃತಿಕ ಅಂಶಗಳನ್ನು ತಿಳಿಸುತ್ತವೆ. ಶಾಸನ ಎನ್ನುವುದರ ಉದ್ದೇಶ ನಿಯಮ ಬದ್ದವಾಗಿ ಕೆಲವು ಕಟ್ಟು ಪಾಡುಗಳನ್ನು ರಾಜಾಡಳಿತದಲ್ಲಿ ತರಲು ಮಾಡಿದ ಒಂದು ಬರಹ ರೂಪವಾಗಿದೆ.

16.ಎಂ.ಎಂ.ಕಲ್ಬುರ್ಗಿ - ಮಾರ್ಗ,2 - ಪುಟ. 317

3.2. ಹಸ್ತಪ್ರತಿಅಧ್ಯಯನ

ತಪ್ಪಂ ಬರೆದವ ಕಡುಜಡ
ನಪ್ಪಾತಂ ಬರೆದವನೆಂದು ಬಯ್ಯಲ್ ಬೇಡಿಂ
ತಪ್ಪಕ್ಕು ಶುದ್ದಮಕ್ಕುಂ
ತಪ್ಪುಳ್ಳಡೆ ತಿದ್ದಿಕೊಂಬುದುತ್ತಮ ಪುರುಷರ್.

ಮಾನವನ ಜನ್ಮವಾಗಿ ಎಷ್ಟೋ ವರ್ಷಗಳು ಕಳೆದರೂ ಬುದ್ದಿ ಬೆಳವಣಿಗೆಯ ಹಂತಕ್ಕೆ ಬಂದು ತಲುಪ ಬೇಕಾದರೆ ಎಷ್ಟೋ ಶತಮಾನಗಳು ಬೇಕಾಯಿತು. ಬುದ್ದಿ ಬೆಳವಣಿಗೆಯಾದ ನಂತರವು ಕೆಲವು ತಪ್ಪುಗಳು ನಡೆಯುತ್ತದೆ. ಅವುಗಳನ್ನು ತಿದ್ದಿಕೊಂಡು ನಡೆಯಬೇಕೆಂಬುದು ಮತ್ತು ಅಂದು ಸಾಹಿತ್ಯ ಪಾಂಡಿತ್ಯವು ಕಮ್ಮಿ ಇದ್ದರಿಂದ ಕವಿಗಳಿಗೆ ಸಾಮಾನ್ಯ ಮನುಷ್ಯರಿಗಿಂತ ಹೆಚ್ಚಾಗಿ ಗೌರವಗಳು ಸಲ್ಲುತ್ತಿದ್ದವು. ಮನುಷ್ಯ ಬರೆದ ಬರವಣಿಗೆ ಎಲ್ಲವು ಬರಹವೇ ಆಗಿದ್ದು ಆತನ ಅರ್ಥವ್ಯಾಪ್ತಿಗೆ ಮೀರಿದ್ದು ಅರ್ಥೈಸುವಂತದ್ದು ಮನುಷ್ಯನಿಗೆ ಬಿಟ್ಟದ್ದಾಗಿತು. ಸಂಜ್ಞೆ ಸಂಕೇತಗಳ ಮೂಲಕ ಬಂದ ಇವುಗಳನ್ನು ಮರದ ಮೇಲೋ ಗುಹೆಗಳಲ್ಲೋ ಕೆತ್ತುತ್ತಿದ್ದರು ನಂತರ ನೀರಿನಲ್ಲಿ, ಕಾಡುಗಳಲ್ಲಿ ಬೆಳೆಯುತ್ತಿದ್ದ ಎಲೆಗಳನ್ನು ಬಳಸಿ ಲಿಪಿಗಳನ್ನು ಕೊರೆಯುತ್ತಿದ್ದರು. ಲಿಪಿಯ ಪೂರ್ಣಪ್ರಮಾಣದ ಬರಹ ಬಂದಾಗ ಬರವಣಿಗೆಗೆ ಬೇಕಾದ ಗಟ್ಟಿಯಾದ ಮತ್ತು ಮಡಚಲು ಬರುವ ಎಲೆಯನ್ನು ಹುಡುಕಿ ತಾಳೆಗರಿ, ಭೂರ್ಜಪತ್ರ, ಕೋರಿಕಾಗದಗಳು, ಚರ್ಮ, ಬಂಡೆಗಳನ್ನು, ಕಲ್ಲುಗಳನ್ನು ಬಳಸಿಕೊಂಡರು.

ಮಾನವನ ಮೊದಲ ಬರವಣಿಗೆ ನಡೆದದ್ದು ಸಂಪ್ರದಾಯ, ಆಚರಣೆ, ವೇದ, ಮಂತ್ರ, ಉಪನಿಷತ್‌ಗಳ ಬರವಣಿಗೆಯಾದ್ದರಿಂದ ಸಾಮಾನ್ಯ ಜನರು ಇವುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಕೆಲವರು ಸೋತರು, ಕೆಲವರು ಅದನ್ನೇ ಮೈಗೂಡಿಸಿಕೊಂಡು ಮುಂದುವರೆದು ಪುರಾಣವನ್ನೊಳಗೊಂಡಂತೆ ರಚನೆಯಾದ ಬರವಣಿಗೆ ಸಾಹಿತ್ಯವಾಗಿ ರೂಪುಗೊಂಡಿತು.

ಮಾನವನ ಜಾನಪದೀಯ ಆಚರಣೆಗಳೊಂದಿಗೆ ಕಟ್ಟು ಕಟ್ಟಳೆಗಳನ್ನು ಮೀರದಂತೆ ಕೆಲವು ನಿಯಮಗಳನ್ನು ಪಾಲಿಸಲು ನಾಯಕತ್ವದ ಕೊರತೆಯಿದ್ದಾಗ ರಾಜಧರ್ಮವನ್ನು ಹುಟ್ಟುಹಾಕಿ, ನಂತರ ಅದು ಮುಂದುವರೆದು ಆಗಾಧವಾಗಿ ಬೆಳೆಯಿತು. ಕೊನೆಯಲ್ಲಿ ಆಡಳಿತವೆಲ್ಲ ರಾಜನ ನಿಯಮದಂತೆ ಆಜ್ಞೆಯಂತೆ ನಡೆಯಬೇಕಾಯಿತು. ಅ ಸಂದರ್ಭದಲ್ಲಿ ಬರವಣಿಗೆಯ ಲಿಪಿ ಸಾಕಷ್ಟು ಬಳಕೆಯಲ್ಲಿದ್ದು ಹಸ್ತಪ್ರತಿಗಳ ಬೆಳವಣಿಗೆಯು ಮುಂದುವರೆಯಿತು. ಹಸ್ತಪ್ರತಿಯ ಮೇಲೆ, ಕಬ್ಬಿಣ, ಕಲ್ಲುಗಳ ಮೇಲೆ ಬರವಣಿಗೆಯನ್ನು ಕೆತ್ತಲು ಆರಂಭಿಸಿದರು. ಹಾಗಾದರೆ ಹಸ್ತಪ್ರತಿ ಎಂದರೇನು? ಎಂಬುದಕ್ಕೆ ಸಾಕಷ್ಟು ವಿದ್ವಾಂಸರು ವ್ಯಾಖ್ಯಾನಿಸಿದ್ದಾರೆ.

ಪ್ರೊ.ಎಂ.ವಿ. ಸೀತಾರಾಮಯ್ಯ–'ನಮ್ಮ ಪೂರ್ವಜರು ನಮ್ಮ ಉಪಯೋಗಕ್ಕಾಗಿ ಬಿಟ್ಟು ಹೋಗಿರುವ ಕೈ ಬರಹಗಳು.' ಡಾ.ಟಿ.ವಿ.ವೆಂಕಟಚಾಲಶಾಸ್ತ್ರಿ– ಕನ್ನಡ ಲಿಪಿಯಲ್ಲಿ ಕನ್ನಡ ಬರಹದಲ್ಲಿ ಬರೆದವುಗಳನ್ನು ಕನ್ನಡ ಹಸ್ತಪ್ರತಿಗಳೆನ್ನುತ್ತೇವೆ. ಡಾ.ಹೀರೆಮಠ– ಹಸ್ತಪ್ರತಿ ಎಂದು ಸೂಚಿಸಲು 'ಮ್ಯಾನ್‌ಸ್ಕ್ರಿಪ್ಟ್' ಎನ್ನುತ್ತಾರೆ. ಪ್ರೊ.ಕತ್ರೆ– 'ಗ್ರಂಥಗಳನ್ನು ಹಲವು ಸಾರಿ ತಾಂತ್ರಿಕ ಸೌಲಭ್ಯವಿಲ್ಲದೆ ಕೈಯಿಂದ ಬರೆಯುವವರು ಸಿದ್ದಪಡಿಸಿದ ಕೈಬರಹ ನಕಲು ಪ್ರತಿಗಳು ಹಸ್ತಪ್ರತಿ' ಎನ್ನುವರು.

ಹಸ್ತಪ್ರತಿ ಎನ್ನುವುದಕ್ಕೆ ಎಲ್ಲರೂ ಒಂದೇ ಅರ್ಥವನ್ನು ನೀಡಿದ್ದಾರೆ.ಅಂದರೆ ಹಿಂದಿನ ಕಾಲದಲ್ಲಿ ಕೈಯಿಂದ ಬರೆದ ಬರಹಕ್ಕೆ ಹಸ್ತಪ್ರತಿ ಎನ್ನುವರು. ತಾಳೆಗರಿ, ಭೂರ್ಜಪತ್ರ, ಕೋರಿಕಾಗದಗಳಿಂದ ತಯಾರಿಸಿದ ಹಳೆಕಾಗದದ ಬರಹಕ್ಕೆ ಹಸ್ತಪ್ರತಿ ಎನ್ನುವರು. ಈ ಹಸ್ತಪ್ರತಿಗಳನ್ನು ಒಂದು ಕಡೆ ಕೂಡಿಟ್ಟು ನೂರಾರು ಪ್ರತಿಗಳಾದಾಗ ಒಂದು ಕಟ್ಟಿಗೆ ಕಟ್ಟಿಟ್ಟು ಇಡುತ್ತಿದ್ದರು ಅದೇ ಮುಂದೆ ಗ್ರಂಥವಾಗಿ ಮಾರ್ಪಟ್ಟಿತು ಎಂದು ಹೇಳಬಹುದು. ಹಸ್ತ > ಕೈ, ಪ್ರತಿ > ತಯಾರಿಸಿದ್ದು, ಬರೆದದ್ದು, ಗ್ರಂಥ > ಬರಹ ಕೂಡಿಟ್ಟ, ಹಿಡಿದಿಟ್ಟದ್ದು, = ಕೈಯಿಂದ ತಯಾರಿಸಿದ ಬರಹವನ್ನು ಕೂಡಿಟ್ಟ, ಹಿಡಿದಿಟ್ಟದ್ದಕ್ಕೆ ಗ್ರಂಥ ಎಂದು ಕರೆಯುತ್ತಾರೆ. ಗ್ರಂಥ ಎನ್ನುವ ಮೂಲಪದ ಹಸ್ತಪ್ರತಿ ಎಂದು ಹೇಳಬಹುದಾಗಿದೆ. ಹಸ್ತಪ್ರತಿಗಳನ್ನು ಬರೆದು ಬರೆದು ಕೂಡಿಟ್ಟದ್ದಕ್ಕೆ ಅದು ಜಾಸ್ತಿಯಾಗಿ ಒಂದು ಗ್ರಂಥದ ರೂಪಕ್ಕೆ ತಂದರು ಎಂದು ಹೇಳಬಹುದು.

ಆಗಿನ ಕಾಲಕ್ಕೆ ಒಂದೇ ಪ್ರತಿಗೆ ಗ್ರಂಥ ಎನ್ನದೆ, ನೂರಾರು ಪ್ರತಿಗಳನ್ನು ಕೂಡಿಟ್ಟು ಕೊನೆಯಲ್ಲಿ ಇದನ್ನ ಯಾವುದಾದರು ಭಂಡಾರದಲ್ಲಿಟ್ಟಾಗ ಅದನ್ನು ಗ್ರಂಥ ಭಂಡಾರ ಎಂದು ಕರೆದರು. ಹಿಂದೆ ಗಂಧದಷ್ಟೆ ಬೆಲೆ ಬಾಳುತ್ತಿದ್ದ ತಾಳೆಗರಿಗಳು ಸುವಾಸನೆಯನ್ನು ಬೀರುತ್ತಿದ್ದವು. ಅಷ್ಟೆ ಗಟ್ಟಿಯಾಗಿದ್ದವು ಎಂದು ಹೇಳಬಹುದು. ಇದರ ಮತ್ತೊಂದು ರೂಪ ಸಂಶೋಧನೆಯ ಹುಟ್ಟನ್ನು ಹುಟ್ಟುಹಾಕಲು ಕಾರಣವಾಯಿತು. ಇಂದು ಹಸ್ತಪ್ರತಿಶಾಸ್ತ್ರ ಒಂದು ಪ್ರತ್ಯೇಕ ಕ್ಷೇತ್ರವಾಗಿ ಬೆಳೆಯಲು ಸಂಶೋಧನೆಯೇ ಕಾರಣ. ಎಲ್ಲಿಲ್ಲದ ಕೆಲಸ ಕಾರ್ಯಗಳು ನಡೆದಿದ್ದರು, ಸತ್ಯದ ಅರಿವನ್ನು ಕಾಣುವುದು ಕಷ್ಟವಾಗಿದೆ. ಮೂಲ ಹಸ್ತಪ್ರತಿಯನ್ನು ಗುರುತಿಸುವುದರ ಹಿನ್ನಲೆಯಲ್ಲಿ ಗ್ರಂಥಸಂಪಾದನೆಯ ಕಾರ್ಯ ಬಹುಮುಖ್ಯವಾಗಿದೆ.

'ಗ್ರಂಥ' ಎನ್ನುವ ಪದ ಮೂಲ ಹಸ್ತಪ್ರತಿಯಿಂದ ಬಂದದ್ದು ಎನ್ನಬಹುದು. ಹಸ್ತಪ್ರತಿಗಳನ್ನು ಬರೆದ ಮೇಲೆ ಒಂದು ಕಡೆ ಕೂಡಿಡುವ ನಿಟ್ಟಿನಲ್ಲಿ ಅನೇಕ ಪ್ರತಿಗಳು ಸೇರಿ ಗ್ರಂಥ ಎನ್ನುವ ಪದ ಹುಟ್ಟಿಕೊಂಡಿದೆ. ಅಂತಹ ಸಂಧರ್ಭದಲ್ಲಿ ಪ್ರತಿಗೂ ಅನೇಕ ಕವಿಗಳ ಊಹತ್ಮಾಕ ಪಾಠಕ್ಕೂ ನಿಲುಕದೆ ಹೋಯಿತು. ಹಸ್ತಪ್ರತಿಗಳನ್ನು ಸಂಗ್ರಹಿಸಿ ಸೂಚಿಗಳಾಗಿ ಮಾಡಿ ಮುದ್ರಿಸಿದರು. ಮುದ್ರಿಸುವಾಗ ತಾಳೆಗರಿಗಳ ಸಂಖ್ಯೆ, ಬರೆದವರು, ಉದ್ದ, ಆಗಲ, ಅಕ್ಷರಗಳ ಸಂಖ್ಯೆ ಮುಂತಾದವುಗಳನ್ನು ಮುಂದಿನ ಪಾಠ ಪರಿಸ್ಕರಣಕ್ಕೆ ಅನೂಕುಲ ಮಾಡಿಕೊಟ್ಟರು.

ಗ್ರಂಥಗಳು ತಯಾರಾದ ರೀತಿ ಹೀಗಿದೆ.

ಉದಾ:– ಕೆ, 132	ಭರತೇಶ ವೈಭವ	ಸಾಂಗತ್ಯ
14, 5X1.4	ರತ್ನಕರವರ್ಣಿ	1557
3–197 ಗರಿ	5–6 ಪಂಕ್ತಿ	50ಅಕ್ಷರ

ಆದಿ : ರತ್ನ ಪರೀಕ್ಷೇಗೆ ಗಜಾಶ್ವ ಪರೀಕ್ಷೇಪ್ರ
ಯತ್ನಿಸೆ ಬಾಂಹ್ಯ ವಿಗ್ನಾನಾ
ರತ್ನತ್ರಯರೂಪನಾತ್ಮನೆಂದರ್ರಿಉದು
ನುತ್ನಾಂತರಂಗ ವಿಗ್ನಾನಾ ॥19॥

------------------(ಅಕ್ಷರಗಳಿಲ್ಲ)
ಮದನಾಗಮ ವೈದ್ಯ ಮಂತ್ರ ತಂತ್ರಗಳಸಂ
ಪದವೆಲ್ಲ ಬಾಂಹ್ಯ ವಿಗ್ನಾನಾ ॥20॥

ಅಂತ್ಯ : ಯಲ್ಲರ್ಗೆ ಬಾ------------(ಅಕ್ಷರಗಳಿಲ್ಲ)ಯೋಗಾ
ಬಲ್ಲವರಾತ್ಮಯೋಗವ ಮಾಡೆದರ್ರಿಯದ
ರೆಲ್ಲರವರ ಮೆಚ್ಚಿರೆಂದಾ ॥93॥
ಪರಮಾತ್ಮಯೋಗವೆ ಮುತ್ತಿಗೆ ಬಿ

ವಿಷಯ : ಭರತ ಚಕ್ರೇಶನ ಚರಿತೆ

ವಿಶೇಷ ; ಅಸಮಗ್ರ, ಕ್ರಮಾಂಕ, (ಪ್ರತಿಗಳ ಸಂಖ್ಯೆ) 5,6,37,42,62,63.91ರಿಂದ 101,105,106,108, ರಿಂದ 111,113,114,119, ರಿಂದ121,123,132,144,148,153.ರಿಂದ 172 ಮತ್ತು 197ನೆಯ ಗರಿಗಳು ಮುರಿದಿವೆ, ಕೆಲವು ಗರಿಗಳ ಅಂಚುಗಳು ತೃಟಿತವಾಗಿವೆ. ಕ್ರಮಾಂಕ ಮುರಿದಿರುವ ಕೆಲವು ಗರಿಗಳು ಕೊನೆಯಲ್ಲಿವೆ"17

ಮೇಲೆ ತಿಳಿಸಿರುವಂತೆ ಸೂಚಿಗಳನ್ನು ಅನೇಕ ವಿದ್ವಾಂಸರು ರಚಿಸಿ, ಸಿಕ್ಕಿರುವ ಗರಿಗಳನ್ನು ಒಂದು ಕಡೆ ಸೇರಿಸಿ ಗ್ರಂಥಸಂಪಾದನೆ ಮಾಡುತ್ತಿದ್ದರು, ಸಾಮಾನ್ಯವಾಗಿ ಗರಿಗಳು ಹೆಚ್ಚು ಬಳಕೆ ಬರದೆ ಇದ್ದುದರಿಂದ ಕವಿಯ ಪಾಠಕ್ಕೆ ಹತ್ತಿರವಾಗಿಲೆಂದು ಸೂಚಿಯನ್ನು ತಯಾರಿಸಿದರು. ಪಾಠ ಪರಿಷ್ಕರಣಕ್ಕೆ ಮಾಡುವಾಗ ಅಕ್ಷರಗಳಿಲ್ಲದೆ ಇರುವ ಜಾಗಕ್ಕೆ ಊಹತ್ಮಕ ಪಾಠಗಳನ್ನು ಹಾಕಬೇಕಾಗುತ್ತದೆ. ಇವುಗಳನ್ನು ರಚಿಸಿ ಎಷ್ಟೋ ಶತಮಾನಗಳು ಕಳೆದಿದ್ದರಿಂದ ಮಣ್ಣು,ಹುಳುಗಳು ತಿಂದು ಹಾಳಾದ್ದರಿಂದ ಕೆಲವು ಅಕ್ಷರಗಳು ಲೋಪವಾಗಿರುತ್ತವೆ.

17.ಎಸ್. ಶಿವಣ್ಣ – ಕನ್ನಡ ಹಸ್ತಪ್ರತಿಗಳ ವರ್ಣಾನಾತ್ಮಕ ಸೂಚಿಗಳು ಸಂಪುಟ,1–ಪುಟ255

ಅಲ್ಲಿ ಕವಿಯಾದವನ ಮನಸ್ಸಿಗೆ ಹತ್ತಿರವಾದ ಅಕ್ಷರ ಬರೆಯಬೇಕಾಗಿರುತ್ತದೆ. ಹಸ್ತಪ್ರತಿಗಳು ಹಿಂದಿನ ಬರವಣಿಗೆಯ ಪದ್ಧತಿಗಳನ್ನು ತಿಳಿಸುವಂತಹ ವಸ್ತುವಾಗಿದ್ದು ಬರವಣಿಗೆ ಮತ್ತು ಗ್ರಂಥಗಳ ಮತ್ತೊಂದು ಹಂತ ಇದಾಗಿದೆ. ಗ್ರಂಥಗಳ ಹುಟ್ಟುವಿಕೆಗೆ ಇದು ಸಹ ಕಾರಣವಾಗಿದೆ ಎನ್ನಬಹುದಾಗಿದೆ. ಸಾಮಾನ್ಯವಾಗಿ ಪ್ರಾಚೀನ ಗ್ರಂಥಗಳೆಲ್ಲವು ಹಸ್ತಪ್ರತಿಯಿಂದಲೇ ಕೂಡಿರುವಂತವುಗಳಾಗಿವೆ

ಹಸ್ತಪ್ರತಿಯನ್ನು ಕಟ್ಟಿ ದಾನ ಮಾಡುತ್ತಿದ್ದರು, ಇದರ ಉದ್ದೇಶ ಗ್ರಂಥ ಪ್ರಸಾರ ಮಾಡುವುದ್ದಾಕ್ಕಾಗಿ ಜನರಲ್ಲಿ ಇದೇನು ಎಂದು ಕೂತುಹಲದ ಮಾತು ಮೂಡಿದಾಗ ಗ್ರಂಥ ಎನ್ನುವ ವಾಕ್ಯ ಬಂದಿರಬಹುದು ಮತ್ತು ಹಸ್ತಪ್ರತಿಯ ಮತ್ತೊಂದು ರೂಪವೇ ಗ್ರಂಥವಾಗಿದೆ ಎಂದು ಹೇಳಬಹುದಾಗಿದೆ. ಹಸ್ತಪ್ರತಿ ಕೈ ಬರಹವಾದರೆ ಅದನ್ನು ಒಟ್ಟಾಗಿ ಸೇರಿಸಿ ಗ್ರಂಥ ಎಂದು ಕರೆದು ಸಂಶೋಧನೆಗೆ ಒಳಪಡಿಸಿ ಅದರಲ್ಲಿರುವ ಅಕ್ಷರಗಳನ್ನು ತಿದ್ದಿ ಸರಿಯಾಗಿಸಿದರು.

ನಾಗವರ್ಮನ ಕರ್ನಾಟಕಭಾಷಭೂಷಣ, ಕೇಶಿರಾಜನ ಶಬ್ದಮಣಿದರ್ಪಣ, ಭಟ್ಟಕಳಂಕನ ಕರ್ಣಾಟಕ ಶಬ್ದಾನುಶಾಸನ, ಅಲಂಕಾರಶಾಸ್ತ್ರಗಳಾದ ಕಾವ್ಯವಲೋಕನ, ಶೃಂಗಾರರತ್ನಕರ. ಮಾಧವಲಂಕಾರ, ಕಾವ್ಯಕ್ಕೆ ಸಂಬಂಧಿಸಿದ್ದಂತೆ, ಗದಾಯುದ್ದ, ಅಜಿತಪುರಾಣ, ಪಂಚತಂತ್ರ, ಯಶೋಧರಚರಿತ್ರೆ, ಕಬ್ಬಿಗರಕಾವ, ಆದಿಪುರಾಣ, ನಳಚರಿತ್ರೆ, ಇನ್ನೂ ಮುಂತಾದವುಗಳು ಕನ್ನಡ ಹಸ್ತಪ್ರತಿಯಿಂದ ಬಂದವುಗಳೇ ಆಗಿವೆ. ಪ್ರಾಚೀನ ಸಾಹಿತ್ಯದ ಗ್ರಂಥಗಳೆಲ್ಲವು ಹಸ್ತಪ್ರತಿಯಿಂದ ಬಂದಿರುವ ಗ್ರಂಥಗಳು ಎಂದು ಹೇಳಬಹುದಾಗಿದೆ. ಇವುಗಳನ್ನು ಸಂಗ್ರಹಿಸಿದವರಲ್ಲಿ ಹೆಚ್ಚು ಪಾಶ್ಚಿಮಾತ್ಯರೇ ಆಗಿದ್ದರೆ ಜಿ.ವರ್ತ್, ಕಿಟೆಲ್,ಮೊಗ್ಲಿಂಗ್ ಬಿ.ಎಲ್.ರೈಸ್‌ರಂತಹ ವಿದ್ವಾಂಸರು ಕನ್ನಡದ ಆರ್. ನರಸಿಂಹಚಾರ್ಯ, ಡಿ.ಎಲ್.ನರಸಿಂಹಚಾರ್, ಬಿ.ಎಂ.ಶ್ರೀ, ಎಂ.ವಿ.ಸೀ, ಫ.ಗು. ಹಳಕಟ್ಟಿ, ಬಿ.ಮಲ್ಲಪ್ಪ, ವೆಂಕಟರಂಗಕಟ್ಟಿ, ಎಂ.ಎ.ರಾಮಾನುಜಯ್ಯಂಗಾರ್, ಮರಿಯಪ್ಪಭಟ್ಟರು, ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ, ತೀ.ನಂ.ಶ್ರೀ, ಆರ್.ಸಿ.ಹಿರೇಮಠರವರು ಇನ್ನೂ ಮುಂತಾದವರು ಹಸ್ತಪ್ರತಿ ಸಂಗ್ರಹಿಸಿ ಅದರಲ್ಲಿರುವ ಸಾಹಿತ್ಯ ರಚನೆಯನ್ನು ಶುದ್ಧಮಾಡಿ ತೋರಿಸಿದ್ದರು.

ಹಸ್ತಪ್ರತಿಯು ಕೈ ಬರಹದಿಂದ ತಯಾರಾದ ಗ್ರಂಥವಾಗಿದೆ. ಇದರ ಉದ್ದೇಶ ನಿರ್ದಿಷ್ಟ ಪರಂಪರೆಯನ್ನು ಮುಂದುವರೆಸಿಕೊಂಡು ಬರುವುದಾಗಿದೆ. ಸಾಂಸ್ಕೃತಿಕವಾಗಿ ಹರಿದು ಬರುತ್ತಿರುವ ಕೆಲವು ನಿಯಮಗಳು ಇಂದಿನದ್ದಲ್ಲ ಪ್ರಾಚೀನ ಕಾಲದಿಂದಲೂ ಬಂದದ್ದು ಗ್ರಂಥಗಳು ಸಹ ಮುಂದಿನ ಪೀಳಿಗೆಯನ್ನು ಕಟ್ಟುವ ಸಾಧನವಾಗಿದೆ ಎನ್ನಬಹುದು. ಸರಿಯಾದ ರೀತಿಯಲ್ಲಿ ಅವು ಕೂಡಿಡದ್ದಿದ್ದರೆ ಬಹುಶಃ ಅಳಿದು ಹೋಗುತ್ತಿದ್ದವು ಎನ್ನಬಹುದು. ಹಸ್ತಪ್ರತಿಯಲ್ಲಿ ಕೆಲಸ ಮಾಡಲು ಗ್ರಂಥ ಸಂಪಾದನೆಯ ಪೂರ್ತಿಯಾದ ತಿಳುವಳಿಕೆ ಇರಬೇಕಾಗುತ್ತದೆ. ಇಲ್ಲದಿದ್ದರೆ ಯಾವುದೇ ಪಾಠವನ್ನು ಗುರುತಿಸಲು ಸಾಧ್ಯವಿಲ್ಲ ಎನ್ನಬಹುದು. ಗ್ರಂಥ ಎಂದರೆ ವ್ಯವಸ್ಥಿತವಾಗಿ ಜೋಡಿಸಿದ್ದು ಎನ್ನಬಹುದು.

ಯಾಕೆಂದರೆ ಎಲ್ಲ ಶುದ್ಧ ಅಕ್ಷರಗಳನ್ನು ಕಂಡು ಹಿಡಿದು ಅದಕ್ಕೆ ಹೊಂದಿಕೆ ಆಗುವ ಅಕ್ಷರವನ್ನು ಜೋಡಿಸಿದಾಗ ಮಾತ್ರ ಅದು ಸತ್ಯದ ಸಾಹಿತ್ಯವಾಗುತ್ತದೆ ಇಲ್ಲದಿದ್ದರೆ ಅದು ಕವಿಯ ಪಾಠದಿಂದ ದೂರವಾಗಿರುತ್ತದೆ, ಹಾಗೆಯೇ ಗ್ರಂಥವು ಕೂಡ ಸರಿಯಾಗಿ ಜೋಡಿಸಿದ ಪ್ರತಿಯಿಂದ ಆಗುವಂತದ್ದು.

ಆಧುನಿಕ ಯುಗದಲ್ಲಿ ಕಾಗದ ಬಳಕೆ ಯಥೇಚ್ಚವಾಗಿ ಬಂದು ಗ್ರಂಥಗಳನ್ನು ಕಾಗದದ ಮುದ್ರಣ ಯಂತ್ರದ ಮೂಲಕ ಮುದ್ರಿಸಿ ಪ್ರಚಾರ ಮಾಡಲಾಗುತ್ತದೆ. ಅಂದರೆ ಹಸ್ತಪ್ರತಿ ಬಳಕೆಯ ಇನ್ನೊಂದು ರೂಪವೇ ಕಾಗದ ಇದು ಸುಮಾರು 18ನೇ ಶತಮಾನದ ನಂತರ ಮತ ಪ್ರಚಾರದ ಹಿನ್ನಲೆಯಲ್ಲಿ ಮುದ್ರಣ ಯಂತ್ರ ಕರ್ನಾಟಕಕ್ಕೆ ಬಂದು ಇಲ್ಲಿ ಸಿಗುವ ವಸ್ತುಗಳನ್ನು ಸಂಗ್ರಹಿಸಿ ಪತ್ರಿಕೆಗಳಲ್ಲಿ ಪ್ರಕಟಮಾಡಿತು. ಇದರ ತರುವಾಯ ಕನ್ನಡ ಗ್ರಂಥಗಳಿಗೆ ಹೊಸ ಅಯಾಮ ಬಂದು ಆಧುನಿಕ ಗ್ರಂಥಗಳು ಪ್ರಕಟವಾದವು. ಗ್ರಂಥ ಎನ್ನುವ ಪದ ಹಸ್ತಪ್ರತಿಯಷ್ಟು ಹಳೆಯದು ಮತ್ತು ಎರಡು ಜೊತೆಯಲ್ಲಿಯೇ ಬಂದರು ಗ್ರಂಥ ಎನ್ನುವ ಪದ ಮುಂದುವರೆದು ಈಗ ಹಸ್ತಪ್ರತಿ ಬದಲಿಗೆ ಕಾಗದ ಎನ್ನುವ ಮತ್ತೊಂದು ಪ್ರತಿ ಬಳಕೆಗೆ ಬಂದಿದೆ. ಪ್ರಕೃತಿಯಲ್ಲಿ ಸಿಗುವುದನ್ನು ಬಿಟ್ಟು ಪ್ರಕೃತಿಯ ವಸ್ತುಗಳನ್ನು ಬಳಸಿಕೊಂಡು ಯಂತ್ರಗಳ ಸಹಾಯದಿಂದ ಕಾಗದವನ್ನು ತಯಾರಿಸುತ್ತರೆ. ಆಧುನಿಕ ಇಂಕ್(ಮಸಿ) ಬಂದಿದ್ದು ಹಳೆಯ ಲೇಪನ ವಸ್ತುಗಳು ಮರೆಯಾಗಿವೆ ಕಂಠ,ಮಸಿ, ಸಾಧನಗಳು ಹೋಗಿ ಲೇಖನಿ ಎನ್ನುವ ಹೆಸರಿಗೆ ಆಧುನಿಕ ಪೆನ್ನು ಎನ್ನುವ ಅನ್ಯ ಪದ ಬಂದಿದೆ. ಬರವಣಿಗೆ ಕೈಯಲ್ಲೇ ಆದರೂ ಗ್ರಂಥಗಳ ಮುದ್ರಣ ಯಂತ್ರದ ಸಹಾಯದಿಂದ ಮುದ್ರಿತವಾಗುತ್ತದೆ. ಆಧುನಿಕ ಯುಗದಲ್ಲಿ ಗಣಕಯಂತ್ರದ ಬಳಕೆ ಬಂದು ಬರವಣಿಗೆ ಯಂತ್ರಗಳಿಂದ ತಯಾರಾಗುತ್ತದೆ. ಇಂತಹ ವಿಜ್ಞಾನ ಯುಗ ಬಂದರು ಗ್ರಂಥ ಎನ್ನುವ ಪದ ಮಾತ್ರ ಹಾಗೆಯೇ ಮುಂದುವರೆಯುತ್ತಿದೆ. ಎಷ್ಟೇ ಯುಗ ಬಂದರು ಗ್ರಂಥ ಎನ್ನುವ ಪದ ಮಾತ್ರ ಅಳಿಯದೆ ಉಳಿಯುತ್ತದೆ.

ಹಸ್ತಪ್ರತಿ ಎನ್ನುವ ಪದ ಹಿಂದೆ ಕಾಗದ ಎನ್ನುವ ಜಾಗಕ್ಕೆ ಮೊದಲ ಹಂತದ್ದು ಕಾಗದಗಳು ಬಳಕೆ ಆದ ಮೇಲೆ ಈ ಪದ ನಿಂತುಹೋಯಿತು. ಆದರೆ ಗ್ರಂಥ ಎನ್ನುವ ಪದ ಮಾತ್ರ ಹಾಗೇ ಉಳಿಯಿತು ಎನ್ನಬಹುದು. ನಮ್ಮ ಕನ್ನಡ ಸಾಹಿತ್ಯದ ಪ್ರಮುಖ ಆಕರ ಗ್ರಂಥ ಇದಾಗಿರುವುದರಿಂದ ಇದನ್ನು ಮೊದಲ ಪ್ರಾಚೀನ ಕಾಗದ ಎಂದು ಕರೆಯಬಹುದು. ಸಾಹಿತ್ಯದ ಹುಟ್ಟಿಗೆ ಕಾರಣವಾಗಿರುವ ಹಸ್ತಪ್ರತಿಯು ಎಲ್ಲ ರೀತಿಯಿಂದಲೂ ಉತ್ತಮ ಆಕರ ಗ್ರಂಥ ಎಂದು ಹೆಸರಿಸಬಹುದು.

3.3. ಸಾಹಿತ್ಯ ಅಧ್ಯಯನ

"ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ" ಸಾಹಿತ್ಯದ ಮೂಲ ಸತ್ವವು ಅಭಿವ್ಯಕ್ತಿಯ ಸಾಧನವಾದ ಭಾಷೆಯಲ್ಲಿಯು ಇರುತ್ತದೆ. ಇದಕ್ಕೆ ಮೂಲವಾದ ಸೌಂದರ್ಯದ ಪ್ರಜ್ಞೆ ಮನುಷ್ಯನಷ್ಟು ಪ್ರಾಚೀನವಾಗಿದೆ"18 ಮನುಷ್ಯನ ಸೃಷ್ಟಿ ಯಾವಾಗ ಎಲ್ಲಿ ಎಂಬುದು ಖಚಿತವಾಗಿ ತಿಳಿಯಲು ಸಾಧ್ಯವಿಲ್ಲ. ಜಾನಪದ ಪರಂಪರೆಯಲ್ಲಿ ಪುರಾಣ, ಕಥೆ, ಕಾವ್ಯಗಳು ಹುಟ್ಟಿ ಮುಂದೆ ಸಾಹಿತ್ಯದ ಬೆಳವಣಿಗೆಗೆ ಕಾರಣವಾಯಿತು. ಸಾಹಿತ್ಯ ಸಂಶೋಧನೆ ಹುಟ್ಟಿಗೆ ಮೂಲ ಆಕರವಾಗಿದೆ. ಸಾಹಿತ್ಯಾಧ್ಯಯನಕ್ಕೆ ಪ್ರಾಚೀನ ಆಕರಗಳಾದ ವಡ್ಡಾರಾಧನೆ, ಕವಿರಾಜಮಾರ್ಗ, ಆದಿಪುರಾಣ, ವಿಕ್ರಮಾರ್ಜುನವಿಜಯ, ಛಂದೋ ಶಾಸ್ತ್ರಗಳು ಮತ್ತು ಅವುಗಳಲ್ಲಿ ಉಲ್ಲೇಖವಾಗಿರುವ ಲಿಪಿ, ಭಾಷೆ, ಶಾಸ್ತ್ರ, ಛಂಧಸ್ಸು, ದೇಶ, ಕೃತಿಕಾರ, ಇತಿಹಾಸ, ಮುಂತಾದ ವಿಷಯದ ಸಾಹಿತ್ಯ ಸಂಶೋಧನೆಯನ್ನು ಮೇಲಿನ ಗ್ರಂಥಗಳಿಂದ ತಿಳಿಯಬಹುದಾಗಿದೆ.

"ಸಾಹಿತ್ಯದ ಅಂತಸ್ತರಗಳನ್ನು ಅದರ ಅನನ್ಯತೆಯನ್ನು ಸತ್ವ, ಸತ್ಯಗಳನ್ನು, ವೈಶಿಷ್ಟ್ಯವನ್ನು, ಶಾಸ್ತ್ರಿಯವಾಗಿ ಅನಾವರಣಗೊಳಿಸುವ ವ್ಯವಸ್ಥಿತ ಬರವಣಿಗೆಯ ಕ್ರಿಯೆಯೇ ಸಾಹಿತ್ಯ ಸಂಶೋಧನೆ.19 ಎಂದು ತಿಳಿಯುವ ಸಂದರ್ಭದಲ್ಲಿ ಸಾಹಿತ್ಯದಲ್ಲಿ, ಸಾಹಿತ್ಯದ ಸತ್ಯತೆಗೆ ಬೆಲೆ ಕೊಡಲಾಗಿದೆ. ಶಾಸ್ತ್ರಿಯ ಬದ್ಧವಾಗಿ ಪಂಡಿತನಿಂದಲೋ, ಕವಿ, ರಾಜರಂತಹ ಸಾಹಿತ್ಯ ಪರಿಣಿತರಿಂದ ಆಯಾ ಕಾಲಕ್ಕೆ ಅನುಗುಣವಾಗಿ ರಚನೆಯಾಗುವ ಯಾವುದಾದರೂ ಬರಹಗಳನ್ನು ಸಾಹಿತ್ಯ ಎಂದು ಕರೆಯಬಹುದು. ಮೊದಲ ಸೃಷ್ಟಿ ಸಾಹಿತ್ಯವಾದರೇ ಸಂಶೋಧನೆ ನಂತರ ಬಂದಂತಹದ್ದು. ಆದರೆ ಮನುಷ್ಯನ ಅನುಭವ ಶೋಧನೆ ಆತನ ಜನನದೊಂದಿಗೆ ಬಂದಂತಹದ್ದು. ಮನರಂಜನೆಗಾಗಿ ಮಾಡಿಕೊಂಡ ಸಂಪ್ರದಾಯಗಳು, ಆಚರಣೆಗಳು, ಪುರಾಣ, ನಂಬಿಕೆ ಮೌಢ್ಯತೆಗಳ ಜೊತೆಗೆ ಬೆಳೆದ ಎಷ್ಟೋ ಬರಹಗಳು ಬೆಳೆದಿದ್ದು, ಅಂತಹ ಬರಹಗಳೇ ಮುಂದೆ ಸಾಹಿತ್ಯದ ರೂಪು ಪಡೆಯಿತು ಎನ್ನಬಹುದು. ಕನ್ನಡದ ಮೊಟ್ಟಮೊದಲ ಕೃತಿ ಎನಿಸಿರುವ 'ಕವಿರಾಜಮಾರ್ಗವು, ಕನ್ನಡ ಸಾಹಿತ್ಯದ ಇಡೀ ಚರಿತ್ರೆಯನ್ನು ತಿಳಿಸುವ ಗ್ರಂಥವಾಗಿದೆ. ಈ ಸಾಹಿತ್ಯವನ್ನು ಹಳಗನ್ನಡ, ನಡುಗನ್ನಡ, ಹೊಸಗನ್ನಡವನ್ನಾಗಿ ವಿಭಾಗಿಸಿಕೊಂಡು ಸಮೀಕ್ಷೆಗೆ ಒಳಪಡಿಸಲಾಗಿದೆ. ಹಳಗನ್ನಡವನ್ನು ಪ್ರಾಚೀನ ಸಾಹಿತ್ಯರೂಪದಲ್ಲಿ ಸಂಸ್ಕೃತ, ಪ್ರಾಕೃತಗಳನ್ನೊಳಗೊಂಡ ಭಾಷೆಯ ಮೂಲಕ ಕೆಲವು ಪದಗಳು ಮಾತ್ರ ಕನ್ನಡವನ್ನು ಒಳಗೊಂಡು ರಚನೆಯಾದವೆಂದು ಮತ್ತು ನಡುಗನ್ನಡದಲ್ಲಿ

---

18 ರಂ.ಶ್ರೀ.ಮುಗಳಿ–ಕನ್ನಡ ಸಾಹಿತ್ಯ ಚರಿತ್ರೆ–ಪುಟ–15,

19 ಡಾ.ಸಂಗಮೇಶ ಸವದತ್ತಿಮಠ–ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ

ಪೂರ್ಣ ಪ್ರಮಾಣದಲ್ಲಿ ಕನ್ನಡ ಬಳಕೆಯಲ್ಲಿತ್ತು, ಎನ್ನುವಂತಹ ಉದಾಹರಣೆಗಳನ್ನು ಕಾಣಬಹುದು. ಹೊಸಗನ್ನಡ ಸಾಹಿತ್ಯ ಶೋಧನೆ ಕಾಲದಲ್ಲಿ ಕನ್ನಡತನವನ್ನು ಉಳಿಸಿಕೊಂಡು ವಿವಿಧ ರೀತಿಗಳಲ್ಲಿ ಈ ಸಾಹಿತ್ಯ ಬೆಳವಣಿಗೆಯಾಗಿತ್ತೆಂದು ಹೇಳಬಹುದು. ಹಳಗನ್ನಡ ಸಾಹಿತ್ಯವೆಲ್ಲವು ರಾಜಕೀಯ ವ್ಯಕ್ತಿತ್ವವನ್ನು ಬೆಳೆಸುವ ತಾಣಗಳಾಗಿ ಬಂದದ್ದು ರಾಜನ ವೀರ ಯುದ್ದವನ್ನು ಅವನ ಬಿರುದುಗಳನ್ನು ಸಾಹಿತ್ಯವನ್ನಾಗಿ ರಚನೆ ಮಾಡುತ್ತಿದ್ದರು.

ಕರ್ನಾಟಕ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಸಂದರ್ಭದಲ್ಲಿ ಕನ್ನಡಕ್ಕೆ ಹೆಚ್ಚಿನ ಅವಕಾಶಗಳು ಸಿಗಲಿಲ್ಲವಾದರೂ ಅಲ್ಲಿ ಇಲ್ಲಿ ಹೋರಾಟದ ಗೀತೆಗಳು ರಚನೆಯಾಗುತ್ತಿದ್ದವು. ಹೆಚ್ಚಿನದಾಗಿ ಇಂಗ್ಲೀಷ್ ಸಾಹಿತ್ಯಗಳು ಕನ್ನಡ ಸಾಹಿತ್ಯವನ್ನು ಪ್ರಭಾವಿಸಿ ಅನುವಾದ ಸಾಹಿತ್ಯ ಹೆಚ್ಚಾಗಿ ಕಂಡುಬಂದಿತ್ತು. ಆ ಸಂದರ್ಭದಲ್ಲಿ ಬಿ.ಎಂ.ಶ್ರೀಯವರು ಕನ್ನಡ ತಲೆಎತ್ತುವ ಬಗೆ. ಎಂಬ ಮಾತನ್ನು ಸಾರಿದಾಗ ಕನ್ನಡವನ್ನು ಉಳಿಸಲು ಎಲ್ಲರೂ ಮುಂದಾದರು ಅಷ್ಟೋತ್ತಿಗಾಗಲೇ ಕನ್ನಡ ಬಲಿತ ಭಾಷೆಯಾಗಿ ಎಲ್ಲೆಲ್ಲೂ ಕಥೆ, ಕಾದಂಬರಿ, ಗೀತೆ, ಕಾವ್ಯಗಳು ಬೆಳಕು ಕಂಡವು.

ಪ್ರಮುಖವಾಗಿ ಸಂಶೋಧನ ಗ್ರಂಥ ವಿಷಯಕ್ಕೆ ಸಾಹಿತ್ಯ ಅಧ್ಯಯನ ವಿಷಯವನ್ನು ಅಳವಡಿಸಿರುವುದೆಂದರೆ ಸಾಹಿತ್ಯಕ್ಕೂ, ಸಂಶೋಧನೆಗೂ, ಇವೆರಡರಿಂದ ಗ್ರಂಥಕ್ಕೂ ಸಂಬಂಧಗಳನ್ನು ಕಲ್ಪಿಸುವುದಾಗಿದೆ. ಸಾಹಿತ್ಯ + ಅನುಭವ= ಸಂಶೋಧನೆ+ ಹುಡುಕು, ಗ್ರಂಥ+ ಬರಹ ಕೂಡಿಡು, ಹಿಡಿದಿಡು ಎನ್ನುವ ಅರ್ಥಗಳು ಬಂದಾಗ ಕವಿ ರಸಾನುಭವವನ್ನು ಹುಡುಕಿ ಶುದ್ಧಗೊಳಿಸಿದ್ದನ್ನು ಬರಹದ ಮೂಲಕ ಒಂದು ಕಡೆ ಹಿಡಿದಿಡುವುದಕ್ಕೆ ಗ್ರಂಥ ಎಂದು ಕರೆಯುತ್ತಾರೆ.

ರಸಾನುಭವವನ್ನು ಹಿಡಿದಿಡುವ ಬರಹಕ್ಕೆ ಗ್ರಂಥ ಎಂದು ಕರೆಯಬಹುದು, ಎಂದು ನನ್ನ ಭಾವನೆಯಾಗಿದೆ. ಕವಿ ಎಂದೋ ಕಟ್ಟಿ ಕೊಟ್ಟಿದ್ದನ್ನು ಹೊಸದಾಗಿ ರಚಿಸುವುದು ಮತ್ತು ಅವುಗಳಲ್ಲಿರುವ ತಪ್ಪುತಿದ್ದಿ ಸರಿಯಾದ ಮೂಲಕ್ಕೆ ತಂದು ರಚಿಸಿ ಗ್ರಂಥವಾಗಿಸುವ ಕಾರ್ಯವನ್ನು ಮಾಡುವಂತಹದ್ದು ಅಂದರೆ ಪ್ರಾಚೀನ ಸಾಹಿತ್ಯದ ತಿದ್ದುಪಡಿಯನ್ನು ಹೊಸ ಸಾಹಿತ್ಯಕ್ಕೆ ತರುವುದು ಗ್ರಂಥಗಳ ಕಾರ್ಯವಾಗಿದೆ. ಬರಹ ಯಾವುದೇ ಆಗಿರಲಿ ಅದನ್ನು ಶೋಧಿಸಿ ಕಾಲ, ಕೃತಿಕಾರ ವಿಷಯವನ್ನು ತಿಳಿಸುವುದು ಗ್ರಂಥದ ಕೆಲಸವಾಗಿದೆ.

ಪ್ರಾಚೀನ ಕಾಲದಲ್ಲಿ ಗ್ರಂಥಗಳ ರಚನೆಯು ಸಾಕಷ್ಟು ಅಭಿವೃದ್ಧಿಯಾಗಿದ್ದು, ಕವಿರಾಜಮಾರ್ಗ ಕಾವ್ಯಗ್ರಂಥವೇ ಸಾಕಷ್ಟು ಪುರಾವೆಗಳನ್ನು ನಮಗೆ ಒದಗಿಸುತ್ತದೆ. "ಕೆಲವು ಪ್ರಾಚೀನ ಗ್ರಂಥಗಳ ಹಾಗೂ ಗ್ರಂಥಕಾರರ ಸ್ಪಷ್ಟ ಉಲ್ಲೇಖಗಳು ದೊರಕಿವೆ. ಚೂಡಾಮಣಿ ಎಂಬ ಹೆಸರಿನ ತತ್ವಾರ್ಥ ಮಹಾ ಶಾಸ್ತ್ರದ ವ್ಯಾಖ್ಯಾನ ರೂಪವಾದ ಗ್ರಂಥವು ದೊರೆತ್ತಿರುವುದರಿಂದ ಕನ್ನಡ ಭಾಷೆ ಶಾಸ್ತ್ರಕ್ಕೆ ಅನುಪಯೋಗಿ ಅಲ್ಲವೆಂದು ವ್ಯಾಕರಣಕಾರನಾದ ಭಟ್ಟಕಳಂಕ ಹೇಳಿದ್ದಾನೆ .

ಗ್ರಂಥ ಎನ್ನುವ ಪದಕ್ಕೆ ರಂ.ಶ್ರೀ. ಮುಗಳಿಯವರು ಹೇಳಿರುವಂತೆ 32 ಅಕ್ಷರಗಳ ಎಣಿಕೆಯುಳ್ಳ ಒಂದು ಮೊತ್ತ"20 ವನ್ನು ಗ್ರಂಥ ಎಂದು ಕರೆದಿದ್ದಾರೆ. ಗ್ರಂಥ ಪದವು ಅಕ್ಷರಗಳನ್ನು ಎಣಿಕೆಯಿಂದ ರಚಿತವಾದದ್ದೆಂದು ಹೇಳಬಹುದು. ಯಾವುದೇ ಸಾಹಿತ್ಯವಾದರೂ ಬರೆದ ಬರಹದಲ್ಲಿ ಅಕ್ಷರಗಳ ಕ್ರಮದಿಂದ ಈ ಗ್ರಂಥವನ್ನು ರಚಿಸಿ ಇಡುತ್ತಿದ್ದರು. ಇಂಥ ಗ್ರಂಥಗಳು ಅನೇಕವಿದ್ದು ಅವುಗಳನ್ನು ತಾಳೆಗರಿಯಿಂದ ಕಾಗದಕ್ಕೆ ಬದಲಾಯಿಸಿದ್ದು ಆಧುನಿಕ ಯುಗದಲ್ಲಿ. ಈ ತಾಳೆಗರಿ ಸಂಶೋಧನೆಯಿಂದ ಹಳಗನ್ನಡ ಸಾಹಿತ್ಯದ ಗ್ರಂಥಗಳನ್ನು ಪತ್ತೆಹಚ್ಚಿ ಮುದ್ರಿಸಿದ್ದರೆ. ವ್ಯಾಕರಣಾಂಶಗಳ ಆಧಾರದ ಮೇಲೆ ಪದ ಪ್ರಯೋಗಗಳ ಮೇಲೆ ಕವಿ, ರಾಜನ ಆಧಾರದ ಮೇಲೆ ರಚಿತವಾದ ಗ್ರಂಥಗಳು ಶತಮಾನಗಳನ್ನು ಗುರುತಿಸುವ ಸಂದರ್ಭಗಳು ನಡೆದಿವೆ. ಗ್ರಂಥವೆಂದರೆ ಸಾಹಿತ್ಯ, ಸಾಹಿತ್ಯವೆಂದರೆ ಗ್ರಂಥ ಎನ್ನುವ ನಿಟ್ಟಿನಲ್ಲಿ ನಡೆದು ಬಂದ ಸಂಶೋಧನೆಯ ಮಟ್ಟ ಅನೇಕ ಬದಲಾವಣೆಗಳನ್ನು ಮೈಗೂಡಿಸಿಕೊಂಡಿದೆ. ಮೊದಲ ಸಾಹಿತ್ಯ ಕಾಲದಲ್ಲಿ ಜೈನ, ವೀರಶೈವ, ವೈಷ್ಣವ ಪಂಥಗಳು ಪ್ರಭಾವ ಬೀರಿದವು, ನಂತರ ಆಧುನಿಕ ಯುಗದಲ್ಲಿ ಸಾಹಿತ್ಯ ಸ್ವತಂತ್ರವಾಗಿ ಯಾರು ಬೇಕಾದರು ರಚನೆ ಮಾಡುವಷ್ಟು ಸರಳವಾಗಿ ಕನ್ನಡದ ಸಾಹಿತ್ಯ ರಚನೆಗೊಂಡಿತು.

ಅನೇಕ ಕನ್ನಡ ಸಾಹಿತ್ಯದ ಬರವಣಿಗೆಯು ಸರಿಯಾದ ಆಧಾರಗಳು ಸಿಗದೆ ಅಂದರೆ ಮೂಲ ಕವಿಯ ಸ್ವಹಸ್ತಪ್ರತಿ ಸಿಗದೆ ಊಹಾತ್ಮಕ ಪಾಠಗಳ ಮೇಲೆ ರಚಿತವಾದದ್ದು ಅಂತಹ ಗ್ರಂಥಗಳು ಕನ್ನಡ ರಚನೆಯಾದ ಅನೇಕ ಇತಿಹಾಸವನ್ನು ತಿಳಿಯಲು ಸಾಧ್ಯವಾಗಿದೆ. "ಕರ್ನಾಟಕದ ರಾಜರಲ್ಲಿ ಕೆಲವರು ಕನ್ನಡದಲ್ಲಿ ಶಾಸನ ಮತ್ತು ಗ್ರಂಥರಚನೆಗೆ ಪ್ರೋತ್ಸಾಹವನ್ನು ಕೊಟ್ಟುದಲ್ಲದೆ ಸ್ವಂತವಾಗಿ ಗ್ರಂಥಗಳನ್ನು ರಚಿಸಿದರು."21 ಈ ರೀತಿಯಾಗಿ ಬೆಳೆದು ಬಂದ ಗ್ರಂಥಗಳನ್ನು ಸಂಶೋಧನೆ ಮಾಡಿ ಅವುಗಳಿಂದ ಪಾಠಪರಿಷ್ಕರಣಗಳೊಂದಿಗೆ ಶುದ್ಧ ಸಾಹಿತ್ಯವನ್ನಾಗಿಸುವುದು ಸಂಶೋಧಕರ ಕರ್ತವ್ಯವಾಗಿದೆ. ಸಾಹಿತ್ಯ ಹುಟ್ಟಿದಾಗಿನಿಂದಲೇ ಗ್ರಂಥವು ಹುಟ್ಟಿತ್ತೆಂದು ಹೇಳಬಹುದು. ಆಗ ನಡೆದದ್ದು ರಸಾನುಭವದ ಶೋಧನೆಯಾದ್ದರಿಂದ ಸಾಹಿತ್ಯದ ಪ್ರಕಾರಗಳು ರಚನೆಯಾದವು. ಸಾಹಿತ್ಯವು ಕವಿ ಅಭಿವ್ಯಕ್ತಿಸುವ ಅನುಭವವಾದರೆ, ಗ್ರಂಥ ಅನುಭವವನ್ನು ಒಂದು ಕಡೆ ಕೂಡಿಹಾಕಿ ತೋರಿಸುವಂತಹದ್ದಾಗಿದೆ.

---

20. ರಂ,ಶ್ರೀ, ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ – ಪುಟ. 36

21. ರಂ,ಶ್ರೀ, ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ – ಪುಟ. 41

ಸಂಶೋಧನೆ ಅದರ ಕಾಲ, ಭಾಷೆ, ಇತಿಹಾಸಗಳಂತಹ ಪದ ಪ್ರಯೋಗಗಳ ನಿರ್ಣಯವನ್ನು ಮಾಡುತ್ತದೆ. ಸಾಹಿತ್ಯವನ್ನು ಕವಿ ರಚಿಸಿಕೊಟ್ಟಾಗ ಅದನ್ನು ತನ್ನ ಸಹಿಯ ಮೂಲಕ ಹೊರತರುವುದು ರಾಜನ ಕರ್ತವ್ಯದಂತೆ ಎಂದು ಅನೇಕ ಗ್ರಂಥಗಳನ್ನು ನೋಡಿದರೆ ತಿಳಿಯಬಹುದು. ರಾಜನು ಹೇಳಿ ಬರೆಸಿದ ಮತ್ತು ತಾನೆ ಬರೆದ ಗ್ರಂಥಗಳನ್ನು ನೋಡಬಹುದು. ಲಿಪಿಕಾರರನ್ನು ಅದಕ್ಕಾಗಿಯೇ ನೇಮಿಸಿಕೊಳ್ಳುತ್ತಿದ್ದು ಉಂಟು. ಅಂದು ಹೆಚ್ಚಾಗಿ ಪ್ರಚಾರದಲ್ಲಿದ್ದ ರಾಮಾಯಣ, ಮಹಾಭಾರತಗಳಂತಹ ಮಹಾಕಾವ್ಯಗಳ ಬಳಕೆ ಹೆಚ್ಚಾಗಿ ನಡೆಯಿತು. "ಸಾಹಿತ್ಯ ಹೃದಯಗಮ್ಯವಾದರೂ ಸಾಹಿತ್ಯ ಸಂಶೋಧನೆಯು ಬುದ್ಧಿ ಗಮ್ಯವಾಗಿದೆ. ಸಾಹಿತ್ಯ ಸುಲಭವಾಗಿ ಆಹ್ಲಾದ ನೀಡಿದರೆ ಸಾಹಿತ್ಯಸಂಶೋಧನೆ ಪರಿಶ್ರಮದ ಮೂಲಕ ಆಹ್ಲಾದವನ್ನು ನೀಡುತ್ತದೆ."22 ಗ್ರಂಥ ಇಂತಹ ಬರವಣಿಗೆಯನ್ನು ಹಿಡಿದು ನಿಲ್ಲಿಸುವ ಸಾಧನವಾಗಿದೆ.

ಗ್ರಂಥರೂಪಗಳು ಇಲ್ಲದಿದ್ದರೆ ಯಾವ ಸಾಹಿತ್ಯವನ್ನು ಒಂದೇ ರೀತಿಯಲ್ಲಿ ಅಧ್ಯಯನ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಯಾವುದೇ ಇತಿಹಾಸ ತಿಳಿಯಲು ಆಗುತ್ತಿರಲಿಲ್ಲ. ಒಬ್ಬ ಕವಿಯಿಂದ ಆದ ಅನುಭವವನ್ನು, ಭಾವನೆಯ ಅಭಿವ್ಯಕ್ತಿಯನ್ನು ಎಲ್ಲರಿಗೂ ತಿಳಿಸುವಂತೆ ಮಾಡಿರುವಂತಹ ಕೆಲಸವನ್ನು ಗ್ರಂಥಗಳು ಸಾಧಿಸಿವೆ ಎಂದು ಹೇಳಬಹುದು. ಮೌಖಿಕ ಪರಂಪರೆಯಿಂದ ಸಾಹಿತ್ಯ ಪರಂಪರೆವರೆಗೂ ಸಾಗಿಬಂದದ್ದು ಗ್ರಂಥಗಳ ವೈಶಿಷ್ಟವಾದ ಬೆಳವಣಿಗೆ. ಗ್ರಂಥವನ್ನು ದೇವರ ಹೆಸರಲ್ಲಿ ಪೂಜೆಮಾಡುತ್ತಿದ್ದ ಜನರಿಗೆ ಸಾಹಿತ್ಯವನ್ನು ಹಿಡಿದಿಡುವ ಸಾಧನ ಎಂದು ತಿಳಿದಿದ್ದು ಅನೇಕ ಶತಮಾನಗಳ ನಂತರ ಎಂದು ಹೇಳಬಹುದು.

ಕನ್ನಡ ಸಾಹಿತ್ಯದ ಮೇಲೆ ಅನೇಕ ಕವಿಗಳ ಪ್ರಭಾವವಿದ್ದು ಪಂಪ ಮೊದಲಿಗನೆಂದು ಆದಿಕವಿ ಎಂದು ಸಿಕ್ಕಿರುವ ಗ್ರಂಥಗಳ ಆಧಾರದ ಮೇಲೆ ಗುರುತಿಸಬಹುದಾಗಿದೆ. ರನ್ನ, ಜನ್ನ, ಪೊನ್ನ, ನಾಗವರ್ಮ, ನಾಗಚಂದ್ರ, ದುರ್ವಿನೀತ, ನಯಸೇನ, ಚಾವುಂಡರಾಯರಂತಹ ಕವಿಗಳು ಅನೇಕ ಸಾಹಿತ್ಯವನ್ನು ರಚಿಸಿ ಕನ್ನಡ ಗ್ರಂಥಗಳ ಬೆಳವಣಿಗೆಗೆ ಕೊಡುಗೆಯಾಗಿ ನೀಡಿದ್ದಾರೆ. ಹಾಗೆಯೇ ನಡುಗನ್ನಡ ಸಾಹಿತ್ಯಕ್ಕೆ ಬಸವಣ್ಣ, ಅಲ್ಲಮಪ್ರಭು, ಜೇಡರದಾಸಿಮಯ್ಯ, ಅಕ್ಕಮಹಾದೇವಿ. ರಾಘವಾಂಕ, ಹರಿಹರ, ಚೆನ್ನಬಸವಣ್ಣ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ್ಣರಂತಹ ಕವಿಗಳು ಸಹ ಕನ್ನಡ ಗ್ರಂಥಗಳ ರಚನೆಗೆ ತೊಡಗಿದ್ದು ಅನೇಕ ಗ್ರಂಥಗಳನ್ನು ರಚನೆ ಮಾಡಿದ್ದರು.

---

22. ಡಾ, ಸಂಗಮೇಶ ಸವದತ್ತಿ ಮಠ – ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ– ಪುಟ. 5

20ನೇ ಶತಮಾನದಲ್ಲಿ ನಂತರ ಆಧುನಿಕ ಸಾಹಿತ್ಯದ ಬೆಳವಣಿಗೆಯಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಸ್ತ್ರೀವಾದಿ ಸಾಹಿತ್ಯದ ಕಾಲಘಟ್ಟಗಳ ಬೆಳವಣಿಗೆಯನ್ನು ನಾವು ಕಾಣಬಹುದಾಗಿದೆ. ಈ ಸಮಯದಲ್ಲಿ ಅನೇಕ ಗ್ರಂಥಗಳ ರಚನೆಯನ್ನು ನಾವು ನೋಡಬಹುದಾಗಿದೆ. ಸಾಹಿತ್ಯ ಸಂಶೋಧನೆಯನ್ನು ಆನೇಕ ಕಾಲಘಟ್ಟಗಳ ಮೂಲಕ ಸಂಶೋಧನೆಗೆ ಒಳಪಡಿಸಲಾಗಿದೆ. ಅಂದರೆ 10ನೇ ಶತಮಾನದ ಮುಂಚಿತವಾಗಿ ಪಂಪ ಪೂರ್ವಯುಗವೆಂದು, 10ನೇ ಶತಮಾನವನ್ನು ಪಂಪ ಯುಗವೆಂದು, 12ರಿಂದ 15ನೇ ಶತಮಾನದವರೆಗೆ ಬಸವಯುಗವೆಂದು, 15ನೇ ಶತಮಾನದ ನಂತರ ಕುಮಾರವ್ಯಾಸಯುಗವೆಂದೂ, ಅದರ ನಂತರ ಆಧುನಿಕ ಯುಗವೆಂದು ಕನ್ನಡ ಸಂಶೋಧಕರು ಪರಿಗಣಿಸಿದ್ದಾರೆ. ಅಂದರೆ ಸಾಹಿತ್ಯದ ಸಂಶೋಧನೆಯು ಸಾಕಷ್ಟು ನಡೆದಿದ್ದು ಹೊಸ ವಿಮಾರ್ಶಾತ್ಮಕ ಗ್ರಂಥಗಳು ಮುದ್ರಣಗೊಂಡಿದ್ದು ಆಧುನಿಕ ಸಂಶೋಧನಾ ಯುಗದಲ್ಲಿ ಎಂದು ಹೇಳಬಹುದಾಗಿದೆ.

ಗ್ರಂಥ ಎನ್ನುವಂತಹದ್ದು ಕಾದಂಬರಿಯ ರೀತಿಯಲ್ಲಿ, ಕಾವ್ಯ, ಕತೆ, ನಾಟಕ, ಪ್ರಬಂಧಗಳ ರೀತಿಯಲ್ಲಿ ಹೊರಬಂದವು. ಇಲ್ಲಿ ಹೆಚ್ಚಾಗಿ ಶೋಧನೆಯ ಕೆಲಸ ನಡೆದಿದ್ದು ಈ ಕಾಲ ಘಟ್ಟದಲ್ಲಿಯೇ ಹೊಸ ಆಲೋಚನೆಗಳ ಜೊತೆಗೆ ಅನೇಕ ಸಂಶೋಧನೆಗಳು ಆಧುನಿಕ ಯುಗದಲ್ಲಿ ನಡೆದಿತ್ತೆಂದು ಹೇಳಬಹುದು. "ಕನ್ನಡದ ಸಾಹಿತ್ಯವನ್ನು ಕುರಿತ ಮೊದಲ ಸಮೀಕ್ಷೆಯು 'ವಿಗಲ್'ನದಾದುರಿಂದ ಅದಕ್ಕೆ ಐತಿಹಾಸಿಕ ಮಹತ್ವವಿದೆ, ಪತ್ರಿಕೆಯ 28 ಪುಟಗಳನ್ನು ಬಳಸಿರುವ ಆ ಲೇಖನದಲ್ಲಿ ಮೊದಲಿಗೆ ಕನ್ನಡ ನಾಡಿನ ಗಡಿ ಪೂರ್ವದ ಹಳಗನ್ನಡ ಇವನ್ನು ಉಲ್ಲೇಖಿಸಿದ್ದಾನೆ"23 ಸಾಹಿತ್ಯ ಸಂಶೋಧನೆಯ ಸಮೀಕ್ಷೆಯನ್ನು ಅನೇಕ ಜನರು ಕೈಗೊಂಡಿರುವುದನ್ನು ನಾವುಕಾಣಬಹುದು. ಸಾಹಿತ್ಯ ಸಂಶೋಧನೆಯನ್ನು ಅನೇಕ ಜನರು ಕೈಗೊಂಡಿದ್ದು ಅವರ ಸಂಶೋಧನೆಯಿಂದ "ಆದಿಪುರಾಣ, ಪಂಪಭಾರತ, ಕರ್ನಾಟಕಕಾದಂಬರಿ, ಯಶೋಧರ ಚರಿತೆ, ಹರಿಶ್ಚಂದ್ರಕಾವ್ಯ, ವಡ್ಡಾರಾಧನೆ, ಗದಾಯುದ್ಧ, ಅಜಿತಪುರಾಣ, ರಾಮಚಂದ್ರಪಟ್ಟಾಭೀಷೆಕ, ಕುಮಾರವ್ಯಾಸಭಾರತಗಳಂತಹ ಗ್ರಂಥಗಳನ್ನು ಸಂಶೋಧಿಸಿ ಸಾಹಿತ್ಯದ ಹಿರಿಮೆಯನ್ನು ಎತ್ತಿಹಿಡಿದರು. ಗ್ರಂಥ ಎನ್ನುವಂತದ್ದು ಹೆಚ್ಚಾಗಿ ಸಾಹಿತ್ಯ ಸಂಶೋಧನೆಯನ್ನು ಒಳಗೊಂಡಂತೆ ಬೆಳವಣಿಗೆಯಾಗಿರುವುದನ್ನು ಕಾಣಬಹುದು.

23.ಶ್ರೀನಿವಾಸ ಹಾವಾನೂರು – ಹೊಸಗನ್ನಡ ಅರುಣೋದಯ – ಪುಟ. 163

ಅಧ್ಯಾಯ: 4

ಕನ್ನಡ ಸಂಶೋಧನೆಗೆ ಪಾಶ್ಚಿಮಾತ್ಯರ ಕೊಡುಗೆ

4.1 ರೆ.ಫ.ಕಿಟೆಲ್

4.2 ಬಿ.ಎಲ್.ರೈಸ್

ಅಧ್ಯಾಯ–4

ಕನ್ನಡ ಸಂಶೋಧನೆಗೆ ಪಾಶ್ಚಿಮಾತ್ಯರ ಕೊಡುಗೆ

ಕನ್ನಡ ಸಂಶೋಧನೆಗೆ ತನ್ನದೇ ಆದ ಕೊಡುಗೆಯನ್ನು ನೀಡುವುದರ ಮೂಲಕ ಮೊದಲ ಹಂತದ ಸಂಶೋಧನೆಗೆ ತಳಹದಿ ಹಾಕಿದವರು ಪಾಶ್ಚಿಮಾತ್ಯರು. ಭಾರತಕ್ಕೆ 18–19ನೇ ಶತಮಾನದಲ್ಲಿ ಆಗಮಿಸಿದ ಅವರು ತಮ್ಮ ಮತ ಪ್ರಚಾರದ ಉದ್ದೇಶದಿಂದ ಕರ್ನಾಟಕಕ್ಕೆ ಬಂದು ಇಲ್ಲಿ ಯಥೇಚ್ಚವಾಗಿ ಸಿಗುತ್ತಿದ್ದ ಶಾಸನ, ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂಶೋಧನೆಗೆ ತೊಡಗಿದರು, ಭಾರತಕ್ಕೆ ಮುದ್ರಣ ಮಾಧ್ಯಮವನ್ನು ಮೊದಲಿಗೆ ತಂದವರು ಮಿಶನರಿಯವರೆಂದು ಹೇಳಬಹುದು. ಅವರು ಗ್ರಂಥಗಳನ್ನು ಕನ್ನಡದಲ್ಲಿ ಮುದ್ರಿಸಿ ಬೋಧಿಸುವಂತಹ ಸಂದರ್ಭದಲ್ಲಿ, ಅದನ್ನು ಮರೆತು ಕನ್ನಡದ ಕೆಲಸ ಮಾಡಿದ ವಿದ್ವಾಂಸರಲ್ಲಿ ಪಾಶ್ಚೀಮಾತ್ಯರೇ ಮೊದಲಿಗರು. ವಿವಿಧ ಹುದ್ದೆಗಳನ್ನು ಅರಸಿ ಬಂದು ಭೂ ಸ್ವಾಧೀನ ಸಮಯದಲ್ಲಿ ಭೂಮಾಪನ ಮಾಡುವಾಗ ಯಾವುದೋ ಕೆಲಸಕ್ಕೆ ಬಾರದ ವಸ್ತುಗಳಂತೆ ಬಿದ್ದಿದ್ದ ಶಾಸನ, ಹಸ್ತಪ್ರತಿಗಳನ್ನು ಸಂಗ್ರಹಿಸತೊಡಗಿದರು.

ಈ ಸಂದರ್ಭದಲ್ಲಿ "ಭಾರತವನ್ನು ತಮ್ಮ ಆಸಕ್ತಿಯ ಅಧ್ಯಯನ ಕ್ಷೇತ್ರವೆಂದು ತಿಳಿದು ಪ್ರಾನ್ಸ್, ಇಟಲಿ, ಪೋರ್ಚ್‌ಗಲ್, ಇಂಗ್ಲೇಂಡ್, ಜರ್ಮನ್, ಮುಂತಾದ ಯುರೋಪಿಯನ್ ದೇಶಗಳು ತಮ್ಮ ದೇಶದ ಸಾಹಿತಿಗಳು, ವಿದ್ವಾಂಸರನ್ನು ಭಾರತಕ್ಕೆ ಕಳುಹಿಸುತ್ತಿದ್ದರು. ವ್ಯಾಪಾರ ಉದ್ಯೋಗ ಬೆಳವಣಿಗೆ ಒಂದು ಕಾರಣವಾದರೆ, ಭಾರತದ ಸಂಪತ್ತಿನ ಪ್ರಯೋಜನವನ್ನು ಪಡೆಯುವುದು ಇನ್ನೊಂದು ಅವರ ಉದ್ದೇಶವಾಗಿತ್ತು. ಕೆಲಸದ ಮೇಲೆ ಬಂದ ಅಧಿಕಾರಿಗಳು ಸಂಶೋಧನಾಸಕ್ತರಾಗಿದ್ದರಿಂದ ತಮ್ಮ ಬಿಡುವಿನ ವೇಳೆಯಲ್ಲೆಲ್ಲ ಶ್ರಮಸಾಧ್ಯ, ಕ್ಷೇತ್ರಕಾರ್ಯ ಮಾಡುವ, ದೇಶ, ಭಾಷೆ, ಸಂಸ್ಕೃತಿ, ಧರ್ಮ, ರೀತಿ ನೀತಿ ಸಂಪೂರ್ಣ ಭಿನ್ನವಾಗಿದ್ದರೂ ಅವರು ಜ್ಞಾನಕ್ಕಾಗಿ ಪಟ್ಟ ಶ್ರಮದ ಕಲ್ಪನೆಯೇ ಅದ್ಭುತವಾದುದು"24 ಇಲ್ಲಿನ ಭಾಷೆಯನ್ನು ಅಭ್ಯಾಸಮಾಡಿ ಶಾಸನ, ಹಸ್ತಪ್ರತಿ ಮತ್ತು ಹಳಗನ್ನಡ, ನಡುಗನ್ನಡ, ಸಾಹಿತ್ಯಗಳನ್ನು ಅಭ್ಯಾಸಮಾಡಿ ಕನ್ನಡಕ್ಕೆ ತಮ್ಮದೇ ಆದ ಸಂಶೋಧನೆಯ ಗ್ರಂಥಗಳನ್ನು ಮುದ್ರಿಸಿದ್ದರು. ಕಾಗದದ ಬಳಕೆ ಭಾರತಕ್ಕೆ ಬಂದಿದ್ದು ಪಾಶ್ಚಿಮಾತ್ಯರ ಆಗಮನದಿಂದಲೇ ಎಂದು ಹೇಳಬಹುದು.

ಅನೇಕ ಮಿಶನರಿ ಸಂಸ್ಥೆಗಳ ಮೂಲಕ ಮುದ್ರಣ ಯಂತ್ರಗಳನ್ನು ತಂದು ಕನ್ನಡ ಸಂಶೋಧನ ಕಾರ್ಯವನ್ನು ಮಾಡಿದರು. ಏಷ್ಯಟಿಕ್ ಸೊಸೈಟಿ, ಇಂಡಿಯಾನ್ ಅಂಟಿಕ್ವರಿ, ಮಿಶನರಿಗಳು, ಮಿಥಿಕ್ ಸೊಸೈಟಿಗಳ ಮೂಲಕ ಸಂಶೋಧನ ಗ್ರಂಥಗಳನ್ನು ಮುದ್ರಿಸಿದ್ದರು. ಅಂತವರಲ್ಲಿ ರೆ.ಫ.ಕಿಟೆಲ್, ಬಿ.ಎಲ್.ರೈಸ್, ಜಾನ್.ಎಫ್.ಪ್ಲೀಟ್. ಹೆನ್ರಿಹೇಗ್. ಹರ್ಮನ್‌ಮೊಗ್ಲಿಂಗ್, ಜಿ.ಎಚ್.ವೈಗಲ್, ಜಾನ್‌ಗ್ಯಾರೆಟ್, ಮೆಕೆಂಜಿ, ಹ್ಯಾಂಡ್ಸ್ ಮತ್ತು ರೀವ್ಸ್, ಮುಂತಾದವರು ಕನ್ನಡ ಸೇವೆಗೆ ಮುಂದಾದರು.

---

24. ಡಾ. ಸಂಗಮೇಶ ಸವದತ್ತಿಮಠ – ಕನ್ನಡ ಸಾಹಿತ್ಯ ಸಂಶೋಧನೆ ಮಾರ್ಗ ಮತ್ತು ಇತಿಹಾಸ – ಪುಟ. 217

ಇವರಲ್ಲಿ ಅನೇಕ ವಿದ್ವಾಂಸರು ಭಾರತದಲ್ಲೇ ಹುಟ್ಟಿ ಭಾರತದಲ್ಲೇ ಅಧಿಕಾರಿಗಳಾಗಿ ಸೇವೆಮಾಡಿದ್ದಾರೆ. ಕನ್ನಡದಲ್ಲಿ ಯಾವುದೇ ಕೆಲಸವಾಗಿದ್ದರೂ ಅದು ಪಾಶ್ಚಿಮಾತ್ಯ ವಿದ್ವಾಂಸರಿಂದಲ್ಲೇ ಎಂದು ಹೇಳಬಹುದು. ಸಂಶೋಧನೆಯ ಕಾರ್ಯ ಒಂದೇ ಅಲ್ಲ ಎಲ್ಲ ರೀತಿಯಿಂದಲೂ ಸಹ ಅಂದರೆ ವಿಜ್ಞಾನ, ಕಲೆ, ವಾಣಿಜ್ಯಕ್ಕೆ ಸಂಬಂಧಿಸಿದ ಶೋಧನೆಗಳು, ಪತ್ರಿಕೆಗಳ ಶೋಧನೆ, ಎಲ್ಲವು ಈ ವಿದ್ವಾಂಸರಿಂದಲ್ಲೇ ಆ ಸಂಧರ್ಭದಲ್ಲಿ ಕರ್ನಾಟಕದಲ್ಲಿ ಸಾಕಷ್ಟು ಸಂಪತ್ತು ಸಿಗುತ್ತಿತ್ತು ಅದನ್ನು ಹೊರದೇಶಕ್ಕೂ ತೆಗೆದುಕೊಂಡು ಹೋಗಿದ್ದರು. ಎಷ್ಟೋ ವಸ್ತುಗಳು ಇಂದಿಗೂ ವಿದೇಶದಲ್ಲಿರುವ ಸಂದರ್ಭಗಳು ಉಂಟು ಎಂದು ಹೇಳಬಹುದಾಗಿದೆ. ಈ ಅಧ್ಯಯದಲ್ಲಿ ಕೆಲವು ಪ್ರಮುಖ ವಿದ್ವಾಂಸರನ್ನು ಹೆಸರಿಸಲಾಗಿದೆ.

ದೇಶದಿಂದ ದೇಶಕ್ಕೆ ವ್ಯವಹಾರ, ವ್ಯಾಪಾರಗಳು ನಡೆದಿದ್ದು ಮತ್ತು ವಿವಿಧ ವಿಜ್ಞಾನ ಒಪ್ಪಂದಗಳ ಮೇಲೆ ಸಂಶೋಧನೆ ನಡೆಯುತ್ತಿದ್ದು ಕೊಡುವ ಕೊಳ್ಳುವ ಕಾರ್ಯಗಳು ನಡೆಯುತ್ತಿವೆ. ರೈಲುಮಾರ್ಗ ಶೋಧನೆ, ವಾಹನಗಳ ಬಳಕೆ, ವಿಜ್ಞಾನಗಳ ಯಂತ್ರಗಳಂತಹ ಸಂಶೋಧನ ಕಾರ್ಯ ಇಂದಿಗೂ ನಡೆಯುತ್ತಿದೆ. ಪಾಶ್ಚಿಮಾತ್ಯ ವಿದ್ವಾಂಸರಲ್ಲಿ ಅನೇಕರಿದ್ದು ಅವರಲ್ಲಿ ರೆ.ಫ. ಕಿಟೆಲ್ ಮತ್ತು ಅವರು ಸಂಶೋಧನೆ ಮಾಡಿದ ನಿಘಂಟುವನ್ನು, ಬೆಂಗಳೂರಿನಲ್ಲಿ ಜನಿಸಿದ ಬಿ.ಎಲ್. ರೈಸ್‌ರವರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

4.1. ರೆ.ಫ. ಕಿಟೆಲ್

ಬ್ರಿಟಿಷ್ ಅಧಿಕಾರಿಯಾಗಿ ಕರ್ನಾಟಕಕ್ಕೆ ಬಂದ ಕಿಟೆಲ್ ಕರ್ನಾಟಕದ ವಿವಿಧ ಸ್ಥಳಗಳನ್ನು ಪರಿಶೀಲಿಸಿ ಅಲ್ಲಿ ಸಿಗುವ ಶಾಸನ, ಹಸ್ತಪ್ರತಿಗಳನ್ನು ಮತ್ತು ಇತರ ವಸ್ತುಗಳನ್ನು ಸಂಗ್ರಹಿಸಿ ಅವುಗಳಲ್ಲಿರುವ ಸಾಹಿತ್ಯಕ್ಕೆ ಟಿಪ್ಪಣಿಗಳನ್ನು ತಯಾರಿಸಿ ಕನ್ನಡ ಸಂಶೋಧನೆಗೆ ಮುನ್ನುಡಿಯಂತೆ ದಾರಿ ಮಾಡಿಕೊಟ್ಟವರಲ್ಲಿ ಪ್ರಮುಖರೆಂದು ಗುರುತಿಸಬಹುದು. ಜರ್ಮನ್ ದೇಶದಿಂದ ಕರ್ನಾಟಕಕ್ಕೆ ಮತ ಪ್ರಚಾರದ ದೃಷ್ಟಿಯಿಂದ ಕ್ರೈಸ್ತ ಮಿಶನರಿ ಮೂಲಕ ಬಂದು ಕನ್ನಡದ ಸೇವೆಮಾಡಿ ಇಂದಿಗೂ ಜ್ಞಾಪಕ ಇರುವಂತೆ ಮಾಡಿದ ವಿದ್ವಾಂಸ ಕಿಟೆಲ್‌ರವರು.

ಕ್ರಿ.ಶ. 1832 ನೇ ಏಪ್ರಿಲ್ 7ರಂದು ಜರ್ಮನಿಯ ರೆಸ್ಪರ್‌ಹಾಫ್‌ನಲ್ಲಿ ಗಾವಫ್ರೀಟ್ ಕ್ರಿಸ್ತಿಯಾನ್ ಕಿಟೆಲ್ ಮತ್ತು ಟ್ಯುಡೊವ್ ಹೆಲೆನ್‌ರವರ ಮೊದಲನೇ ಮಗನಾಗಿ ಜನಿಸಿದವರು ಕಿಟೆಲ್. ಚಿಕ್ಕಂದಿನಲ್ಲೇ ತನ್ನ ಅಜ್ಜನ ಆಶ್ರಯದಲ್ಲಿ ಬೆಳೆದು ಅನೇಕ ಭಾಷೆಯನ್ನು ಮೈಗೂಡಿಸಿಕೊಂಡು ಪ್ರಾಥಮಿಕ ಹಂತದ ವಿದ್ಯಾಭ್ಯಾಸಕ್ಕಾಗಿ ಔರಿಕ್ ಪಟ್ಟಣಕ್ಕೆ ಬಂದು ಧರ್ಮ ಪ್ರಚಾರದ ಹುಚ್ಚನ್ನು ಹತ್ತಿಸಿಕೊಂಡು ಕ್ರೈಸ್ತ ಮಿಶನರಿಯಾಗಲು ಪಣತೊಟ್ಟರು. ಅನೇಕ ಭಾಷೆ ಬಲ್ಲ ಇವರು ಬಾಲ್ಯದಲ್ಲಿಯೇ ಸರಳ ಸಜ್ಜನಿಕೆ ನಡೆ ನುಡಿಗಳನ್ನು ಕಲಿತು ಧಾರ್ಮಿಕ ಮನೋವೃತ್ತಿಯಲ್ಲಿ ಮನಸ್ಸು ಹರಿಯಲು ಬಿಟ್ಟರು. ಅಂದು ದೇಶದ ಸೈನ್ಯಗಳಲ್ಲಿ ಕೆಲಸಕ್ಕೆ ಸೇರುವ ಆಸೆ ಮನೆಯವರದ್ದಾಗಿದ್ದು ನಿರಾಶರಾದರು, ಚಿಕ್ಕವಯಸ್ಸಿನಲ್ಲಿ ಶಿಕ್ಷಣದ ಅನುತ್ತೀರ್ಣ ನಿಯಮದಿಂದಾಗಿ ನೋವುಗಳಿಗೆ ಎಡೆಕೊಡದೆ ಮುಂದೆ ಕ್ರೈಸ್ತ ಮಿಶನರಿಯ ಮೂಲಕ ಮತ ಪ್ರಚಾರದ ಹಿನ್ನೆಲೆಗೆ ಒತ್ತು, ಆ ದೃಷ್ಟಿಯಿಂದ ಮತ್ತೊಮ್ಮೆ ಶಿಕ್ಷಣಕ್ಕೆ ಅನುಮತಿಯನ್ನು ಪಡೆದು ಅವರ ನಿಯಮಕ್ಕೆ ಒಳಗಾಗಿ ವಿಧಿಯಿಲ್ಲದೆ ಒಪ್ಪಿ ಶಿಕ್ಷಣವನ್ನು ಪಡೆಯಬೇಕಾಯಿತು. ತಾನು ಅನುಭವಿಸಿದ್ದ ಶಿಕ್ಷಣದ ನೀತಿಯಿಂದಾಗಿ ಮುಂದೆ ಶಿಕ್ಷಣದ ಬದಲಾವಣೆಯನ್ನು ಮಾಡಿದರು. ಓದುವಂತ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಮುದ್ರಿಸುವ ಕಾರ್ಯ ಕರ್ನಾಟಕದಲ್ಲಿ ನಡೆಯಿತು. ಅಂದು ಯಾವುದೇ ಶಿಕ್ಷಣವಿಲ್ಲದವರು ಮತ ಪ್ರಚಾರವನ್ನು ಮಾಡುವಂತಿರಲಿಲ್ಲ ಎನ್ನುವುದು ಈತನಿಗೆ ವಿಧಿಸಿದ್ದ ನಿಯಮಾನುಸಾರ ತಿಳಿಯಬಹುದು.

ಅವರಲ್ಲಿದ್ದ ಅಪಾರ ಅನುಭವದ ಫಲವಾಗಿ ಕರ್ನಾಟಕದ ವಿದ್ವತ್ತನ್ನು ತಿಳಿಯಲು ಅನುಕೂಲವಾಯಿತು. ಚಿಕ್ಕವಯಸ್ಸಿನಲ್ಲೇ ಸಾಕಷ್ಟು ಭಾಷಾ ಪರಿಣಿತನಾಗಿದ್ದರಿಂದ ಕಿಟೆಲ್ ಭಾಷಾ ಅನುವಾದದ ಅರ್ಥಗಳನ್ನು ತಿಳಿಯಲು ಸಾಧ್ಯವಾಯಿತು. ಅವರ ಯೋಜನೆಗಳು, ಯೋಚನೆಗಳು ಬದಲಾದವು ಕರ್ನಾಟಕದಲ್ಲಿ ಎಂದು ಹೇಳಬಹುದು. ಅವರ ಉದ್ದೇಶ ಮತ ಪ್ರಚಾರ ಮಾಡುವುದಾಗಿತ್ತು, ಅದರೆ ಕನ್ನಡ ಭಾಷೆಯ ಮಹಿಮೆಯೋ ಏನೋ ಅದರ ಸಾಹಿತ್ಯದ ತಿರುಳು ಕಿಟೆಲ್‌ರವರನ್ನು ಬಿಡದೆ ಬಿಗಿಯಾಗಿಹಿಡಿಯಿತು. ರೆ.ಫ.ಕಿಟೆಲ್ ಹಲವು ಸಹಾಯಕ ಹುದ್ದೆಗಳನ್ನು ಸ್ವೀಕರಿಸಿ ಭಾರತಕ್ಕೆ ಬಂದವರು ಮಂಗಳೂರಿನಲ್ಲಿ ಬಂದು ನೆಲೆಸಿದ್ದರು.

ಕ್ರಿ.ಶ.1853ರಲ್ಲಿ ಕರ್ನಾಟಕಕ್ಕೆ ಬಂದ ಇವರು ಸಭಾ ಸೇವೆಯ ಹುದ್ದೆಯವರಿಗೆ ಕನ್ನಡ ಕಡ್ಡಾಯವಾದ್ದರಿಂದ ಧಾರವಾಡದಲ್ಲಿ ಕನ್ನಡ ಭಾಷೆಯನ್ನು ಕಲಿತು, ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಇದು ಕನ್ನಡ ಸಂಶೋಧನೆಯ ಮೊದಲ ಹಾದಿ ಎಂದು ಗುರುತಿಸಬಹುದು. ಮಿಶನರಿ ಕೆಲಸ ಮಾಡಿಕೊಂಡು ಹಳ್ಳಿಗಳಲ್ಲಿ ಊರುಗಳಲ್ಲಿ ಓಡಾಡಿಕೊಂಡು ಬರುತ್ತಿದ್ದ ಕಿಟೆಲ್‌ರವರಿಗೆ ಮೊದಲು ಕಣ್ಣಿಗೆ ಬಿದ್ದದ್ದು ಹಸ್ತಪ್ರತಿಗಳು, ಆ ಹಸ್ತಪ್ರತಿಗಳನ್ನು ಸಂಗ್ರಹಿಸಿ ಹಳಗನ್ನಡ ಅಭ್ಯಾಸ ಮಾಡಿ ಓದಿದರು. ಕರ್ನಾಟಕದಲ್ಲಿ ಆ ಸಮಯದಲ್ಲಿ ಮಿಶನರಿ ಕೆಲಸ ಮಾಡುವವರು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕಾಗಿತ್ತು, ಯಾಕೆಂದರೆ ಇಲ್ಲಿನ ಜನರು ಪೂರ್ಣ ಪ್ರಮಾಣದಲ್ಲಿ ಕನ್ನಡ ಬಿಟ್ಟರೆ ಬೇರೆ ಯಾವ ಭಾಷೆಯು ಕಲಿತಿರಲಿಲ್ಲ. ಇವರು ಬಂದ ಉದ್ದೇಶ ಮತ ಪ್ರಚಾರವಾದ್ದರಿಂದ ಇಲ್ಲಿನ ಜನಕ್ಕೇ ಅದೇ ಭಾಷೆಯಲ್ಲಿ ಭೋಧನೆ ಮಾಡಬೇಕಾಯಿತು.

ಹಸ್ತಪ್ರತಿಗಳು ಸಿಕ್ಕ ನಂತರ ಸಾಹಿತ್ಯಾಭ್ಯಾಸ ಮಾಡಿದ ಅವರು ಅನೇಕ ಕಥೆ, ಕಾವ್ಯ, ಕೃತಿಗಳನ್ನು ಅಭ್ಯಾಸ ಮಾಡಿ, ಅವುಗಳನ್ನು ಓದುವ ಹವ್ಯಾಸ ಮಾಡಿಕೊಂಡರು, ನಂತರ ಓದುವ ಸಮಯದಲ್ಲಿ ಕೆಲವು ವಾಕ್ಯಗಳನ್ನು ಟಿಪ್ಪಣಿಗಳನ್ನು ಪಟ್ಟಿ ಮಾಡಿಕೊಂಡರು. ಕಾವ್ಯ ಕೃತಿಗಳಲ್ಲಿರುವ ರಸ, ಸೌಂದರ್ಯ, ಕಾವ್ಯಾಲಂಕಾರ, ವ್ಯಾಕರಣ ನಿಯಮಗಳನ್ನು ಬಲ್ಲವರಾಗಿದ್ದು ಕನ್ನಡ ಸಾಹಿತ್ಯವು ಕಿಟೆಲ್ ರವರ ಮನಸ್ಸನ್ನು ಎಲ್ಲಿಯೂ ಬಿಡದೇ ಸೆಳೆದವು. ಕಿಟೆಲ್‌ರವರಲ್ಲಿದ್ದ ಆಗಾಧವಾದ ಕನ್ನಡ ಭಾಷಾಸಕ್ತಿ ಸಂಶೋಧನ ಕ್ಷೇತ್ರಕ್ಕೆ ತೊಡಗುವಂತೆ ಮಾಡಿದವು.

"ಕಿಟೆಲ್‌ರು ವ್ಯಾಸಂಗದಲ್ಲಿ ಅಪಾರ ಅನುಭವ ಪಡೆದವರಾಗಿದ್ದರು, ಅದರ ಫಲವಾಗಿ ಅರಳಿದ 24 ಸಂಶೋಧನ ಲೇಖನಗಳು ಪಂಡಿತ ಪತ್ರಿಕೆಗಳಾದ, ಇಂಡಿಯನ್ ಆಂಟಿಕ್ವರಿ ಹಾಗೂ ಇವ್ಯಾಂಜಲಿಕಲ್ ರಿವ್ಯುನಲ್ಲಿ ಪ್ರಕಟಗೊಂಡಿವೆ"25 ಅನೇಕ ಹಸ್ತಪ್ರತಿಗಳ ಸಂಗ್ರಹ ಮಾಡಿದ್ದು ಅವುಗಳಿಂದ ಸಂಶೋಧನೆ ನಡೆಸಿ ಭಾಷೆಯ ಮಾತುಗಾರಿಕೆಗೆ ಅನುಗುಣವಾಗಿ ಪದರಚನೆ ಮಾಡಿ ಅರ್ಥವನ್ನು ತಿಳಿಸುವುದರ ಮೂಲಕ ಕೃತಿಯನ್ನು ರಚನೆ ಮಾಡಿದರು. ಅವರು ಅನೇಕ ಕೃತಿಗಳನ್ನು ರಚನೆ ಮಾಡಿದ್ದು ಕನ್ನಡ ಕೃತಿಯ ಅಭ್ಯಾಸದ ಪ್ರಭಾವದಿಂದ ಅವರ ಮೊದಲ ಕೃತಿಯನ್ನು ತನ್ನ ಮತ ಪ್ರಚಾರದ ಅನುಕೂಲತೆಗಾಗಿ ಕ್ರೈಸ್ತ ಧರ್ಮದ ಗ್ರಂಥಗಳನ್ನು ಕನ್ನಡ ಪದ್ಯಗಳನ್ನು ಸೇರಿಸಿ ಮತ ಪ್ರಚಾರ ಪುಸ್ತಕ ತಯಾರಿಸಿದರು.

'ಕಥಾಮಾಲೆ' ಎಂಬ ಮೊದಲ ಗ್ರಂಥದಲ್ಲಿ ಕಿಟೆಲ್‌ರವರು ಕ್ರಿಸ್ತನ ಜೀವನ ಚಿತ್ರಣವು ಇರುವ ಈ ಹಾಡುಗಳು 1862ರಲ್ಲಿ ರಚಿತವಾದ ಗ್ರಂಥಗಳಾಗಿವೆ. ಕಿಟೆಲ್‌ರವರು ತನ್ನ ಧರ್ಮಕ್ಕೆ ಯಾವುದೇ ಉಳಿವಿನ ಪ್ರಯತ್ನ ಮಾಡಿದರು, ಅದು ಕನ್ನಡ ಭಾಷೆಯಿಂದಲೇ ಎಂದು ಹೇಳಬಹುದಾಗಿದೆ. ಕನ್ನಡ ಸಂಶೋಧನೆಯಲ್ಲಿ ತೊಡಗಿದ ಕಿಟೆಲ್ ಮೊದಲು ಕೈಗೆತ್ತಿಕೊಂಡಿದ್ದು ಸಾಹಿತ್ಯದ ಪ್ರಬಂಧವನ್ನು 'ಆನ್ ಯಸ್ಸೇ ಅನ್ ಕ್ಯಾನರ್ಸ್ ಲಿಟ್ರೇಚರ್' ಎಂಬ 55 ಪುಟಗಳ ಕನ್ನಡ ಸಾಹಿತ್ಯ ಚರಿತ್ರೆ ಪುಸ್ತಕ ರಚಿಸಿದ್ದು.

---

25. ಡಾ. ಗೀತಾಎಸ್,ನಂದಿಹಾಳ – ಕನ್ನಡಕ್ಕೆ ಬಾಸೆಲ್ ಮಿಸನರಿಗಳ ಕೊಡುಗೆ – ಪುಟ.35

ಸಂಶೋಧನೆಗೆ ಅವಕಾಶ ಸಿಕ್ಕಿದ್ದು ಮತ್ತು ಲೇಖನಗಳ ಪ್ರಕಟ ಕಾರ್ಯ ನಡೆದಿದ್ದು ಇಂಡಿಯನ್ ಆಂಟಿಕ್ವರಿ ಮೂಲಕ. ಇದರಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಕೃತಿಗಳ ಮುದ್ರಣ ನಡೆಯಿತು. ಕಿಟೆಲ್‌ರವರಲ್ಲಿ ಬಲಿತ ಭಾಷೆಯಾಗುವ ಹೊತ್ತಿಗೆ ಅನೇಕ ಗ್ರಂಥಗಳು ರಚನೆಯಾಗಿದ್ದವು. ಕ್ರಿ.ಶ. 1863ರಲ್ಲಿ ಪರಮಾತ್ಮನಜ್ಞಾನ, ಕ್ರಿ.ಶ.1865ರಲ್ಲಿ ಯೇಸುಕ್ರಿಸ್ತನ ಶ್ರಮಚರಿತ್ರೆ. ಕ್ರಿ.ಶ. 1870ರಲ್ಲಿ ಕ್ರೈಸ್ತಸಭಾಚರಿತ್ರೆ, ಕ್ರಿ.ಶ.1865ರಲ್ಲಿ ಸಣ್ಣ 'ಕರ್ನಾಟಕ ಕಾವ್ಯಮಾಲೆ' ಎಂಬ ಪಠ್ಯಪುಸ್ತಕ, ಕ್ರಿ.ಶ. 1874ರಲ್ಲಿ ಕರ್ನಾಟಕಕಾವ್ಯಮಾಲೆ, ಕ್ರಿ.ಶ. 1866ರಲ್ಲಿ ಇಂಗ್ಲೇಂಡ್ ದೇಶದಚರಿತ್ರೆ, ಕ್ರಿ.ಶ. 1876ರಲ್ಲಿ ಕನ್ನಡ 'ಪಂಚತಂತ್ರ' ಸಂಪಾದನೆ ಮತ್ತು ಮುದ್ರಣ, ಕ್ರಿ.ಶ.1877ರಲ್ಲಿ ಕಾವ್ಯಮಂಜರಿ, ಕ್ರಿ.ಶ. 1875ರಲ್ಲಿ ನಾಗವರ್ಮನ ಛಂದೋಂಬುದಿಯನ್ನು ಕನ್ನಡ ಛಂದಸ್ಸು ಎಂದು ಸಂಗ್ರಹಿಸಿದರು, ಕ್ರಿ.ಶ.1903ರಲ್ಲಿ "ಎ ಗ್ರಾಮರ್ ಆಫ್ ದ ಕನ್ನಡ ಲಾಂಗ್ವೇಜ್" ಕ್ರಿ.ಶ.1894ರಲ್ಲಿ ಕನ್ನಡ ಇಂಗ್ಲೀಷ್‌ಡಿಕ್ಷನರಿ, ಕಿಟೆಲ್‌ಕೋಶ, ಎಂದು ಪ್ರಕಟವಾಯಿತು"26 ಎಲ್ಲಾ ಕೃತಿಗಳು ಕನ್ನಡಕ್ಕಾಗಿಯೇ ಪ್ರಕಟವಾಯಿತು.

ಅದರಲ್ಲೂ ಕನ್ನಡ ಇಂಗ್ಲೀಷ್ ಡಿಕ್ಷನರಿ ಕನ್ನಡದಲ್ಲಿ ಮರೆಯಲಾಗದ ಗ್ರಂಥಕೋಶವಾಗಿ ನಿಂತಿದೆ. ಈ ಗ್ರಂಥಗಳಲ್ಲಿ ಕೆಲವು ಕಿಟೆಲ್‌ರವರೆ ಬರೆದವುಗಳಾಗಿವೆ. ಇನ್ನು ಕೆಲವು ಹಸ್ತಪ್ರತಿಗಳಿಂದ ಬರೆದವುಗಳಾಗಿವೆ. ಹಸ್ತಪ್ರತಿಯ ಸಂಶೋಧನೆಯಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗದ ಕೆಲವು ಶಬ್ದಗಳನ್ನು ಸರಳ ಅರ್ಥ ನೀಡುತ್ತಾ ರಚಿಸಿದ್ದಾರೆ. ಕೆಲವು ಗ್ರಂಥಗಳ ಸಂಪಾದಿತವು, ಮುದ್ರಿತವು ಆದ ಕೆಲಸ ಇವರದ್ದಾಗಿದೆ. ಈ ಮಿಶನರಿಗಳ ಮೂಲಕ ಕನ್ನಡ ಗ್ರಂಥಗಳನ್ನು ಮುದ್ರಿಸಿದ ಕೀರ್ತಿಯು ಅವರಿಗೆ ಸಲ್ಲುತ್ತದೆ.

"ಕನ್ನಡ ಭಾಷೆಯ ಇತಿಹಾಸದಲ್ಲಿ ಕಿಟೆಲ್ ಅವರ ಹೆಸರನ್ನು ಚಿರಂತನಗೊಳಿಸಿರುವ ಕೃತಿಯೆಂದರೆ ಶಬ್ದಕೋಶ. ಈ ಕೋಶ ರಚನೆ ಅವರಿಗೆ ವಿಶ್ವವಿಖ್ಯಾತಿಯನ್ನು ತಂದು ಕೊಟ್ಟಿದೆ ಇದು ಕನ್ನಡ ಇಂಗ್ಲೀಷ್ ಡಿಕ್ಷನರಿ ಕಿಟೆಲ್‌ಕೋಶ ಎಂದು ಕರೆಯಲ್ಪಟ್ಟಿದೆ".27 ಆಧುನಿಕ ಸಂದರ್ಭದಲ್ಲಿ ಈ ಕೋಶವು ಬಹು ಮುಖ್ಯ ಪಾತ್ರ ಸಂಶೋಧನ ಗ್ರಂಥಗಳಲ್ಲಿ ವಹಿಸುತ್ತಿದು ಪ್ರತಿಯೊಬ್ಬನಿಗೂ ಬೇಕಾದ ಕೋಶವಾಗಿದೆ. ಸಂಶೋಧಕನಿಗೆ, ವಿದ್ಯಾರ್ಥಿಗಳಿಗೆ, ಭಾಷೆಯನ್ನು ಕಲಿಯುವವರಿಗೆ, ಪದಗಳ ಅರ್ಥಕ್ಕೆ ಎಲ್ಲರು
ನೋಡಬೇಕಾದ ಕೈಗನ್ನಡಿಯಂತಿದೆ.

ಕಿಟೆಲ್ ಹೆಚ್ಚಾಗಿ ಭಾಷೆಯ ಮೇಲೆ ಮಾಡಿದ ಪ್ರಯೋಗವೇ ಜಾಸ್ತಿ ಎಂದು ಹೇಳಬಹುದು ಹಸ್ತಪ್ರತಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಪದಗಳನ್ನು ಅರ್ಥೈಸುವ ರೀತಿಯನ್ನು ಹೇಳಿಕೊಟ್ಟವರು, ಕ್ರೈಸ್ತಮಿಸನರಿಗಳ ಸ್ಥಾಪಕರು ಇವರಾಗಿದ್ದರು.

---

26. ಪ್ರೊ.ಜಿ.ವೆಂಕಟಸುಬ್ಬಯ್ಯ-ಕನ್ನಡನಿಘಂಟು ಪರಿಹಾರ ಪುಟ.67

27.ಡಾ.ಗೀತಾಎಸ್.ನಂದಿಹಾಳ-ಕನ್ನಡ ಬಾಸೆಲ್ ಮಿಶನರಿಗಳ ಕೊಡುಗೆ. ಪುಟ.33.34,35

ಅ) ನಿಘಂಟು ರಚನೆ

ಭಾರತ ನೂರಾರು ಭಾಷೆಗಳ ತವರೂರು, ಅಂತಹ ಭಾಷೆಗಳ ಮೇರೆಗೆ ನಮ್ಮ ರಾಜ್ಯಗಳು ವಿಂಗಡಣೆ ಗೊಂಡಿರುವಂತಹದ್ದನ್ನು ನಾವು ನೋಡಬಹುದು. ಈ ವಿಷಯದಲ್ಲಿ ಕನ್ನಡದ್ದೇ ಆದ ಕರ್ನಾಟಕಕ್ಕೆ ಒಂದು ಮಹತ್ವವಿದೆ, ಆದರೂ ಗಡಿಪ್ರದೇಶದ ರಾಜ್ಯಗಳ ಭಾಷೆಯ ಪ್ರಭಾವ ಮತ್ತು ಹೊರದೇಶ ಭಾಷೆಗಳ ಪ್ರಭಾವದಿಂದ ಕೆಲವು ಪದಗಳ ಅರ್ಥ ಸಂಕೀರ್ಣವಾದ ಅರ್ಥಗಳು ಇಲ್ಲದೆ ಇದ್ದಾಗ ಮನುಷ್ಯ ಗೊಂದಲಕ್ಕೀಡಾಗುತ್ತಾನೆ. ಅಂತಹ ಗೊಂದಲಗಳನ್ನು ಬಗೆಹರಿಸಿಕೊಳ್ಳುವ ಅನೇಕ ಕೋಶ, ನಿಘಂಟುರಚನೆಗಳು ಕನ್ನಡದಲ್ಲಿ ರಚನೆಯಾಗಿವೆ. ಕಿಟೆಲ್‌ರವರು ನಿಘಂಟು ರಚನೆಯ ಮೊದಲಿಗರು ಮತ್ತು ಪ್ರಾವೀಣ್ಯರು ಆಗಿದ್ದರು. ಅವರ ಸಂಶೋಧನ ಅವಧಿಯಲ್ಲಿ ಕಾವ್ಯಗಳ ಕೃತಿಗಳ ಅಧ್ಯಯನದಲ್ಲಿ ಟಿಪ್ಪಣಿಗಳ ರೂಪದಲ್ಲಿ ತಯಾರಿಸಿದ ಪದಗಳಿಗೆ ಅರ್ಥಗಳನ್ನು ಕಲ್ಪಿಸಿ ಸಾಮಾನ್ಯ ಜನರಿಗೂ ಅರ್ಥವಾಗುವ ಸರಳ ಭಾಷೆಯನ್ನು ತಯಾರಿಸಿ ಕನ್ನಡಕ್ಕೆ ಬಿಟ್ಟು ಹೋದ ಒಬ್ಬ ಸಂಶೋಧಕರೆಂದು ಕರೆಯಬಹುದು.

"ಕಿಟೆಲ್ ಕೋಶದ ಕೆಲವು ವೈಶಿಷ್ಟ್ಯಗಳನ್ನು ನೋಡುವುದಾದರೆ ಅಂದು ಭಾರತದಲ್ಲಿಯೇ ಅತ್ಯುತ್ತಮ ಮುದ್ರಣ ಶಾಖೆ ಎಂಬ ಪ್ರಶಂಸೆಗೆ ಪಾತ್ರವಾದ ಮಂಗಳೂರಿನ ಬಾಸೆಲ್‌ಮಿಶನ್ ಮುದ್ರಣ ಶಾಖೆಯಲ್ಲಿ ಕಿಟೆಲ್ ನಿಘಂಟು ಮುದ್ರಿತವಾಯಿತು. ಇಲ್ಲಿ ಅಕಾರಾದಿಯಾಗಿ ಶಬ್ದಗಳನ್ನು ಕೊಡಲಾಗಿದೆ"28 ನಿಘಂಟು ಎನ್ನುವ ಪದಕ್ಕೆ ಅನೇಕ ವಿದ್ವಾಂಸರು ವ್ಯಾಖ್ಯಾನಿಸಿದ್ದಾರೆ ಅವುಗಳೆಂದರೆ.

ಪ್ರೊ.ಎಸ್.ಎಂ.ಕತ್ರೆಯವರು ಹೇಳಿರುವಂತೆ "ಒಂದು ಭಾಷಾ ಸಮುದಾಯದಲ್ಲಿನ ಸ್ವತಂತ್ರ ಭಾಷಾ ರೂಪಗಳನ್ನು ಆರಿಸಿಕೊಂಡು ಪ್ರತಿಯೊಂದು ಪದದ ಉಚ್ಚಾರ ವ್ಯಾಕರಣಾಂಶ ನಿಷ್ಪತ್ತಿ ಇತ್ಯಾದಿ ಅಂಶಗಳನ್ನು ಅನುಸರಿಸಿ ಮೂಲರೂಪ ಮತ್ತು ಸಮಸ್ತ ರೂಪಗಳನ್ನು ವ್ಯವಸ್ಥಿತವಾಗಿ ಸಂಯೋಜಿಸಿ ಕೊಳ್ಳುವುದೇ ನಿಘಂಟು".

ಡಾ.ಎಸ್.ಎಸ್.ಅಂಗಡಿ– ಎಲ್ಲಾ ಶಬ್ದಗಳನ್ನು ವ್ಯವಸ್ಥಿತವಾಗಿ ಪಟ್ಟಿಮಾಡಿ ಆ ಶಬ್ದಗಳ ಅರ್ಥವನ್ನು ಒಂದು ಕ್ರಮದಲ್ಲಿ ಜೋಡಿಸಿ ಅವುಗಳಿಗೆ ಸರಿ ಹೊಂದುವ ಪ್ರಾಚೀನ ಹಾಗು ನವೀನ ಪ್ರಯೋಗಗಳನ್ನು ಉಲ್ಲೇಖಿಸಿ ಆ ಶಬ್ದದ ವ್ಯಾಕರಣ ವಿವರಗಳನ್ನು ಸೇರಿಸಿ ಪದಗಳನ್ನು ಅಕಾರಾದಿಯಾಗಿ ಜೋಡಿಸುವ ಪುಸ್ತಕ.

ಕೆ.ವಿ.ನಾರಾಯಣರವರು–'ಒಂದು ಭಾಷೆಯಲ್ಲಿನ ಎಲ್ಲ ಶಬ್ದಗಳ ಅರ್ಥ ಅವುಗಳ ವ್ಯಾಕರಣ ಅನುಶಾಸನಗಳ ಕಾರ್ಯ, ವ್ಯುತ್ಪತ್ತಿ, ವಾಕ್ಯ ರಚನೆಯ ಪ್ರಭೇದಗಳು ಉಚ್ಚಾರಣೆ, ಪ್ರಚಲಿತ ಹಾಗೂ ಸಂದರ್ಭೋಚಿತ ಅರ್ಥ, ಸಮಾನಾರ್ಥ, ವ್ಯತಿರಿಕ್ತಾರ್ಥ, ಪೂರ್ವಗ್ರಂಥಗಳಲ್ಲಿ ಉಪಯೋಗವಾಗಿರುವ ಅರ್ಥ ಚಿತ್ರಣ ಇವುಗಳನ್ನು ತಿಳಿಸುವ ಅಕಾರಾದಿ ಪದಗಳನ್ನೊಳಗೊಂಡ ಕೃತಿಗೆ ನಿಘಂಟು ಎಂದು ಹೆಸರು.

---

28. ಡಾ.ಗೀತಾಎಸ್,ನಂದಿಹಾಳ್–ಕನ್ನಡ ಬಾಸೆಲ್ ಮಿಶನರಿಗಳ ಕೊಡುಗೆ. ಪುಟ.193

ಒಂದು ಭಾಷೆಯ ಎಲ್ಲ ಶಬ್ದಗಳನ್ನು ಅಕಾರಾದಿಯಾಗಿ ಪಟ್ಟಿಮಾಡಿ ಆ ಶಬ್ದಗಳ ಅರ್ಥಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಅವುಗಳಿಗೆ ಸರಿಹೊಂದಿರುವ ಪ್ರಾಚೀನ, ನವೀನ ಪ್ರಯೋಗಗಳನ್ನು ಉಲ್ಲೇಖಿಸಿ ಆ ಶಬ್ದದ ವ್ಯಾಕರಣ ವಿವರಗಳನ್ನು ಸೇರಿಸಿ ರಚಿಸಿರುವ ಪುಸ್ತಕ.

ವಿದ್ವಾಂಸರು ಆಲೋಚಿಸಿರುವಂತೆ ನಿಘಂಟು ಎನ್ನುವುದು ಅಕಾರಾದಿಯಾಗಿ ವ್ಯಾಕರಣಬದ್ಧವಾಗಿ ಕೂಡಿ ರಚನೆಯದ್ದಾಗಿದೆ. ನಿಘಂಟು ಎಲ್ಲ ಕಾಲಕ್ಕೂ ಎಲ್ಲ ಸಂದರ್ಭಕ್ಕೂ ಅವಶ್ಯಕತೆ ಇದೆ ಆದರೂ ಆಧುನಿಕ ಯುಗಗಳಲ್ಲಿ ಬೆಳೆಯುತ್ತಿರುವ ಪ್ರಪಂಚದಲ್ಲಿ ಕೊಡುವ ಮತ್ತು ಕೊಳ್ಳುವ ವ್ಯವಹಾರಗಳು ನಡೆಯುವಂತಹ ಸಂದರ್ಭದಲ್ಲಿ ಪದ ಪದಗಳನ್ನು ಬಿಡಿಸಿ ಮಾತನಾಡುವಂತಹ ಕಾಲದಲ್ಲಿ ನಿಘಂಟಿನ ಅನಿವಾರ್ಯತೆ ಬೇಕಾಗಿದೆ.

ನಿಘಂಟು ಎನ್ನುವುದು ಕಾಲವನ್ನು ನುಂಗದೆ ಕ್ರಮಬದ್ಧವಾಗಿ ಪದಗಳ ವ್ಯಾಕರಣ ನಿಯಮಕ್ಕೆ ಅನುಗುಣವಾಗಿ ಸರಳ ಮತ್ತು ಸಂಕ್ಷಿಪ್ತ ಅರ್ಥವನ್ನು ಭಾಷಾತ್ಮಕವಾಗಿ ತಿಳಿಸುವುದೇ ನಿಘಂಟು ಎಂದು ನನ್ನ ಭಾವನೆಯಾಗಿದೆ. ಇಂತಹ ಅತಿ ಅವಶ್ಯಕವಾದ ನಿಘಂಟಿನ ರಚನೆಯನ್ನು ರಚಿಸಿ ಕೊಟ್ಟ ಕಾರ್ಯ ಕಿಟೆಲ್‌ರವರಿಗೆ ಸಲ್ಲುತ್ತದೆ. ಇಂದಿಗೂ ಸಹ ಪ್ರಮುಖವಾಗಿ ಬಳಕೆಯಲ್ಲಿರುವ ನಿಘಂಟು ಇದಾಗಿದೆ. ರಚನೆಯಾಗಿ ಬಂದ ನಂತರ ಅನೇಕ ಕೋಶಗಳು ಹುಟ್ಟಿಕೊಂಡವು. ಯಾವುದೇ ಅರ್ಥಕೋಶಗಳು ರಚನೆಯಾಗಿದ್ದರೂ, ಇವತ್ತಿನ ಸಂದರ್ಭದಲ್ಲಿ ನಿಘಂಟಿನ ಅವಶ್ಯಕತೆ ಬಹಳಷ್ಟು ಇರುವುದರಿಂದ ವಿವಿಧ ವಿದ್ವಾಂಸರು ವಿವಿಧ ರೀತಿಯಲ್ಲಿ ಕೋಶಗಳನ್ನು ರಚಿಸಿದ್ದಾರೆ. ಕಿಟೆಲ್‌ರವರು ಶಾಸನಗಳಲ್ಲಿರುವ ಪದಗಳನ್ನು, ಹಸ್ತಪ್ರತಿಯಲ್ಲಿರುವ ಪದಗಳನ್ನು ಒಂದು ಕಡೆ ಪಟ್ಟಿ ಮಾಡಿಕೊಂಡು ಈ ನಿಘಂಟನ್ನು ರಚನೆ ಮಾಡಿದ್ದಾರೆ. ಗ್ರಂಥಗಳನ್ನು ಓದುವ ಸಂದರ್ಭದಲ್ಲಿ ಸಂಶೋಧನೆ ಮಾಡುವ ಸಂದರ್ಭದಲ್ಲಿ ಈ ನಿಘಂಟಿನ ಪದಗಳನ್ನು ನೋಡದೆ ಇರಲಾರರು.

ನಿಘಂಟಿನ ರಚನೆಯನ್ನು ಅನೇಕ ವಿದ್ವಾಂಸರು ನಾನಾ ರೀತಿಗಳಲ್ಲಿ ವರ್ಗೀಕರಿಸಿದ್ದಾರೆ. ಆದರೆ ಆಧುನಿಕ ಸಂದರ್ಭದಲ್ಲಿ ನಮಗೆ ಅವಶ್ಯಕತೆಗೆ ಅನುಗುಣವಾಗಿ ಬಹಳಷ್ಟು ಬೇಡಿಕೆ ಮತ್ತು ಚಾಲ್ತಿಯಲ್ಲಿರುವ ವಿಷಯಗಳ ಭಾಷೆಯ ಪದಗಳನ್ನು ನಾವು ಬೆಳಕಿಗೆ ತರಬೇಕಾಗಿದೆ, ನಿಘಂಟಿನ ವಿಧಗಳನ್ನು ಈ ರೀತಿಯಲ್ಲಿ ವಿಂಗಡಿಸ ಬಹುದು.

1) ಧಾರ್ಮಿಕ ನಿಘಂಟು ರಚನೆ
2) ಸಾಮಾಜಿಕ ನಿಘಂಟು ರಚನೆ
3) ರಾಜಕೀಯ ನಿಘಂಟು ರಚನೆ
4) ಆರ್ಥಿಕ ನಿಘಂಟು ರಚನೆ
5) ಸಾಹಿತ್ಯ ಪದಗಳ ನಿಘಂಟು ರಚನೆ
6) ವೈಜ್ಞಾನಿಕ ಪದ ನಿಘಂಟು ರಚನೆ

1) ಧಾರ್ಮಿಕ ನಿಘಂಟು ರಚನೆ :- ಈ ನಿಘಂಟಿನಲ್ಲಿ ಸಾಮಾನ್ಯವಾಗಿ ವರ್ಗ,ವರ್ಣ, ಮತ್ತು ಮೇಲ್ವರ್ಗದ ಭಾಷೆ ಕೆಳವರ್ಗದ ಭಾಷೆಗಳೆಂದು ವರ್ಗಿಕರಿಸಬಹುದು ಇಲ್ಲಿ ಭಾಷೆಯನ್ನು ಕಲಿಸುವ ಪ್ರಯತ್ನಗಳು ಕಮ್ಮಿ ಸಾಮಾನ್ಯರಲ್ಲಿ ಹೊಂದಾಣಿಕೆ ಇರುವುದಿಲ್ಲ. ಉನ್ನತ ಭಾಷೆಯಲ್ಲಿ ಉಚ್ಚರಿಸುವಂಥ ಪದಗಳು.

ಉದಾಹರಣೆಗೆ:- ಸಾಹುಕಾರ, ಶ್ರೀಮಂತ, ಗೌಡರು, ಬುದ್ದಿಯವರು, ಪುರೋಹಿತ, ಸ್ವಾಮಿ.

2) ಸಾಮಾಜಿಕ ನಿಘಂಟು: ಇಲ್ಲಿ ಪದಗಳನ್ನು ಸಾಮಾಜಕ್ಕೆ ತಕ್ಕಂತೆ ಜಾತಿ, ಪಂಗಡ, ಗುಂಪು, ಊರು. ಹಳ್ಳಿ, ನಗರಗಳ ಭಾಷೆಯಾಗಿದೆ. ಹೆಚ್ಚಾಗಿ ಮಿಶ್ರಭಾಷೆಯಾಗಿರುತ್ತದೆ. ಕಲಿಯುವಂತಹ ಪ್ರಯತ್ನಗಳು ಹೆಚ್ಚಾಗಿರುತ್ತವೆ. ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಪದಗಳನ್ನು ಬಳಸುತ್ತಾರೆ.

ಉದಾಹರಣೆಗೆ:- ಹುಯ್ಯಿಲಿಡುವುದು, ಕೂಗು, ಕರೆ,
ಸಣ್ಣಪ್ಪಯ್ಯ- ಚಿಕ್ಕಪ್ಪಯ್ಯ, ಅಪ್ಪನ ತಮ್ಮ. ಕಾಕ-ಚಿಕ್ಕಪ್ಪ.
ಮಂಕ್ರಿ - ತಟ್ಟಿ, ಕಸ ತುಂಬುವ ವಸ್ತು.
ಮಡಿಕೆ - ನೇಗಿಲು, ಬೇಸಾಯದ ಸಾಧನ.
ಮಡಚುವುದು

4) ರಾಜಕೀಯ ಪದ ನಿಘಂಟು : ವಿಶೇಷವಾಗಿ ಪತ್ರಿಕೆಗಳಲ್ಲಿ ಭಾಷಣಗಳಲ್ಲಿ ಬಳಸುವಂತಹ ಭೂತ, ಭವಿಷ್ಯತ್ ಕಾಲಗಳನ್ನು ತಿಳಿಸುವ ಪದಗಳನ್ನು ಬಳಸಿ ಆಕರ್ಷಣೀಯವಾಗಿ ಮಾತಾನಾಡುವುದು.

ಉದಾಹರಣೆ : ಕಡಕಂಡಿತ, ಸತ್ಯವಾಗಿಯು, ಸರ್ಕಾರದಕಾನೂನು ಪದಗಳು, ಜಾರಿಗೆತರುವ,
ಆಜ್ಞೆ,
ಇತ್ಯಾದಿ.

5) ಆರ್ಥಿಕ ಪದಗಳ ನಿಘಂಟು: ವ್ಯವಹಾರಿಕ ಕೊಳ್ಳುವ, ಕೊಡುವ ಪದಗಳನ್ನು ಬಳಸುವುದು ಮತ್ತು ವ್ಯಾಪಾರ, ಹಣಕಾಸು, ವಿವಿಧ ವಸ್ತುಗಳ ಭಾಷೆಯನ್ನು ತಿಳಿಸುವುದು.

ಉದಾಹರಣೆಗೆ : ಪಗಾರ - ಸಂಬಳ
ಆಣಿ - ನಾಲ್ಕಾಣಿ, ಏಂಟಾಣಿ, ಎರಡಾಣಿ
(ಹಣಕಾಸಿಗೆ ಸಂಬಂಧಿಸಿದ್ದು)
ತೂಕ - ಒಂದು ತೂಕ, ಎರಡು ತೂಕ, (ವ್ಯಾಪಾರಕ್ಕೆ
ಸಂಬಂಧಿಸಿದ್ದು, ಒಂದು ತೂಕಕ್ಕೆ ಎರಡೂವರೆ ಕೆ. ಜಿ.)
ವ್ಯವಹಾರಕ್ಕೆ ಸಂಬಂಧಿಸಿದ ಇತರ ಪದಗಳು.

6)ಸಾಹಿತ್ಯ ಪದಗಳ ನಿಘಂಟು : ವ್ಯಾಕರಣ, ಛಂದಸ್ಸು, ಅಲಂಕಾರ, ಮತ್ತು ಪ್ರಾದೇಶಿಕ ಭಾಷಾ ವರ್ಗೀಕರಣದೊಂದಿಗೆ ಮಿಶ್ರಣ ಭಾಷೆಯೊಂದಿಗೆ ರಚನೆಯಾಗುವ ಪದಗಳು.

ಉದಾಹರಣೆಗೆ : ಹಳಗನ್ನಡ, ನಡುಗನ್ನಡ, ಹೊಸಗನ್ನಡಭಾಷೆ. ನಾಟಕ, ಗದ್ಯ, ಪದ್ಯ, ಕಾವ್ಯಭಾಷೆ.

7) ವೈಜ್ಞಾನಿಕ ಪದಗಳ ನಿಘಂಟು : ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಾತನಾಡುವ ಭಾಷೆಗಳು.
ಉದಾಹರಣೆಗೆ : ವೈದ್ಯಕೀಯ, ಶೈಕ್ಷಣಿಕ, ಯಂತ್ರೋಪಕರಣ ಮುಂತಾದವುಗಳು.

ಈ ರೀತಿಯಲ್ಲಿ ನಿಘಂಟು ಪದಗಳನ್ನು ಅವುಗಳ ಅರ್ಥಗಳನ್ನು ರಚಿಸಿ ಅಧುನಿಕ ಯುಗದಲ್ಲಿ ಅವಶ್ಯಕವಾಗಿ ಮಾತನಾಡುವಂತಹ ಸಂದರ್ಭದಲ್ಲಿ ಶಿಕ್ಷಣ ಗೊತ್ತಿಲ್ಲದೇ ಇರುವವರು ಸಹ ಭಾಷೆಯೊಂದಿಗೆ ಕೆಲವು ಮಿಶ್ರ ಪದಗಳನ್ನು ಬಳಸಿ ಆಡುವಂತಹ ಭಾಷೆಗೆ ಅನುಕೂಲಗಳನ್ನು ಒದಗಿಸುವಂತಹದ್ದು ನಿಘಂಟು. ಆಧುನಿಕ ಯುಗದಲ್ಲಿ ನಿಘಂಟಿನ ಅವಶ್ಯಕತೆ ಬಹಳಷ್ಟಿದೆ. ವಿದ್ಯಾರ್ಥಿ, ಶಿಕ್ಷಕ, ಸಂಶೋಧಕ, ಭಾಷೆಯನ್ನು ಕಲಿಯುವ ವ್ಯಕ್ತಿ, ತೆಗೆದು ನೋಡಲೇಬೇಕಾದ ಗ್ರಂಥ ನಿಘಂಟು. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಒಂದೂರಿನಿಂದ ಮತ್ತೊಂದೂರಿಗೆ ಹೋದಾಗ ಈ ನಿಘಂಟಿನ ಅವಶ್ಯಕತೆ ಇದೆ. ಬೆಳೆಯುತ್ತಿರುವ ಸಮಾಜದಲ್ಲಿ ಅನೇಕ ಭಾಷೆಗಳು ಸೃಷ್ಟಿಯಾಗುತ್ತಿದ್ದು ಅದಕ್ಕೆ ತಕ್ಕಂತೆ ನಿಘಂಟಿನ ರಚನೆ ಬೇಕಾಗಿರುವ ಅವಶ್ಯಕತೆ ಇದೆ. ಇಂತಹ ಕೋಶವನ್ನು ಕಿಟೆಲ್ ಕನ್ನಡಕ್ಕೆ ಕೊಡುಗೆಯಾಗಿ ನೀಡಿದ್ದು ಸಂಶೋಧನೆಯ ಮುಖ್ಯ ಅಂಶವೆಂದು ತಿಳಿಯಬಹುದು.

ನಿಘಂಟಿನ ಪದಗಳ ಅರ್ಥಗಳನ್ನು ಗ್ರಂಥದ ಪಟ್ಟಿಯ ಸಮೇತ ಕಂಪ್ಯೂಟರ್‌ಗೆ ಅಳವಡಿಸಿ ಅದರ ಮೂಲಕ ಪದಗಳ ಅರ್ಥಗಳನ್ನು ತಿಳಿಯುವ ಯತ್ನ ನಡೆಯುತ್ತಿದ್ದು ಆಧುನಿಕ ಯುಗದಲ್ಲಿ ಕಂಪ್ಯೂಟರ್ ಎಷ್ಟು ಅವಶ್ಯಕತೆಯಿದೆಯೆಂದರೆ "ಕನ್ನಡ ನಿಘಂಟುವಿನಲ್ಲಿ ಸೇರ್ಪಡೆಯಾದ ನಾಮಪದ, ಕ್ರಿಯಾಪದ, ಸರ್ವನಾಮ, ವಿಶೇಷಣ, ಸಂಖ್ಯಾವಾಚಕ, ಮುಂತಾದ ವ್ಯಾಕರಣ ವರ್ಗಗಳನ್ನು ಪ್ರತ್ಯೇಕವಾಗಿ ಹೊರತೆಗೆದು ಅವುಗಳ ಸ್ವರೂಪವನ್ನು ವಿಶ್ಲೇಷಿಸಬಹುದು. ಅದರಂತೆ ಪದರೂಪಗಳ ಸಹ ಸಂಬಂಧವನ್ನು ಗುರುತಿಸಲು ಹಾಗೂ ಆಯಾ ಕೋಶಗಳ ಸ್ವರೂಪಕ್ಕೆ ತಕ್ಕಂತೆ ಅಕಾರಾದಿ ಕ್ರಮದಲ್ಲಿ ನಮೂದುಗಳನ್ನು ಸಂಯೋಜಿಸಲು ಕಂಪ್ಯೂಟರ್ ತುಂಬ ನೆರವಾಗುತ್ತದೆ."29

ನಿಘಂಟುವನ್ನು ರಚಿಸುವ ಉದ್ದೇಶ ಕೆಲವು ಭಾಷೆಗಳ ಪದಗಳ ಅರ್ಥವಾಗದೇ ಇರುವುದು ಮತ್ತು ಅನ್ಯ ದೇಶ ಪದ, ಪ್ರಾದೇಶಿಕ ಭಾಷೆ ಪದಗಳು ಸೇರಿ ರಚನೆಯಾದ ಸಾಹಿತ್ಯಕ ಪದಗಳನ್ನು ಸಂಶೋಧಿಸಿ ಅವುಗಳಿಗೆ ತತ್ಸಮ-ತದ್ಭವ ರೂಪಗಳನ್ನು ಹುಡುಕಿ ಅರ್ಥೈಸುವಂತೆ ಮಾಡುವುದು. ಕಠಿಣವಾಗುವ ಪದಗಳಿಗೆ ಸರಳವಾಗಿ ಉತ್ತರಗಳನ್ನು ದೊರಕಿಸಿಕೊಡುವಂತ ಕೆಲಸವನ್ನು ಮಾಡುವಂತಹವಾಗಿವೆ. ಒಂದೇ ಪದವನ್ನು ಅನೇಕ ಪ್ರದೇಶಗಳಲ್ಲಿ ವಿವಿಧ ರೀತಿಯಲ್ಲಿ ಅರ್ಥೈಸುವ ಪದಗಳನ್ನು ತಿಳಿಸುವಂತಹ ಕೆಲಸವನ್ನು ನಿಘಂಟು ಮಾಡುತ್ತದೆ.

ಉದಾಹರಣೆಗೆ : ಸ್ನೇಹಿತ- ಗೆಳೆಯ, ಜೊತೆಗಾರ, ಆತ್ಮೀಯ, ದೋಸ್ತು.

---

29. ಎಸ್. ಎಸ್, ಅಂಗಡಿ – ಕನ್ನಡ ನಿಘಂಟು ರಚನೆ – ಪುಟ. 87

ಸಂಜೆ– ಸಜ್ಜೆ, ಬೈಗಾನ, ಸಾಯಂಕಾಲ,
ವಾರಗಳು– ಬೇಸ್ತಾರ, ಆತ್ವಾರ,
ಕರುಬು– ಹೊಟ್ಟೆಕಿಚ್ಚು, ಹೊಟ್ಟೆ ಹುರಿ, ಅಸೂಯೆ
ಪೊಸ– ಹೊಸ,
ಮುದ್ದ– ಮುದ್ದೆ, ಹಿಟ್ಟು,

ಮುಂತಾದ ಉದಾಹರಣೆಯ ಪದಗಳೊಂದಿಗೆ ನೋಡಿದರೆ ನಿಘಂಟುವಿನ ಅವಶ್ಯಕತೆ ನಮಗೆ ತಿಳಿಯುತ್ತದೆ. ಇಂತಹ ಸಂಶೋಧನೆಯ ಕೆಲಸಕ್ಕೆ ಕೈಹಾಕುವವರು ಹಲವು ಭಾಷೆಯ ಅಧ್ಯಯನಗಳನ್ನು ಮೈಗೂಡಿಸಿಕೊಂಡಿರಬೇಕು. ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಅಭ್ಯಾಸ ಮಾಡಿರಬೇಕು. ಅಂತಹವರಿಗೆ ಮಾತ್ರ ನಿಘಂಟು ರಚನೆಯನ್ನು ಮಾಡಲು ಸಾಧ್ಯವಾಗುತ್ತದೆ. ಇಂತಹ ಕೆಲಸವನ್ನು ಅನ್ಯ ದೇಶದ ವಿದ್ವಾಂಸ ಕಿಟೆಲ್‌ರವರು ಕನ್ನಡದಲ್ಲಿ ಮಾಡಿರುವಂತಹದ್ದು ಒಂದು ದೊಡ್ಡ ಸಾಧನೆ, ಎಂದು ಹೇಳಬಹುದು. ಯಾವುದೇ ನಿಘಂಟಿನ ರಚನೆಯಾಗಿರಲಿ ಅದು ಆ ಭಾಷೆಗೆ ನೀಡಿರುವಂತಹ ಬಹುಮುಖ್ಯ, ಭಾಷಾ ಪರಿಣಿತಿಯ ಅಂಶವಾಗಿರುತ್ತದೆ. ಅಂತಹ ಸಂಶೋಧನೆಯಲ್ಲಿ ತೊಡಗುವಂತಹ ವಿದ್ವಾಂಸರು ಕಡಿಮೆ ಇದ್ದು ಇನ್ನೂ ಹೆಚ್ಚಿನದಾಗಿ ಭಾಷಾ ನಿಘಂಟುಗಳು ರಚನೆಯಾಗಬೇಕೆಂದು ಹೇಳುತ್ತೇನೆ.

ಕನ್ನಡ–ಇಂಗ್ಲೀಷ್ ನಿಘಂಟಿನ ರಚನೆಯಿಂದ ಭಾಷೆ ಕಲಿಯುವವರಿಗೆ, ಅನುವಾದಭಾಷಿಕರಿಗೆ, ಗ್ರಂಥಗಳ ಅರ್ಥತಿಳಿಯಲು ಹೆಚ್ಚು ಅವಶ್ಯಕವಾದ ಗ್ರಂಥವಾಗಿದೆ. ಇದರಲ್ಲಿ ಕೆಲವು ಸಂಸ್ಥಾನಗಳ ಹೆಸರನ್ನು ಹೇಳಲಾಗಿದೆ.

4.2.ಬಿ.ಎಲ್. ರೈಸ್

ಕರ್ನಾಟಕ ಶಾಸನ ಸಂಶೋಧಕರಲ್ಲಿ ಅಗ್ರಗಣ್ಯರಾದ ರೈಸ್‌ರವರು ವಿದೇಶಿಯವರಾದರೂ ಕನ್ನಡ ನಾಡಿನಲ್ಲಿಯೇ ಕ್ರಿ.ಶ. 17-07-1837ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಕನ್ನಡ ಪಾಂಡಿತ್ಯವನ್ನು ಕಲಿತು ಬಿ. ಎ. ಪದವಿ ಪಡೆಯಲು ಹ್ಯಾರೋ ಕಾಲೇಜಿಗೆ ಸೇರ್ಪಡೆ ಪಡೆದು ಕ್ರಿ.ಶ. 1860ರಲ್ಲಿ ಸೆಂಟ್ರಲ್ ಹೈಸ್ಕೂಲಿನ ಮುಖ್ಯ ಉಪಧ್ಯಾಯರಾಗಿ ಬೆಂಗಳೂರಿಗೆ ಬಂದರು. ಶಿಕ್ಷಕರ ಹುದ್ದೆಯನ್ನು ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮೈಸೂರು, ಕೊಡಗು ಸ್ಥಳಗಳಲ್ಲಿ ಶಾಲಾ ಇನ್ಸಪೆಕ್ಟರ್ ಆಗಿ ಸಂಚರಿಸುತ್ತಿದ್ದ ಸಂದರ್ಭದಲ್ಲಿ ಅವರ ಕಣ್ಣಿಗೆ ಸಿಕ್ಕಿದ್ದು ಶಾಸನಗಳು. ಎಲ್ಲೆಂದರಲ್ಲಿ ರಾರಾಜಿಸುತ್ತಿದ್ದ ಶಾಸನಗಳನ್ನು ಒಂದು ಕಡೆ ಸಂಗ್ರಹಿಸಿ ಮುದ್ರಿಸಿದ ಕೀರ್ತಿ ರೈಸ್‌ರವರಿಗೆ ಸಲ್ಲುತ್ತದೆ. ಕನ್ನಡ ನಾಡಿನ ನಿಕಟವಾದ ಸಂಬಂಧ, ಸಂಸ್ಕೃತಿಯನ್ನು ಅರಿತ ರೈಸ್ ಕರ್ನಾಟಕದಲ್ಲೆಡೆ ಸಂಚರಿಸುವುದರ ಮೂಲಕ ಶಾಸನಗಳನ್ನು ಓದುವ ಹವ್ಯಾಸ ಬೆಳಸಿಕೊಂಡರು.

"ಶಾಸನಗಳು ಬಹುಪಾಲು ಮೂರು ಅಥವಾ ನಾಲ್ಕು ಸಾಲಿನ ಬರಹಗಳಾಗಿದ್ದು ಎಲ್ಲಿ ಬೇಕೆಂದರಲ್ಲಿ ಅವುಗಳನ್ನು ಕೊರೆಯಲಾಗಿತ್ತು. ಅವುಗಳಲ್ಲಿ ಏನಿದೆಂಬುದನ್ನು ಹೇಳಲಾರರು ಅನೇಕ ಪ್ರಯತ್ನಗಳ ಬಳಿಕ ಅಕ್ಷರಗಳನ್ನು ಓದುವ ವಿಧಾನವೊಂದು ಹೊಳೆಯಿತು. ಕೆಲವು ಅಕ್ಷರಗಳು ಈಗಿನ ಕನ್ನಡ ಅಕ್ಷರಗಳನ್ನು ಹೋಲುತ್ತವೆ. ಹೀಗೆ ದೊರೆತ ತಂತ್ರವನ್ನು ಅನುಸರಿಸಿ ಓದಿದಾಗ ಶಾಸನಗಳು ಕನ್ನಡ ಭಾಷೆಯಲ್ಲಿ ರಚನೆಯಾಗಿರುವುದು ಕಂಡು ಬಂದಿತು." [30] ಎಂದು ರೈಸ್‌ರವರು ಶಾಸನವನ್ನು ಓದಿದ ಅನುಭವವನ್ನು ತಿಳಿಸಿಕೊಡುತ್ತಾ, ಹುದ್ದೆಯ ಜೊತೆಗೆ ಶಾಖೆಯ ಅಧಿಕಾರವನ್ನು ವಹಿಸಿಕೊಂಡು ಕಾರ್ಯದರ್ಶಿಯಾಗಿದ್ದಾಗಲೇ ಕೊಡಗಿನ ಶಾಸನಗಳನ್ನು ಸಂಗ್ರಹಿಸಿದ್ದರು.

ಪ್ರಾಚ್ಯವಸ್ತುವಿನ ಅಧಿಕಾರಿಯಾಗಿ ಮೈಸೂರಿನಲ್ಲಿ ಸಂಗ್ರಹಿಸುತ್ತಿದ್ದಾಗ ಅವರಿಗಾದ ಅನುಭವದಿಂದ ಎರಡನೇ ಗೆಜೆಟಿಯರ್‌ನ್ನು ಕ್ರಿ.ಶ. 1877-78ರಲ್ಲಿ ಪ್ರಕಟಿಸಿದರು. ಈ ಶಾಸನಗಳನ್ನು ಸಂಗ್ರಹಿಸಿ ಕ್ರಿ.ಶ. 1879ರಲ್ಲಿ ಮೈಸೂರು 'ಇನ್‌ಸ್ಕ್ರಿಪ್ಷನ್' ಪ್ರಕಟವಾಯಿತು. ನಂತರ **'ಎಫಿಗ್ರಾಫಿಯಾ ಕರ್ಣಾಟಿಕ'** ಎಂಬ ಹೆಸರಿನ ಅನೇಕ ಸಂಪುಟಗಳು ಶಾಸನ ವಿಷಯಗಳನ್ನು ಒಳಗೊಂಡಂತೆ ಪ್ರಕಟವಾದವು. ಈ ಸಂಪುಟಗಳು ಹೊರಬಂದ ನಂತರ ಆಗಿನ ಸರ್ಕಾರ ಇವರನ್ನು ಪುರಾತತ್ವ ಇಲಾಖೆಯ ಪೂರ್ಣಕಾಲದ ಅಧಿಕಾರಿಯನ್ನಾಗಿ ಕ್ರಿ.ಶ. 1890ರಲ್ಲಿ ನೇಮಿಸಿತು. ಈ ಅಧಿಕಾರದ ಫಲವಾಗಿ 16 ವರ್ಷಗಳ ಕಾಲ ಪ್ರತಿ ಜಿಲ್ಲೆಯ ಹಳ್ಳಿ ಹಳ್ಳಿಗಳನ್ನು ಸುತ್ತಿ ಶಾಸನಗಳನ್ನು ಸಂಗ್ರಹಿಸಿ 12 ಸಂಪುಟಗಳಲ್ಲಿ ಹೊರತಂದರು. "ಬೇರೆ ಯಾವ ಭಾರತೀಯ ಸಂಶೋಧಕನು ಇವರಷ್ಟು ಶಾಸನಗಳನ್ನು ಕಂಡು ಹಿಡಿದಿಲ್ಲ, ಜೊತೆಗೆ ಅವುಗಳ ಅನುವಾದ ಅವುಗಳಿಂದ ಹೊರಡುವ ರಾಜ ಮನೆತನಗಳ ಚರಿತ್ರೆ ಇತರ ಐತಿಹಾಸಿಕ ಘಟನೆಗಳು ಮತ್ತು ರಾಜ ಮನೆತನಗಳ ಚರಿತ್ರೆ ಸಾಂಸ್ಕೃತಿಕ ಅಂಶಗಳನ್ನು ರೈಸ್‌ರವರು ಪರಾಮರ್ಶಿಸಿದ್ದಾರೆ."[31]

---

30. ಡಾ.ಎಂ, ಚಿದಾನಂದಮೂರ್ತಿ–ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ– ಪುಟ.163

31. ಶ್ರೀನಿವಾಸ ಹಾವಾನೂರು – ಹೊಸಗನ್ನಡ ಅರುಣೋದಯ – ಪಟ. 163

ರೈಸ್‌ರವರು ಗುರುತಿಸುವ ಶಾಸನ ಸಂಶೋಧನೆಯಲ್ಲಿ ಪ್ರಮುಖವಾಗಿ ಶ್ರವಣಬೆಳಗೊಳ ಶಾಸನದ ಚಂದ್ರಗುಪ್ತ ಮತ್ತು ಭದ್ರಬಾಹು ಗುಹೆಗಳ ವಿವರಣೆ ಸಿಕ್ಕಿರುವುದರಿಂದ ಪ್ರಭಾಚಂದ್ರನ ಕಥೆಯಿರುವುದರಿಂದ ಇದನ್ನು ಬರೆಯಿಸಿದವರ ಉಲ್ಲೇಖದಲ್ಲಿ ಅನೇಕ ವಿರೋಧಗಳು ವ್ಯಕ್ತವಾಗಿ ರೈಸ್‌ರವರು ಚಂದ್ರಗುಪ್ತನ ಹೆಸರನ್ನು ಉಲ್ಲೇಖಿಸಿದ್ದಾರೆ. "ಮುಖ್ಯವಾಗಿ ಅಶೋಕನ ಕಿರಿ ಶಾಸನಗಳು ದೊರೆತು ಅವನ ಸಾಮ್ರಾಜ್ಯವೂ ದಕ್ಷಿಣದವರೆಗೂ ಹಬ್ಬಿತ್ತೆಂಬುದರ ಸ್ಪಷ್ಟ ಕಲ್ಪನೆ ಉಂಟಾಯಿತು."[32]

ರೋಮನ್ ನಾಣ್ಯಗಳನ್ನು ಬೆಳಕಿಗೆ ತಂದು ಕನ್ನಡ ಮತ್ತು ರೋಮನ್ ನಾಗರೀಕತೆಯ ಪ್ರಾಚೀನ ಒಡನಾಟಗಳ ಸಂಬಂಧ ಮತ್ತು ಕನ್ನಡದ ಕೆಲವು ರೋಮನ್ ಅಂಕಿಗಳನ್ನು ಗುರುತಿಸಿದ್ದು ರೈಸ್ ಸಂಶೋಧನೆಯ ಬಹುಮುಖ್ಯವಾದ ಕಾರ್ಯವಾಗಿದೆ. ರಾಮಾಯಣ ಪರಿಷ್ಕರಣ ಪ್ರತಿಯನ್ನು ಪಡೆದು ಕನ್ನಡ ಮತ್ತು ಇಂಗ್ಲಿಷ್ ಶಬ್ದಗಳಲ್ಲಿ ಅರ್ಥಗಳನ್ನು ಬರೆದು ಪ್ರಕಟಿಸಿದ್ದರು. ಈ ಎಲ್ಲಾ ಸಂಶೋಧನಾ ಲೇಖನಗಳನ್ನು 'ಇಂಡಿಯನ್ ಆಂಟಿಕ್ವರಿ ಜರ್ನಲ್ ಆಫ್ ರಾಯಲ್ ಏಷ್ಯಾಟಿಕ್ ಸೊಸೈಟಿ' ಮುಂತಾದ ಪತ್ರಿಕೆಗಳಲ್ಲಿ ಸಂಶೋಧನಾಲೇಖನಗಳನ್ನು ಪ್ರಕಟಿಸಿ ಜನರಿಗೆ ಆಶ್ಚರ್ಯ ಮೂಡಿಸಿದರು. ಶಿಕ್ಷಣ ತಜ್ಞನಾಗಿ ಪುಸ್ತಕಗಳ ತಯಾರಿಕೆ ಗ್ರಂಥ ಸಂಪಾದನಾ ಕಾರ್ಯ ವಿವಿಧ ಪ್ರದೇಶಗಳ ಭೂಮಿನಕ್ಷೆಯನ್ನು ತಯಾರಿಸಿದ್ದು ಇವರ ಮತ್ತೊಂದು ಗ್ರಂಥವಾದ 'ಬಿಬ್ಲಿಯೋಥಿಕಾ ಕರ್ನಾಟಿಕಾ'ದಲ್ಲಿ ಪ್ರಾಚೀನ ಸಾಹಿತ್ಯ, ಸಂಸ್ಕೃತಿಯನ್ನು ಪ್ರಕಟಿಸಿ ಜನರಿಗೆ ಅರಿವು ಮೂಡಿಸಿದರು. ಇಂಗ್ಲೇಂಡಿಗೆ ಹೋಗಿ ವಾಪಾಸ್ಸಾದ ರೈಸ್‌ರವರು ಬರಗಾಲದ ಬೇಗೆಯನ್ನು ಎದುರಿಸಬೇಕಾಯಿತು. ಆಗ ಅವರು ಬರಗಾಲ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು.

ರೈಸ್‌ರವರು ಒಟ್ಟು 8896 ಶಾಸನಗಳನ್ನು ಕರ್ನಾಟಕದಲ್ಲಿ ಸಂಗ್ರಹಿಸಿದರು. ಅಂತಹ ಸಂದರ್ಭದಲ್ಲಿ "ಇನ್‌ಸ್ಕ್ರೈಬ್" ಎನ್ನುವ ಪದಗಳ ಹುಟ್ಟುವಿಗೆ ಕಾರಣರಾದರು. ಮುದ್ರಣ ಯಂತ್ರಗಳನ್ನು ತಂದು ಮುದ್ರಣ ಕಾರ್ಯದಲ್ಲೂ ತೊಡಗಿದ್ದರು. ಕೊಡಗು ಮತ್ತು ಶ್ರವಣಬೆಳಗೊಳದ ಶಾಸನಗಳನ್ನು ಮೈಸೂರು ಇನ್‌ಸ್ಕ್ರಿಪ್ಷನ್ ಎಂಬ ಸಂಪುಟಗಳೊಂದಿಗೆ ಹೊರತಂದರು. ಏಷ್ಯಾಟಿಕ್, ಮಿಥಿಕ್ ಸೊಸೈಟಿಗಳ ಮೂಲಕ ನಡೆಯುವ ಸಂಶೋಧನಾ ಕೆಲಸ ಕಾರ್ಯಗಳು ಮತ್ತು ಸಂಸ್ಥೆಯ ಉದ್ದೇಶಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಜನರಿಗೆ ಅರಿವು ಮೂಡಿಸಿದ್ದರು. ಶಿಕ್ಷಣದಲ್ಲಿ ಇಂಗ್ಲೀಷ್ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಕನ್ನಡ ಶಿಕ್ಷಣವನ್ನು ಸರಳಗೊಳಿಸಿದರು.

ವಿವಿಧ ರಾಜಮನೆತನಗಳಿಂದ ಸಂಸ್ಥಾನಗಳಿಂದ ಹಳೆಯ ಹಸ್ತಪ್ರತಿಗಳನ್ನು ಸಂಗ್ರಹಿಸಿ ಅವುಗಳ ಪಾಠ ಪರಿಷ್ಕರಣ ಮಾಡಿದರು. ಸಾಮಾನ್ಯವಾಗಿ ಪಾಠಪರಿಷ್ಕರಣಗಳು ಸ್ಖಾಲಿತ್ಯ ಮತ್ತು ಬಿಟ್ಟು ಹೋಗಿರುವ ಅಕ್ಷರಗಳ ಜೋಡಣೆಯನ್ನು ಕೆಲವು ಆಧಾರಗಳೊಂದಿಗೆ ತಿದ್ದುಪಡಿ ಮಾಡಿದರು. ಮೂಲ ದಾಖಲೆಗಳು ಸಿಗದೇ ಇದ್ದಾಗ ಈ ಕೆಲಸಗಳು ನಡೆಯುತ್ತಿದ್ದವು.

---

32. ಶ್ರೀನಿವಾಸ ಹಾವಾನೂರು – ಹೊಸಗನ್ನಡ ಅರುಣೋದಯ – ಪುಟ. 163

ಬಂಡೆಗಳ ಮೇಲೆ, ಶಿಲಾ ಸ್ತಂಭಗಳ ಮೇಲೆ, ಗೋಡೆಗಳ ಮೇಲೆ ಕಲ್ಲುಗಳಿಂದ ಬರೆಸಿ ಹಾಕಿದ ಬರವಣಿಗೆ ಮತ್ತು ಕರ್ನಾಟಕದ ಐತಿಹಾಸಿಕ ಸ್ಥಳಗಳು ಅಲ್ಲಿನ ಕೆತ್ತನೆಯ ಪರಿಣತಿ ರೈಸ್‌ರವರ ಮನಸೆಳೆದವು. ಊಹೆಗಳ ಮೇರೆಗೆ ಅಶೋಕನ ಶಾಸನದಲ್ಲಿ ದೇವನಾಂಪ್ರಿಯಾ ಅಸೋಕಸ ಎನ್ನುವ ಪದವನ್ನು ವಿದ್ವಾಂಸರು ನಾನ ರೀತಿಗಳಲ್ಲಿ ಅಸೋಕನಾಪ್ರಿಯ ದೇವಂ ಎಂದು ಗುರುತಿಸುತ್ತಿದ್ದು ಉಂಟು ಅಸತ್ಯ ಪಾಠಗಳನ್ನು ವರ್ಜಿಸಿ ಸತ್ಯ ಪಾಠವನ್ನು ನಿರ್ಣಯಿಸುವುದು ಸಂಶೋಧಕನ ಕೆಲಸವಾಗಿದೆ. ಶಾಸನವನ್ನು ಓದುವವನಿಗೆ ಅನೇಕ ಭಾಷೆಗಳ ಪರಿಚಯವಿದ್ದು ಶಾಸನಗಳ ಪೂರ್ವಭಾವಿ ಪರಿಚಯ ಅವನಿಗೆ ಇರಬೇಕು. ಶಾಸನದಲ್ಲಿ ಉಲ್ಲೇಖವಾಗುವ ಕಾಲನಿರ್ಣಯ, ಕೃತಿ, ಉದ್ದೇಶ, ಇತಿಹಾಸ, ಕರ್ತೃ ಎಲ್ಲವನ್ನು ಸಂಶೋಧಿಸಿ ಈ ನಾಡಿನ ಇತಿಹಾಸದ ಮಹಿಮೆಯನ್ನು ಶಾಸನದ ಮೂಲಕ ರೈಸ್‌ರವರು ತಿಳಿಸಿಕೊಟ್ಟರು. "ಅವರು ಅಂತಿಮವಾಗಿ ಕೊನೆಯಲ್ಲಿ ಬರೆದ 'ಮೈಸೂರ್ ಅಂಡ್ ಕೂರ್ಗ ಇನ್‌ಸ್ಕ್ರಿಪ್ಷನ್'ನಲ್ಲಿ ಅವರ ಸಂಶೋಧನೆಯ ಸಮಗ್ರ ಸಾರವನ್ನು ಕಾಣುತ್ತೇವೆ."[33]

ಕನ್ನಡ ಸಂಶೋಧನೆಗೆ ಯಾವುದೇ ರೀತಿಯಾದ ಕೊಡುಗೆಯಾದರು ರೈಸ್ ರವರ ಕೊಡುಗೆ, ಒಂದು ರೀತಿಯ ಮಹತ್ವವಾದ ಕೊಡುಗೆಯಾಗಿದೆ. ಕನ್ನಡ ವಿದ್ವಾಂಸರಿಗಿಂತ ಒಂದು ಪಟ್ಟು ಹೆಚ್ಚಿನ ಕೆಲಸವನ್ನು ರೈಸ್‌ರವರು ಮಾಡಿದ್ದಾರೆ.

---

33. ಶ್ರೀನಿವಾಸ ಹಾವಾನೂರು – ಹೊಸಗನ್ನಡ ಅರುಣೋದಯ – ಪುಟ. 164

ಅಧ್ಯಾಯ: 5

ಸಮಾರೋಪ

ಶೋಧನೆ ಮತ್ತು ಸಂಶೋಧನ ಗ್ರಂಥಗಳು

ಅಧ್ಯಾಯ – 5

ಸಮಾರೋಪ

ಶೋಧನೆ ಮತ್ತು ಸಂಶೋಧನೆ

ಮನುಷ್ಯ ಸುಮ್ಮನೆ ಕೂರದೇ ಯಾವುದಾದರೂ ಒಂದು ಚಟುವಟಿಕೆಗಳಲ್ಲಿ ತೊಡಗುವುದು ಆತನ ಗುಣ. ಅವನ ಮನಸ್ಸು ಯಾವಾಗಲೂ ಚಲನೆಯಲ್ಲಿ ಕೂಡಿರುವಂತದ್ದು "ನಿರ್ದಿಷ್ಟ ಗುರಿ ಇರಲಿ, ಬಿಡಲಿ, ಯಶಸ್ಸು ದೊರೆಯಲಿ, ಇಲ್ಲವೆ ದೊರಯದಿರಲಿ, ಮನುಷ್ಯ ನಿರಂತರವಾಗಿ ಹುಡುಕುವ ಕ್ರಿಯೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಈ ಹುಡುಕುವ ಕ್ರಿಯೆ ಯಾವುದೇ ಕ್ಷೇತ್ರಕ್ಕೂ ಅನ್ವಯಿಸಬಹುದು. ಅದಕ್ಕೆ ಸೀಮೆಯಿಲ್ಲ ಯಾವುದೇ ಕ್ಷೇತ್ರದಲ್ಲಿ ನಡೆಯುವ ಹುಡುಕಾಟವನ್ನು ಶೋಧನೆ ಎನ್ನಬಹುದು."34 ಪ್ರಕೃತಿ ದತ್ತವಾಗಿರುವುದನ್ನು ಆತನ ಭಾವನೆ ಮೂಲಕ ಹಿಡಿದಿಡುವ ಕ್ರಿಯೆ ಮಾಡುವುದು ಮತ್ತು ಇರುವುದನ್ನು ಬಿಟ್ಟು ಅದನ್ನೇ ಬಳಸಿಕೊಂಡು ಇಲ್ಲದ್ದನ್ನು ಸೃಷ್ಟಿಸುವ ಗುಣ ಮನುಷ್ಯನದ್ದು.
ಉದಾ: ಕಥೆ, ಕಾದಂಬರಿ, ಮಹಾಕಾವ್ಯಗಳು

"ಸಂಶೋಧನೆ ಎಂದರೆ ಶುದ್ಧಗೊಳಿಸು, ತಿದ್ದು ಎಂದರ್ಥ ಪರ್ಯಾಯವಾಗಿ ಇದಕ್ಕೆ ಹುಡುಕು ಎಂಬರ್ಥ ಬಂದು ಈ ಅರ್ಥವೇ ಈಗ ಪ್ರಬಲವಾಗಿದೆ. ಸಂಶೋಧನೆಯು ಹುಡುಕುವಿಕೆಯನ್ನು ಸೂಚಿಸುತ್ತದೆ".35 ಇಲ್ಲಿ ಎರಡು ಅರ್ಥಗಳನ್ನು ಗಮನಿಸಿದರೆ ಒಂದು ಮುಂಚಿತವಾಗಿಯೇ ಸೃಷ್ಟಿಯಾಗಿರುವುದು, ಇನ್ನೊಂದು ಪುನರ್ ಸೃಷ್ಟಿಯ ಕ್ರಿಯೆಯಲ್ಲಿ ತೊಡಗುವುದು ಯಾವುದು ಆತನಿಗೆ ಹೊಸತೇನಿಸುತ್ತದೆಯೋ ಅದೆಲ್ಲವು ಅವನ ಸಂಶೋಧನೆಯ ಕ್ರಿಯೆಯಲ್ಲಿ ತೊಡಗುತ್ತದೆ. ಈಗಾಗಲೇ ಸೃಷ್ಟಿಯಾಗಿರುವುದು ಪ್ರಕೃತಿ. ಅದನ್ನು ಬಳಸಿಕೊಂಡು ರಸಾನುಭವಾದ ಅಭಿವ್ಯಕ್ತಿಯನ್ನು ಬಳಸಿ ಸೃಷ್ಟಿಗೊಳಿಸುವುದು ಸಂಶೋಧನೆ. ಹೀಗೆ ಕಾಣುವ ಕವಿಯಲ್ಲಿ ಕೇಳುವ ಕೆಲವು ಪ್ರಕೃತಿದತ್ತವಾದ ವಸ್ತುಗಳನ್ನು ಬಳಸಿಕೊಂಡು ಸಂಶೋಧನೆಯಲ್ಲಿ ತೊಡಗುವ ಸಾಹಿತ್ಯ ಪರಿಭಾಷೆಯ ಅಂಶವನ್ನು ಇಲ್ಲಿ ನೋಡಬಹುದು. ಈ ಶೋಧನೆ, ಸಂಶೋಧನೆಯ ಕೃಷಿಯಿಂದ ನಮಗೆ ಸಿಕ್ಕಿದ ಗ್ರಂಥಗಳ ಬೆಳವಣಿಗೆಯಿಂದ ಕನ್ನಡ ಒಂದು ಹೆಮ್ಮೆಯ ಭಾಷೆ ಎಂದು ಹೇಳಿಕೊಳ್ಳಬಹುದು.
ಉದಾ: ಕುವೆಂಪು ಕಾನೂರು ಹೆಗ್ಗಡತಿ ಮದುಮಗಳು

---

34. ಡಾ. ಸಂಗಮೇಶ ಸವದತ್ತಿ ಮಠ–ಕನ್ನಡ ಸಾಹಿತ್ಯ ಸಂಶೋಧನ ಮಾರ್ಗ ಮತ್ತು ಇತಿಹಾಸ ಪುಟ. 13 35. ಡಾ. ಎಂ, ಚಿದಾನಂದಮೂರ್ತಿ – ಸಂಶೋಧನೆ – ಪುಟ. 13

ಪ್ರಾಚೀನ ಸಾಹಿತ್ಯಗಳು ರಚನೆಯಾಗಿರುವ ಕಾಲ ಯಾವುದೇ ಆಗಿರಲಿ ಅದು ಶೋಧನೆ ಎಂದು ಕರೆಯುತ್ತೇವೆ. ಅದನ್ನು ಆಧುನಿಕ ಯುಗಕ್ಕೆ ಮತ್ತೆ ಬೆಳಕಿಗೆ ತರುವುದು ಸಂಶೋಧನೆಯಾಗುತ್ತದೆ. ಹೊಸದಾಗಿ ಯಾವುದೇ ಸೃಷ್ಟಿಯಾಗಲಿ ಅದು ಶೋಧನೆ ಎನಿಸಿಕೊಳ್ಳುತ್ತದೆ. ಹೆಚ್ಚಾಗಿ ಶೋಧನೆ ನಡೆದಿರುವಂತಹದ್ದು ಸಾಹಿತ್ಯ ಕ್ಷೇತ್ರದಲ್ಲಿ ಮತ್ತು ವಿಜ್ಞಾನ ಕ್ಷೇತ್ರದಲ್ಲಿ, ವಿಜ್ಞಾನ ಕ್ಷೇತ್ರವು ಶೋಧನೆಯ ಗುರಿಯನ್ನೇ ಇಟ್ಟುಕೊಂಡಿರುವಂತದ್ದು ಅದನ್ನು ಮತ್ತೆ ವಿದ್ಯಾರ್ಥಿಗಳು ಪ್ರಯೋಗ ಮಾಡಿದಾಗ ಸಂಶೋಧನೆಯಾಗುತ್ತದೆ.

ಅದರ ಮೂಲಕ ಹೊಸದನ್ನು ಕಾಣುವ ಪ್ರಯತ್ನಗಳು ದಿನೇ ದಿನೇ ಹೆಚ್ಚುತ್ತಿರುವ ಸಂದರ್ಭವನ್ನು ನಾವು ನೋಡಬಹುದು. ಗ್ರಂಥ ಎನ್ನುವಂತದ್ದು ಪ್ರಾಚೀನವಾದದ್ದು,ಆದರೆ ಅದರಲ್ಲಿರುವ ವಿಷಯ ಮಾತ್ರ ಹೊಸತನವನ್ನು ಬಿಂಬಿಸುವಂತದ್ದು. ಸಮಾಜವನ್ನು ಅಭಿವೃದ್ಧಿಯ ಪಥದಲ್ಲಿ ನಡೆಸಬೇಕು ಎಂದು ಮುಂದಾಲೋಚನೆ ಮೂಲಕ ಶೈಕ್ಷಣಿಕ ಅಂತರ್ ಸಂಬಂಧಗಳಲ್ಲಿ ಹೊಸ ವಿಷಯಗಳನ್ನು ಆಲೋಚಿಸಿ ಮತ್ತು ಯುವ ಪೀಳಿಗೆ ಆಲೋಚಿಸುವಂತೆ ಮಾಡಿ ಅವರ ಮೂಲಕ ಪ್ರಯೋಗ ಮಾಡಿ ಆ ಪೀಳಿಗೆಯ ಸಮಾಜವನ್ನು ಗುರುತಿಸಿದರೆ ಅದು ಶೋಧನೆಯ ಪ್ರಯೋಗವಾಗಿ ಅದು ಫಲಿಸುತ್ತದೆ.

ಈಗಾಗಲೇ ಇರುವ ವಿಷಯಗಳನ್ನು ಬಳಸಿಕೊಂಡು ಹಂತ ಹಂತವಾಗಿ ಮನುಷ್ಯನ ಬೆಳವಣಿಗೆಯನ್ನು ಗುರುತಿಸುವ ಸಂಶೋಧನೆಯು ಗ್ರಂಥಗಳನ್ನು ಯಾವುದೇ ರೀತಿಯಲ್ಲಿ ಬದಲಾಯಿಸಲು ಸಾಧ್ಯವಿಲ್ಲ ಅಂತಹ ಸಂದರ್ಭದಲ್ಲಿ ಹೊಸ ವಿಷಯದ ಆಯ್ಕೆ ಬಂದಾಗ ಬುಕ್ ಅನ್ನುವ ಬದಲಿಗೆ ಅಕ್ಯೂಮಿಲೇಟ್ ಎಂದು ಗುರುತಿಸಲುಬಹುದು. ಆದರೆ ಅದು ರೂಢಿಗತವಾಗಿ ಬಂದದ್ದಲ್ಲ ಅಂಕಿತ ನಾಮವನ್ನಾಗಿ ಬಳಸಬಹುದು ಅಷ್ಟೇ. ಸಂಶೋಧನೆ ಎನ್ನುವುದಕ್ಕೆ ಬೇಕಾಗಿರುವಂತದ್ದು ಸತ್ಯದ ಬೆಳಕು ಈ ಸತ್ಯವನ್ನು ಕಾಣಲು ಸಾಕ್ಷಿಗಳು ಬೇಕು ಅಂದರೆ ಆಕರ, ಗ್ರಂಥಗಳು ನಮ್ಮ ಮೂಲವನ್ನು ಹುಡುಕಬೇಕಾದರೆ ವಂಶಾವಳಿಯ ಚಿತ್ರದ ಸರಪಳಿ ಹಾಕುವಂತೆ ಹಾಕಿದಾಗ ನಮ್ಮ ಮೊದಲ ಪೀಳಿಗೆಯ ಹೆಸರು ತಿಳಿದು ನಾವು ಹಾಗೆಯೇ ಮುಂದುವರೆಯುತ್ತ ಹೊಸ ಜೀವನ ಸೃಷ್ಟಿ ಮಾಡಿಕೊಳ್ಳಬಹುದು.

ಆದರೆ ಯಾವುದೇ ಗ್ರಂಥವನ್ನು ರಚನೆ ಮಾಡಬೇಕಾದರು ಆಕರಗಳನ್ನು ನಾವು ನೀಡಬೇಕು. ಅವುಗಳಲ್ಲಿರುವ ವಿಷಯವನ್ನು ಅಗತ್ಯವಾದಲ್ಲಿ ಒಂದು ಕಡೆ ಟಿಪ್ಪಣಿ ಮೂಲಕ ತೋರಿಸುವುದು. ಸಂಶೋಧಕನ ಕರ್ತವ್ಯ ಮತ್ತು ಅತನೇ ನಿಜವಾದ ಸಂಶೋಧಕನಾಗುತ್ತಾನೆ. ಇಲ್ಲದಿದ್ದರೆ ಅಸತ್ಯದ ಬೆಳಕನ್ನು ಸತ್ಯವೆಂದು ತೋರಿಸಲು ಹೋಗಿ ವಿವಾದ ಗ್ರಂಥಗಳನ್ನಾಗಿ ಸೃಷ್ಟಿಸಿ ಈ ಸಮಾಜದಲ್ಲಿ ಗೊಂದಲಗಳನ್ನು ಉಂಟು ಮಾಡುತ್ತವೆ.

ಸಂಶೋಧಕ ಕೆಲವು ವೇಳೆ ಸತ್ಯದ ಹಾದಿ ಕಾಣಲು ಹೋಗಿ ದಾರಿ ತಪ್ಪುತ್ತಾನೆ. ಗ್ರಂಥ ರಚನೆಯ ಸಂದರ್ಭದಲ್ಲಿ ನಾವು ಮುನ್ನೆಚ್ಚರಿಕೆ ವಹಿಸಿಕೊಂಡು ಪ್ರಬಂಧ, ಗ್ರಂಥ ರಚನೆ ಮಾಡಬೇಕಾಗಿರುತ್ತದೆ. ಆಧುನಿಕ ವಿಜ್ಞಾನ ಪ್ರಪಂಚದಲ್ಲಿ ಸತ್ಯವನ್ನು ಈ ಸಮಾಜಕ್ಕೆ ತಿಳಿಸುತ್ತಿದ್ದೇವೆ ಎಂದರೆ ನಾವು ಆ ಸಮಾಜದಲ್ಲಿ ಜೀವಿಸುತ್ತಿದ್ದೇವೆ ಎಂಬ ಅರಿವು ಸಂಶೋಧಕನಿಗೆ ಇರಬೇಕು.

ಗ್ರಂಥಗಳಿಂದ, ಕೃತಿಗಳಿಂದ, ಪುಸ್ತಕಗಳಿಂದ ಎತ್ತಿಕೊಂಡ ಸಾಲುಗಳನ್ನು ಜೋಡಿಸುವುದಷ್ಟೆ ಕೆಲಸವಲ್ಲ, ನಮಗೆ ಆ ವಾಕ್ಯ ಈ ಗ್ರಂಥಕ್ಕೆ ಸತ್ಯವನ್ನು ನೀಡುತ್ತದೆಯೇ, ಇಲ್ಲಿ ಅರ್ಥ ಬರುತ್ತದೆಯೇ, ಇಲ್ಲವೆ ಕೆಡುತ್ತದೆಯೇ, ಎಂದು ತಿಳಿದಿರಬೇಕು. ಮತ್ತು ಎತ್ತಿಕೊಂಡ ಪುಟಗಳನ್ನು ಗ್ರಂಥದ ಹೆಸರನ್ನು ಸರಿಯಾಗಿ ನಮೂದಿಸಬೇಕಾಗಿರುತ್ತದೆ. ಬರಿ ಲೇಖಕರ, ಕವಿಯ ಹೆಸರನ್ನು ಬರೆಯುವುದು ಕೆಲವರ ಹವ್ಯಾಸ ಆದರೆ ಒಬ್ಬ ಸಂಶೋಧಕರ, ಲೇಖಕರ, ಕವಿಯ ನೂರಾರು ಗ್ರಂಥಗಳಿರುತ್ತವೆ. ಅದರಲ್ಲಿ ಯಾವುದೆಂದು ತಿಳಿಸಬೇಕಾಗುತ್ತದೆ? ಮತ್ತು ಓದುಗನನ್ನು ಗೊಂದಲಕ್ಕೆ ಇಡು ಮಾಡುತ್ತದೆ. ಗ್ರಂಥದ ಸೃಷ್ಟಿಯೇ ಸಮಾಜದ ಸೃಷ್ಟಿ ಮತ್ತು ಸಂಸ್ಕೃತಿಯ ಸೃಷ್ಟಿಯನ್ನು ಹೇಳಬಹುದು.

ಯಾವುದೇ ಲೇಖನ ಪ್ರಬಂಧವಾದರೂ ಮನುಷ್ಯನಿಗೆ ಅದರಿಂದ ಸತ್ಯದ ಅರಿವು ಆಗಬೇಕು. ಯಾರದ್ದೋ ಕೈಗೊಂಬೆಗಳಾಗಿ ಬದುಕಿನಲ್ಲಿ ಗೊಂದಲಗಳಿಗೆ ಅವಕಾಶ ನೀಡಬಾರದು. ಕಲೆ ಎನ್ನುವುದು, ಸಾಹಿತ್ಯ ಎನ್ನುವುದು ಎಲ್ಲರಲ್ಲೂ ಇರುವುದಾದರೂ ಎಲ್ಲರೂ ಸಾಹಿತಿಗಳೇ ಆಗಲು ಸಾಧ್ಯವಿಲ್ಲ. ಸಾಹಿತ್ಯವೆಂದರೆ ಆತನ ಭಾಷೆಯಿಂದ ನಿಜಾಂಶವನ್ನು ಹೊರಹಾಕುವ ಅಂಶವಾಗಿದೆ. ಸಂಶೋಧನೆಯಲ್ಲಿ ಮೊದಲು ಸಮಸ್ಯೆಯನ್ನು ಹುಟ್ಟು ಹಾಕಿಕೊಂಡು ನಂತರ ಸತ್ಯದ ಆಕರಗಳ ಮೂಲಕ ಪರಿಶೀಲಿಸಿ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ. ಭೂತ, ಭವಿಷ್ಯತ್, ವರ್ತಮಾನ ಕಾಲಗಳನ್ನು ಹಿಂದು–ಮುಂದು ಮಾಡಿಕೊಂಡು ಹುಡುಕುವ ಯತ್ನಕ್ಕೆ ನಾವು ಕೈ ಹಾಕಬೇಕು. ಎಷ್ಟೇ ಸತ್ಯವನ್ನು ಅನುಭವವನ್ನು ಬಿಂಬಿಸುವ ಸಾಹಿತ್ಯ ಸಂಶೋಧನೆಗಳು ನಡೆದ ಗ್ರಂಥಗಳನ್ನು ನೋಡಿದರೆ ಓದುಗರನ್ನು ಮತ್ತೆ–ಮತ್ತೆ ಓದಬೇಕು ಅನಿಸುವಷ್ಟು ಸೊಗಸಾಗಿದೆ. ಅಂತಹ ಕೆಲಸವನ್ನು ಸಂಶೋಧಕ ಮಾಡಬೇಕಾಗುತ್ತದೆ.

ನವೋದಯ ಸಾಹಿತ್ಯದ ಕಾಲದಲ್ಲಿ ಹೆಚ್ಚಾಗಿ ಪ್ರಕೃತಿ ಸೊಬಗಿನ ಬರವಣಿಗೆಯು ಅಲ್ಲಿ–ಇಲ್ಲಿ ಸಾಮಾಜಿಕ ಚಿಂತನೆ ನಡೆದಿತ್ತು ಮತ್ತು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದವರಿಗೆ ಹೋರಾಟಕ್ಕೆ ಬನ್ನಿ ಎಂದು ಕರೆ ನೀಡದೆ ಹೋರಾಟ ಗೀತೆಗಳನ್ನು ಹಾಡುವುದರ ಮೂಲಕ ಕರೆ ನೀಡುವಂತಹ ದಿಟ್ಟ ಮಾತುಗಳು ಸಾಹಿತ್ಯದಲ್ಲಿ ರಚನೆಯಾದವು. ಅಂದರೆ ಮನುಷ್ಯ ಯಾವುದನ್ನು ಉಪಾಯದಿಂದ ಮಾಡಬೇಕಾದರೂ, ಮನುಷ್ಯನಿಗೆ ಮುಂದಾಲೋಚನೆ ಇರಬೇಕಾಗುತ್ತದೆ.

ಸಾಹಿತ್ಯ ಓದುಗರಿಗೆ ನಿರಾಶೆಯನ್ನು ಉಂಟು ಮಾಡಬಾರದು, ಕುತೂಹಲವನ್ನು ಕೆರಳಿಸುವಂತೆ ಇರಬೇಕಾಗುತ್ತದೆ. ಈ ಕಾಲಘಟ್ಟದಲ್ಲಿ ಎಲ್ಲ ಶೋಧನೆಯು ಪ್ರಕೃತಿಯ ಅಂಚಿನಲ್ಲಿ, ಭಾಷೆಯ ಅಂಚಿನಲ್ಲಿ ಬೆಳೆದದ್ದು ಪ್ರಗತಿಶೀಲ ಹಂತದಲ್ಲಿ ಬಡವರ, ರೈತರ ಪರವಾದ ಶೋಧನ ಸಾಹಿತ್ಯಗಳು ರಚನೆಗೊಂಡವು. ಪ್ರಗತಿಶೀಲ ಗ್ರಂಥಗಳು ಪ್ರಕೃತಿ ಪ್ರಿಯರಾದ ರೈತರಿಗೆ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಶ್ರೀಮಂತ ಷೇರುದಾರರ ವಿರುದ್ಧ ಹೋರಾಟ ಆರಂಭಿಸಿ ಬಂದ ಕೆಲವು ಗ್ರಂಥಗಳನ್ನು ನೋಡಬಹುದು.

ನವ್ಯ ಸಾಹಿತ್ಯ ಶೋಧಗಳು ವೈಜ್ಞಾನಿಕವಾಗಿ ವಿಮರ್ಶಾತ್ಮಕ ಅಂಶಗಳನ್ನೊಳಗೊಂಡಂತೆ ರಚನೆಯಾಗಿರುವುವು. ಮುಂದಿನ ಅಧ್ಯಯನಗಳಲ್ಲಿ ಕೂಲಂಕೂಷವಾಗಿ ವಿವರಿಸಲಾಗಿದೆ. ಆಧುನಿಕ ಸಂದರ್ಭದಲ್ಲಿ ಸಂಶೋಧನೆ ಎನ್ನುವುದು ವೈಜ್ಞಾನಿಕರಿಸಿ ವಿಜ್ಞಾನವನ್ನು ಬಳಸಿಕೊಂಡು ಯಾವುದೇ ಅಂಶವನ್ನು ತಿಳಿಸಬಹುದಾಗಿದೆ. ಸಂಶೋಧನೆಯ ನಿಟ್ಟಿನಲ್ಲಿರುವ 'ಡಿಸ್ಕವರಿ' ಎನ್ನುವ ಪದವು ಸರಿ. ಸಂಶೋಧನೆಯಲ್ಲಿ ಹುಡುಕಾಟ ಕ್ರಿಯೆ ಮಾಡುತ್ತಿದೆ. ಆದರೆ ಅದಕ್ಕೆ ಬದಲಾಗಿ 'ರಿಸರ್ಚ್' ಎನ್ನುವ ಪದವು ಎಲ್ಲ ಕ್ಷೇತ್ರಗಳಲ್ಲಿ ಅನ್ವಯಿಸುವುದರಿಂದ ಅದನ್ನೇ ಬಳಸಿಕೊಂಡು ಬರುತ್ತಿರುವುದನ್ನು ನೋಡಬಹುದು.ಇರುವ ಪ್ರಾಣಿ, ಪಕ್ಷಿ, ಜೀವ ಸಂಕುಲಗಳನ್ನು ಹುಡುಕುವ ಸಂಶೋಧನೆಯನ್ನು ಮಾಡುವಂತದ್ದು 'ಡಿಸ್ಕವರಿ' ಆದರೆ ಈಗಾಗಲೇ ಮುಗಿದು ಹೋಗಿರುವ ಈ ಸಂದರ್ಭದಲ್ಲಿ ಇರುವ ಕಲೆ, ವಿಜ್ಞಾನ, ವಾಣಿಜ್ಯ ಕ್ಷೇತ್ರಗಳಿಗೆ ಸಂಬಂಧಿಸಿರುವಂತದ್ದು 'ರೀಸರ್ಚ್'.

ದಲಿತ – ಬಂಡಾಯ ಸಾಹಿತ್ಯ ಸಂಶೋಧನೆ:

ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಶೋಷಣೆಗೆ ಒಳಗಾಗಿದ್ದು ಸ್ವಾತಂತ್ರ ಪಡೆಯುವ ಸಲುವಾಗಿ ಶೋಷಿತರು ಸಮಾಜದ ವಿರುದ್ಧ ದನಿ ಎತ್ತಿದ ಸಂದರ್ಭ ದಲಿತ – ಬಂಡಾಯದ್ದು ಎಂದು ಹೇಳಬಹುದು. ಸಾಹಿತ್ಯದಲ್ಲಿ ತಮ್ಮ ರೋಷ, ದ್ವೇಷ, ನ್ಯಾಯ, ಅನ್ಯಾಯಗಳನ್ನು ಚಿತ್ರಿಸಿ ಸತ್ಯವನ್ನು ಬಯಲಿಗೆಳೆಯುವ ಸಂದರ್ಭ ಬಂದದ್ದು ಈ ಕಾಲಘಟ್ಟದಲ್ಲಿ. ಅವಮಾನಿತ ಜನರು ತಮ್ಮ ಹಕ್ಕುಗಳನ್ನು ಚಲಾಯಿಸಲು ಸಾಹಿತ್ಯದಲ್ಲಿ ಅವಕಾಶ ಪಡೆಯಲು ಜನರನ್ನು ಹೋರಾಟಕ್ಕೆ ಕರೆ ನೀಡಲು ಬಳಸಿದ ಮಾರ್ಗ ಸಾಹಿತ್ಯ ಶೋಧನೆಯ ಕಾಲ ಎಂದು ಹೇಳಬಹುದು.

ಭಾರತ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಾಗ ಸ್ವಾತಂತ್ರದ ಹೋರಾಟಕ್ಕೆ ಕರೆ ನೀಡಿದ್ದು ಸಾಹಿತ್ಯದ ಹೋರಾಟ ಗೀತೆಗಳ ಮೂಲಕವೇ ಅದೇ ನಿಟ್ಟಿನಲ್ಲಿ ಸ್ವಾತಂತ್ರ ಗಳಿಸುವ ಸಲುವಾಗಿ ಶೋಧನೆಯಾದ, ಸೃಷ್ಟಿಯಾದ ಮಾರ್ಗ ದಲಿತ ಬಂಡಾಯ ಸಾಹಿತ್ಯ, ತಮ್ಮ ನೋವುಗಳನ್ನು, ದುಃಖಗಳನ್ನು, ಭಾವನೆಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸುವ ಸಂದರ್ಭ ಬಂದದ್ದು ದಲಿತ–ಬಂಡಾಯದ ಮಾರ್ಗ ಎಂದೆನ್ನಬಹುದು. ತಮ್ಮ ಆಡು ಭಾಷೆಯ ನಿಟ್ಟಿನಲ್ಲಿ ಊರಿನ, ಕೇರಿಯ, ಮನೆಯ ಭಾಷೆಯನ್ನು ಅಭಿವ್ಯಕ್ತಿಸಿದ್ದು ಈ ಸಾಹಿತ್ಯ ಶೋಧಕ್ಕೆ ಕಾರಣವಾಯಿತು. ಸಾಹಿತ್ಯದಲ್ಲಿ ಅಸ್ಪೃಶ್ಯರನ್ನಾಗಿ ಕಾಣುತ್ತಿದ್ದವರನ್ನು ಸಾಹಿತ್ಯದ ಮೂಲಕವೇ ಸುಮ್ಮನಾಗಿಸುವ ಸಂದರ್ಭ ಬಂದದ್ದು ಈ ವೇಳೆಯಲ್ಲಿ ದಲಿತ–ಬಂಡಾಯ ಗ್ರಂಥಗಳು ಹೆಚ್ಚಾಗಿ ಕಾವ್ಯ, ಕಥೆ, ವಿಮರ್ಶಾತ್ಮಕವಾಗಿ ಸಿದ್ದಗೊಂಡದ್ದು.

ದಿಟ್ಟ ಹೋರಾಟ, ಸ್ಪಷ್ಟ ಭಾಷೆ, ಸತ್ಯದ ಹಾದಿ, ಸರಳ ನಡೆ, ಮಾತುಗಾರಿಕೆ ಪ್ರಶಂಸೆ, ಈ ಸಾಹಿತ್ಯದಲ್ಲಿ ಒಡಮೂಡಿತು. ಕ್ರಿ.ಶ. 1970 ರಲ್ಲಿ ದೇವನೂರರ 'ದ್ಯಾವನೂರು', 'ಒಡಲಾಳ', 'ಕುಸುಮ ಬಾಲೆ, ಸಂಕಲನದೊಂದಿಗೆ ಸಾಹಿತ್ಯದ ಶೋಧನೆ ಆರಂಭವಾಗಿ ಸಿದ್ಧಲಿಂಗಯ್ಯನವರ 'ಹೊಲೆಮಾದಿಗಾರ ಹಾಡು' ಕಾವ್ಯಗ್ರಂಥ, ಏಕಲವ್ಯನಾಟಕ, ಬರಗೂರುರಾಮಚಂದ್ರಪ್ಪನವರ ಸಂಸ್ಕೃತಿ–ಉಪಸಂಸ್ಕೃತಿ, ಸಾಹಿತ್ಯ ಮತ್ತುರಾಜಕಾರಣ, ರಂಜಾನ್‌ದರ್ಗಾ – ಸಾಹಿತ್ಯಮತ್ತುಸಮಾಜ, ಎಚ್.ಎಸ್. ಶಿವಪ್ರಕಾಶ್ 'ಮಂಟೇಸ್ವಾಮಿ ಕಥಾಪ್ರಸಂಗ, ಕುಂ.ವೀರಭದ್ರಪ್ಪ ಪ್ರತಿಧ್ವನಿ, ದಿವಿಸೀಮೆಯಹಾಡು, ಮ.ಜ.ಜವರಯ್ಯನವರ 'ಕೇಳು ಜಗಮಾದಿಗ ಹೊಲೆಯ, ದಲಿತವರ್ಗದಶರಣರು, ಅರವಿಂದ ಮಾಲಗತ್ತಿ – ಕಪ್ಪುಕಾವ್ಯ, ದಲಿತಸಾಹಿತ್ಯ ಚಳುವಳಿಯತಾತ್ವಿಕಚಿಂತನೆ. ಗೌರ್ಮೆಂಟ್ ಬ್ರಾಹ್ಮಣ, ರಹಮತ್‌ತರೀಕೆರೆ – 'ಮರದೊಳಗಣಕಿಚ್ಚು,' ಸಾಂಸ್ಕೃತಿಕ ಅಧ್ಯಯನ, ಎಲ್.ಹನುಮಂತಯ್ಯ ಕಥಾಕಥನ, ದಲಿತಲೋಕದಬಳಗ, ಕಾಳೇಗೌಡ ನಾಗವಾರ –ಒಂದು ಬುಡಕಟ್ಟಿನ ಹೆಜ್ಜೆ, ಪ್ರೀತಿಮತ್ತುನಿರ್ಭೀತಿ, ಎನ್ನುವಂತಹ ಕಥೆ, ಕಾವ್ಯ, ನಾಟಕ, ವಿಮರ್ಶೆ, ಕಾದಂಬರಿಗಳಲ್ಲಿ ತಮ್ಮ ಅನುಭವದ ನೋಡಿದ, ಕೇಳಿದ ಅನುಭವಿಸಿದ ಸುಖ, ದುಃಖಗಳನ್ನು ಈ ಗ್ರಂಥಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ದಲಿತ ಸಾಹಿತ್ಯದಲ್ಲಿ ಹೆಚ್ಚಾಗಿ ಸಂಶೋಧನೆ ನಡೆದಿದ್ದು ಸಂಸ್ಕೃತಿ ಮತ್ತು ಜಾನಪದೀಯ ಅಧ್ಯಯನಗಳ ಮೇಲೆ ಎಂದು ಹೇಳಬಹುದಾಗಿದೆ.

ವಾಸ್ತವಿಕವಾಗಿ ಪರಂಪರೆಯಿಂದ ತುಳಿದು ಬದುಕುತ್ತಿರುವ ಸಮಾಜದಲ್ಲಿ ಮೇಲೆಳುವ ಪ್ರಯತ್ನ ನಡೆದದ್ದು ಮತ್ತು ಎಲ್ಲ ಸ್ವಾತಂತ್ರ್ಯ ಹಕ್ಕುಗಳನ್ನು ಅನುಭವಿಸುವ ಶೋಷಿತ ಜೀತ ಪದ್ಧತಿಯಿಂದ ಮುಕ್ತಿ ಹೊಂದುವ ಸಲುವಾಗಿ ಅನೇಕ ಮಹನೀಯರು ಹಿಂದಿನಿಂದಲೂ ಹೋರಾಟವನ್ನು ಆರಂಭಿಸಿಕೊಂಡೇ ಬರುತ್ತಿದ್ದಾರೆ.

ಅದನ್ನು ಮುಂದುವರೆಸಿಕೊಂಡು ಬಂದು ಈ ಕಾಲಘಟ್ಟ, ದಲಿತ–ಬಂಡಾಯದ ಗ್ರಂಥ ಸಂಶೋಧನೆ ಎಲ್ಲವು ಕಾವ್ಯ, ಸಂಸ್ಕೃತಿ, ಕಥೆ, ಜಾನಪದೀಯ ಅಂಶಗಳಿಂದ ರಚನೆಯಾದವುಗಳಾಗಿವೆ ಎಂದು ಹೇಳಬಹುದು. ದಲಿತ ಮತ್ತು ಬಂಡಾಯ ಸಾಹಿತ್ಯಗಳು ಎರಡು ಒಂದೇ ನಿಲುವನ್ನು ಪಡೆದವರು, ಭಿನ್ನವಾದ ಒಲವುಗಳನ್ನು ಹೊಂದಿರುವಂತವು, ಜೊತೆಗೆ ಲೋಹಿಯ, ವರ್ಡ್ಸ್‌ವರ್ತ್,ರಂತಹ ನಿಲುವುಗಳನ್ನು ಒಳಗೊಂಡಿರುವಂತವುಗಳಾಗಿವೆ. ಶತ ಶತಮಾನಗಳಿಂದಲೂ ಶೋಷಣೆಯ ಅಂಚಿನಲ್ಲಿ ಬದುಕುತ್ತಿದ್ದ ಜನರು ಹೋರಾಟದ ಹಾದಿ ಹಿಡಿದಿದ್ದು ದಲಿತ ಸಾಹಿತ್ಯ ಶೋಧನೆಯ ಮೂಲಕ.

ಸ್ತ್ರೀವಾದಿ ಸಾಹಿತ್ಯ ಸಂಶೋಧನೆ:-

ಒಂದು ಬಂಡಿಯ ಎರಡು ಚಕ್ರಗಳಿದ್ದಂತೆ, ಮನುಷ್ಯನ ಎರಡು ಕಣ್ಣುಗಳಿದ್ದಂತೆ, ಗಂಡು ಹೆಣ್ಣು ಎಂಬ ನುಡಿಗಳ ಮಾತಿನಿಂದ ಮಾತಾಗಿಯೇ ಉಳಿದು, ಪುರುಷ ಪ್ರಧಾನ ಸಮಾಜ ಅವರನ್ನು ನಾಲ್ಕು ಗೋಡೆಗಳ ಮಧ್ಯೆ ಶೋಷಿತರನ್ನಾಗಿ ಮಾಡಿ ಸಾಹಿತ್ಯದಲ್ಲೂ ಶೋಷಿತರನ್ನಾಗಿ ಚಿತ್ರಿಸಿದ್ದ ಸಂದರ್ಭದಲ್ಲಿ ಈ ಶೋಷಣೆಯ ವಿರುದ್ಧ ದನಿ ಎತ್ತಿ ಸಮಾನತೆಯನ್ನು ಸಾರಿದ ಸಂದರ್ಭ ಸ್ತ್ರೀ ಸಾಹಿತ್ಯದ ಸಂಶೋಧನೆ. ವಚನ ಚಳುವಳಿಯ ಸಂದರ್ಭದಲ್ಲಿ ಅಕ್ಕ ಮಹಾದೇವಿ ರಾಜನ ಆಡಳಿತಾತ್ಮಕ ವಿವಾಹವನ್ನು ವಿರೋಧಿಸಿದ ಸಂದರ್ಭದಲ್ಲಿ ಗಂಡಸರ ವಿರುದ್ಧ ದನಿ ಎತ್ತಿದ ಬಗೆ ರೋಷಾ ಜ್ವಾಲೆಯ ಬೆಂಕಿ ಉರಿಯುತ್ತಿದ್ದು ಆಧುನಿಕ ಸಂದರ್ಭದ ಸಾಹಿತ್ಯದವರೆಗೂ ಹಾಗೆ ಹೊಗೆಯಾಡಿ ಆಧುನಿಕ ಸಂದರ್ಭದಲ್ಲಿ ಹತ್ತಿ ಉರಿಯುತ್ತಿದೆ.

ಪುರುಷರ ದಬ್ಬಾಳಿಕೆಗಳನ್ನು ವಿರೋಧಿಸಿ ಹೋದ ಅಕ್ಕಮಹಾದೇವಿ ಸಾಹಿತ್ಯದ ಸ್ಫೂರ್ತಿಗೆ ಮುನ್ನುಡಿಯಾದಂತಿದೆ. ಚನ್ನಮಲ್ಲಿಕಾರ್ಜುನನ್ನು ಹುಡುಕಿ ಭಕ್ತಿ ಮಾರ್ಗದಲ್ಲಿ ಹೊರಟ ಸಂದರ್ಭದಲ್ಲಿ ಅಕ್ಕಮಹಾದೇವಿಯ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ. ಪ್ರಾಣಿ ಪಕ್ಷಿಗಳ ಹೆಸರಿನ ಸಂಶೋಧನೆ ನಡೆದಿದೆ. ಅಂದು ಜೀವಿಸುತ್ತಿದ್ದ ಜೀವ ಜಲಗಳನ್ನು ಸಾಹಿತ್ಯದಲ್ಲಿ ಸೊಗಸಾಗಿ ಬಳಸಿದ್ದಾಳೆ. ಯೋಗಾಂಗತ್ರಿವಿಧಿ ಅಕ್ಕಮಹಾದೇವಿಯ ವಚನಗ್ರಂಥ ಎಂದು ಹೇಳಬಹುದು. ಸಂಚಿಯ ಹೊನ್ನಮ್ಮನ ಹದಿ-ಬದೆಯ ಧರ್ಮ, ಛಂದೊಬದ್ಧವಾಗಿ ಸ್ತ್ರೀಯರ ಪರವಾಗಿ ರಚನೆಯಾದ ಗ್ರಂಥ. ಕಾದಂಬರಿಗಾರ್ತಿ ತ್ರಿವೇಣಿಯವರು ತನ್ನ ಸಾಹಿತ್ಯದಲ್ಲಿ ಸ್ತ್ರೀ ಸಾಮಾಜಿಕ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆಗಳನ್ನು, ಮನೋವೈಜ್ಞಾನಿಕ ಶೋಧನೆಯನ್ನು ಕಟ್ಟಿಕೊಟ್ಟಿದ್ದಾರೆ. ಅವರ ಶರಪಂಜರ, ಬೆಕ್ಕಿನಕಣ್ಣು, ಮುಂತಾದವು ಸ್ತ್ರೀ ಕುರಿತ ಶೋಧನ ಸಾಹಿತ್ಯವಾಗಿದೆ. ಬಿ.ಟಿ. ಲಲಿತ ನಾಯಕ್ ಸಂಸ್ಕೃತಿ ಚಿಂತನೆಯನ್ನು ನಡೆಸಿದ ಸ್ತ್ರೀ ಲೇಖಕಿ, ಅವರ "ನಂರೂಪ್ಲಿ"ಗತಿ ಎನ್ನುವ ಸಾಹಿತ್ಯ ಸಂಶೋಧನೆಯ ಹಾದಿಯನ್ನು ನೋಡಬಹುದು. ವಿಜಯದಬ್ಬೆ ಅವರ ನಾಗಚಂದ್ರ ಒಂದು ಅಧ್ಯಯನ, ನಯಸೇನ, ಇಂತಹ ಗ್ರಂಥಗಳನ್ನು ಅಧ್ಯಯನ ಮಾಡಿ ಸಂಶೋಧನೆಗೆ ಒಳಪಡಿಸಿದ್ದಾರೆ.

ಸಾರಅಬೂಬ್‌ಕರ್ ಮುಸ್ಲಿಂ ಸಂವೇದನೆ ಮತ್ತು ನೋವು ನಲಿವುಗಳನ್ನು ತಮ್ಮ ಮುಸ್ಲಿಂ ಜನಾಂಗದಿಂದ ಕನ್ನಡ ಸಾಹಿತ್ಯಕ್ಕೆ ತಂದು 'ಚಂದ್ರಗಿರಿಯತೀರ'ದಲ್ಲಿ ಎಂಬ ಕಥಾ ಸಂಕಲನ ಕಟ್ಟಿ ಕೊಟ್ಟಿದ್ದಾರೆ. ಜಯದೇವಿ ತಾಯಿ ಲಿಗಾಡೆಯವರ 'ಸಿದ್ಧರಾಮಪುರಾಣ' ತ್ರಿಪದಿಯಲ್ಲಿ ಶೋಧನೆಯಾದ ಸಂಶೋಧನ ಗ್ರಂಥವಾಗಿದೆ. ಗೀತಾ ನಾಗಭೂಷಣ್‌ರವರ 'ಬದುಕು' ಸುಮತೀಂದ್ರ ನಾಡಿಗರ್, ಎಚ್.ಎಸ್. ಶ್ರೀಮತಿಯರಂತಹ ಸ್ತ್ರೀಯರು ಸ್ತ್ರೀ ಪರವಾಗಿ ಚಿಂತನೆ ನಡೆಸಿ ಸ್ತ್ರೀ ಪರ ಸಂಶೋಧನೆಯಲ್ಲಿ ತೊಡಗಿದ ಲೇಖಕಿಯರೆಂದು ಹೇಳಬಹುದು.

ಇವರ ಬರಹದಲ್ಲಿ ಸ್ತ್ರೀ ಸಮಸ್ಯೆ, ಪುರುಷರ ದಬ್ಬಾಳಿಕೆ, ಸಮಾಜದ ನಿಂದನೆಗಳು ಮತ್ತು ತವರಿನ ಸಂಕಷ್ಟದ ಹಂಬಲಗಳನ್ನು ಚಿತ್ರಿಸಿದ್ದಾರೆ ಮತ್ತು ಸ್ತ್ರೀ ಸಂಸ್ಕೃತಿಯನ್ನು ಕುರಿತು ಆಲೋಚನೆ ನಡೆಸಿದ್ದಾರೆ. ಆಧುನಿಕ ಈ ಸಂದರ್ಭದಲ್ಲಿ ಸ್ತ್ರೀ ಸಂಶೋಧನೆಯಲ್ಲಿ ತೊಡಗಿದ್ದು ಪ್ರಾಚೀನ ಸಾಹಿತ್ಯದ ಶೋಧನೆಯನ್ನು ನಡೆಸಿದ್ದಾರೆ. ತ್ರಿಪದಿ, ಸಾಂಗತ್ಯ, ಮನೋವೈಜ್ಞಾನಿಕದೃಷ್ಟಿ, ನೋವು, ದುಃಖಗಳಂತಹ ಸಾಹಿತ್ಯದ ಬರಹ ಈ ಗ್ರಂಥಗಳಲ್ಲಿ ಎದ್ದು ಕಾಣುತ್ತದೆ. ಜಾನಪದೀಯ ದೃಷ್ಟಿಯಲ್ಲಿ ಸಾಹಿತ್ಯ ಬೆಳವಣಿಗೆ ಮತ್ತು ಜಾನಪದದಲ್ಲಿ ಸ್ತ್ರೀಯರು ಯಾರಿಗೇನು ಕಡಿಮೆ ಇಲ್ಲ ಎನ್ನುವ ರೀತಿಯಲ್ಲಿ ಸಾಹಿತ್ಯ ರಚಿಸಿದ್ದಾರೆ.

ಆಧುನಿಕ ಸ್ತ್ರೀ ಸಾಹಿತ್ಯವು ಹೊಸ ಹೊಸ ರೂಪವನ್ನು ಪಡೆದುಕೊಂಡು ಹೊಸ ಆಲೋಚನೆಗಳ ಶೋಧನೆ ನಡೆಯುತ್ತಿದ್ದು ಸ್ತ್ರೀಯರು ಸಂಘಟಿತರಾಗಿ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುತ್ತಿದ್ದು ಎಲ್ಲ ಕ್ಷೇತ್ರಗಳಲ್ಲೂ ಮುಂದುವರಿಯುತ್ತಿರುವ ಸಂದರ್ಭವನ್ನು ನೋಡಬಹುದು.

ಈ ಎಲ್ಲ ಸಂಶೊಧನ ಗ್ರಂಥಗಳು ಕಾಲಕ್ಕೆ ತಕ್ಕಂತೆ ಹೊಸ ವಿವೇಚನೆಗಳನ್ನು ಹೊಂದಿಕೊಂಡಂತೆ ರಚನೆಯಾಗಿರುವಂತಹವು ಸಂಶೋಧನ ಗ್ರಂಥಗಳನ್ನು ಪುನರ್ ಪರೀಶಿಲಿಸಿದರೆ ಅದರಲ್ಲಿ ಯಾವುದಾದರೂ ಹೊಸ ವಿಷಯ ಗೋಚರಿಸಬಹುದು. ಅಂದರೆ ಯಾವುದು ಶಾಶ್ವತವಲ್ಲ ಸೃಷ್ಟಿಯಾದ ಮೇಲೆ ಸೃಷ್ಟಿಯಾಗುತ್ತಿರುವ ಅನೇಕ ಸಾಹಿತ್ಯಗಳನ್ನು ನಾವು ನೋಡಬಹುದು. ಅದರ ಉದ್ದೇಶ ಸತ್ಯವನ್ನು ಕಾಣುವ ಪುನರ್ ಮೌಲೀಕರಣ. ಸಾಹಿತ್ಯ ಸಂಪಾದನೆ ಕನ್ನಡದ ಮಟ್ಟಿಗೂ ಹೆಮ್ಮೆ ಎನಿಸಿದರೂ ಗಡಿಪ್ರದೇಶಗಳ ವಾಕ್ಯಗಳಿಂದ ಯಾವುದು ಶ್ರೇಷ್ಠ, ಯಾವುದು ಕನಿಷ್ಟ, ಎಂದು ಗುರುತಿಸುವುದು ಕಷ್ಟವಾಗಿದೆ ಅಂದರೆ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಇತಿಹಾಸವಿದೆ. ಅದನ್ನು ಬೇರೆಯ ಭಾಷೆ ಕಸಿದುಕೊಂಡಾಗ ಅದರ ಮೇಲೆ ಆದ ಪರಿಣಾಮದ ಕಾರಣವಾಗಿರಬಹುದು.

ಖಚಿತವಾದ ಮಾಹಿತಿಗಳು ದೊರಕಲು ಸಾಧ್ಯವಿಲ್ಲದೆ ಇರುವುದು ಸಾಹಿತ್ಯದ ಪಾಠಗಳು ಪಾಠಂತರಗೊಂಡವು ಕವಿಯ ಹೆಸರು, ಕಾಲ ಸರಿಯಾಗಿ ಉಲ್ಲೇಖಗೊಂಡಿದೆ. ಬಹುಶಃ ಕನ್ನಡ ಭಾಷೆ ಭಾಷೆಯಲ್ಲಿಯೇ ಮೊದಲ ಭಾಷೆಯಾಗುತ್ತಿತ್ತು ಎಂದು ಹೇಳಬಹುದು.

ಯಾವುದೇ ಅಧ್ಯಯನದ ಮೇಲೆ ಪ್ರಬಂಧ ರಚನೆ ಮಾಡಿದ್ದರೂ ಒಂದು ನಿಶ್ಚಿತವಾದ ಉದ್ದೇಶವಿರುತ್ತದೆ. ಅಂದರೆ ಯಾವುದಾದರೂ ಬೆಳಕಿಗೆ ಬಾರದೆ ಬಂದರೂ ಸರಿಯಾಗಿ ಅರ್ಥೈಸದೇ ಇದ್ದ ಸಂದರ್ಭದಲ್ಲಿ ಅದನ್ನು ಕೆಲವು ಆಧಾರಗಳ ಮೇರೆಗೆ ತೋರಿಸುವಂತಹ ಕೆಲಸವನ್ನು ಸಂಶೋಧಕನಾದವನು ಮಾಡಬೇಕಾಗಿರುತ್ತದೆ. ಸಂಶೋಧನೆಯ ಸಾಕಷ್ಟು ಪ್ರಬಂಧಗಳು ರಚನೆಯಾಗಿದ್ದರೂ ಸಂಶೋಧನೆ ಗ್ರಂಥಗಳು ನಡೆದ ದಾರಿ ಮತ್ತು ವಿವಿಧ ಕ್ಷೇತ್ರದ ಗ್ರಂಥಗಳನ್ನು ಅಯಾ ಕ್ಷೇತ್ರಕ್ಕೆ ಸಂಬಂಧಿಸಿದ್ದಂತೆ ಹೆಸರಿಸಲಾಗಿದೆ.

ನಿಶ್ಚಿತವಾದ ಗುರಿಯೊಂದಿಗೆ ಕಾಲ, ವೇಳೆ ಮುಖ್ಯವಾದುದು. ಯಾವುದೇ ಕೆಲಸವನ್ನು ನಿಗದಿತ ವೇಳೆಯಲ್ಲಿ ಮುಗಿಸುವುದು ಮತ್ತು ಅಧ್ಯಯನಕ್ಕೆ ಒಳಪಡಿಸುವುದು ಸಾಧ್ಯವಾದರೆ ಅದು ವ್ಯಾಪ್ತಿ ಎನಿಸಿಕೊಳ್ಳುತ್ತದೆ. ನವೋದಯ ಪೂರ್ವದಿಂದ ಆಧುನಿಕ ಸಂಶೋಧನೆಯವರೆವಿಗೂ ಇದರ ವ್ಯಾಪ್ತಿಯನ್ನು ಅಳವಡಿಸಿ ತೋರಿಸಲಾಗಿದೆ. ಹೊಸ ವಿಷಯ ಎಂದಾಗ ಅದರ ಸ್ವರೂಪ ಇಡಿಯಾಗಿ ನೋಡುವ ಇಲ್ಲವೇ ಬಿಡಿಯಾಗಿ ನೋಡುವ ಯತ್ನದಲ್ಲಿ ಗ್ರಂಥದ ಸ್ವರೂಪ ಮತ್ತು ಶಾಸನ ಹಸ್ತಪ್ರತಿ, ಸಾಹಿತ್ಯದ ಸ್ವರೂಪವನ್ನು ತಿಳಿಸಲಾಗಿದೆ. ಕೆಲವು ಸಂಶೋಧನ ಗ್ರಂಥಗಳನ್ನು ಕೊಡಲಾಗಿದೆ. ಈ ಅಧ್ಯಯನದ ಸ್ವರೂಪವೆಂದರೆ ಗ್ರಂಥಗಳ ಸಂಬಂಧವನ್ನು ಎಲ್ಲ ಕ್ಷೇತ್ರಕ್ಕೂ ಕಲ್ಪಿಸುವುದು. ಯಾವುದೇ ಪದಗಳ ಅರ್ಥ ತಿಳಿಯದಿದ್ದರೆ ನಾವು ನಿಘಂಟಿನ ಮೊರೆ ಹೋಗಬೇಕಾಗುತ್ತದೆ. ಅಂತಹ ಅಧ್ಯಯನವನ್ನು ತಿಳಿಸುವ ಸ್ತ್ರಿ ಮತ್ತು ದಲಿತ ಸಂಶೋಧನ ಗ್ರಂಥಗಳನ್ನು ತಿಳಿಸುವುದೇ ಈ ಅಧ್ಯಯನದ ಮಹತ್ವವಾಗಿದೆ.

ಯಾವುದೇ ಪದವಾದರೂ ಅದಕ್ಕೆ ಯಾಕೆ ಹಾಗೆ ಕರೆಯುತಾರೆ ಎಂದು ಹೇಳಬೇಕಾಗುತ್ತದೆ ಮತ್ತು ಆ ವಸ್ತುವಿನ ಮೂಲವನ್ನು ನಾವು ಕಂಡುಹಿಡಿದು ಅದಕ್ಕೆ ಒಂದು ನಿಶ್ಚಿತವಾದ ಅರ್ಥ ಹುಡುಕಿ ಅದನ್ನು ತೋರಿಸಬೇಕಾಗುತ್ತದೆ. ಅಂತಹ ಸಂಶೋಧನೆಯಲ್ಲಿ ಗ್ರಂಥ ಎಂದರೇನು ಮತ್ತು ಗ್ರಂಥಗಳ ಬೆಳವಣಿಗೆಯನ್ನು ತಿಳಿಸಲಾಗಿದೆ. ಗ್ರಂಥ ಎನ್ನುವ ಪದಕ್ಕೆ ವಿವಿಧ ವ್ಯಾಖ್ಯಾನಗಳಿದ್ದು ಅದನ್ನು ಇಲ್ಲಿ ಒಳಪಡಿಸಲಾಗಿದೆ. ಈ ಗ್ರಂಥಗಳ ಬೆಳವಣಿಗೆ ನವೋದಯ ಪೂರ್ವದಿಂದ, ಆಧುನಿಕ ಕಾಲವನ್ನು ನಿಗದಿಸಿ ಸಂಶೋಧನೆಯನ್ನು ಕಟ್ಟಿ ಕೊಡಲಾಗಿದೆ. ಕನ್ನಡ ಚರಿತ್ರೆಯಲ್ಲಿ ಅನೇಕ ಆಕರ ಗ್ರಂಥಗಳು ವಿವಿಧ ವಸ್ತುಗಳ ಪ್ರಭಾವಿರುವುದು ಗೊತ್ತೆ ಇದೆ. ಅಂದರೆ ಶಾಸನ, ಹಸ್ತಪ್ರತಿ, ಸಾಹಿತ್ಯ ಕ್ಷೇತ್ರಗಳನ್ನು ನಾವು ಗ್ರಂಥ ಎನ್ನುವ ಪದಕ್ಕೆ ಜೋಡಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಯಾವುದೇ ಅಧ್ಯಯನಗಳು ಕನ್ನಡದಲ್ಲಿ ನಡೆದಿದ್ದರೂ ಅದು ಅನ್ಯದೇಶಿಯವರಿಂದ ಸುಮಾರು 19ನೇ ಶತಮಾನದಲ್ಲಿ ಕರ್ನಾಟಕಕ್ಕೆ ಬಂದ ಪಾಶ್ಚಿಮಾತ್ಯರು ಇಲ್ಲಿ ಸಿಗುವ ವಸ್ತುಗಳನ್ನು ಸಂಗ್ರಹಿಸಿ ಸಂಶೋಧನೆಗೆ ಅಳವಡಿಸಿದರು.

ಅಂತಹ ವಿದ್ವಾಂಸರಲ್ಲಿ ಅನೇಕರಿದ್ದು ಅವರಲ್ಲಿ ಪ್ರಮುಖರಾದ ರೆ.ಫ. ಕಿಟೆಲ್ ಮತ್ತು ಬಿ. ಎಲ್. ರೈಸ್‌ರವರನ್ನು ಅಧ್ಯಾಯ ನಾಲ್ಕರಲ್ಲಿ ಅಳವಡಿಸಿ ಕಿಟೆಲ್ ಸಂಶೋಧನೆಯಲ್ಲಿ ತಯಾರಾದ ನಿಘಂಟುವಿನ ಬಗ್ಗೆ ತಿಳಿಸಿದ್ದೇನೆ. ನಿಘಂಟು ಎಂದರೇನು? ಅದರ ಆಧುನಿಕ ಕಾಲದ ಅವಶ್ಯಕತೆ ಮತ್ತು ಆಧುನಿಕ ನಿಘಂಟುಗಳನ್ನು ತಿಳಿಸಲಾಗಿದೆ. ಕೊನೆಯ ಸಮಾರೋಪದಲ್ಲಿ ಹೊಸದಾಗಿ ಅಧ್ಯಯನಕ್ಕೆ ಸ್ತ್ರಿ ಮತ್ತು ದಲಿತ ಸಾಹಿತ್ಯ ಸಂಶೋಧನೆಯನ್ನು ಅಳವಡಿಸಲಾಗಿದೆ. ಶೋಧನೆ ಸಂಶೋಧನೆಯ ಮೂಲಕ ಬೆಳಕಿಗೆ ಬರಬಹುದಾದ ಗ್ರಂಥಗಳನ್ನು ಇಲ್ಲಿ ಹೇಳಲಾಗಿದೆ,

ಒಟ್ಟಿನಲ್ಲಿ ಈ ಅಧ್ಯಯನದಲ್ಲಿ ಅಳವಡಿಸಿರುವ ಛಿಷಯಗಳೆಲ್ಲವು ಹೊಸವಿಚಾರವನ್ನು ಒಳಗೊಂಡಿವೆ ಎಂದು ತಿಳಿದು ನನ್ನ ಆಲೋಚನೆಯ ಮೇರೆಗೆ ಸಂಶೋಧನ ಗ್ರಂಥಗಳ ಹೊಸ ಅಲೋಚನೆಯನ್ನು ಬರೆದು ಸಲ್ಲಿಸುತ್ತಿದ್ದೇನೆ.

ಗ್ರಂಥಋಣ

ಗ್ರಂಥಋಣ

1.ಡಾ. ಎಸ್.ಎಸ್. ಅಂಗಡಿ. – ಕನ್ನಡ ನಿಘಂಟು ರಚನೆ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಪ್ರಥಮ ಮುದ್ರಣ–2003

2.ಡಾ.ಎಂ.ಚಿದಾನಂದಮೂರ್ತಿ. – ಸಂಶೋಧನೆ
ಡಿ,ವಿಕೆ,ಮೂರ್ತಿ
ಪ್ರಕಾಶಕರು: ಮೈಸೂರು.4
ಎರಡನೆ ಮುದ್ರಣ.2002

3. ಡಾ.ಎಂ.ಚಿದಾನಂದಮೂರ್ತಿ. – ಕನ್ನಡ ಶಾಸನಗಳ
ಸಾಂಸ್ಕೃತಿಕ ಅಧ್ಯಯನ
ಮೈಸೂರು ವಿಶ್ವವಿದ್ಯಾಲಯ
ಪ್ರಕಟಣೆ 1996

4. ಡಾ.ಎಂ.ಚಿದಾನಂದಮೂರ್ತಿ. – ಹೊಸತು ಹೊಸತು
ಪುಸ್ತಕ ಪ್ರಾಧಿಕಾರ.ಬೆಂಗಳೂರು
ಪ್ರಕಟಣೆ, 1998

5. ಪ್ರೊ. ನಾ. ಗೀತಾಚಾರ್ಯ. – ಅಂತರ್‌ಶಿಸ್ತೀಯ
ಸಂಶೋಧನ ವಿಧಿ ವಿಧಾನಗಳು
ಬಿ,ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು, ಪ್ರಕಟಣೆ.1999

6. ಗೀತಾ ಎಸ್.ನಂದಿಹಾಳ್ –ಕನ್ನಡಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ
ಕಿಟೆಲ್ ಕಲಾ ಮಹಾವಿದ್ಯಾಲಯ.
ಧಾರವಾಡ. 580001
ಪ್ರಥಮ ಮುದ್ರಣ–2003.

7. ಹೆರಂಜೆಕೃಷ್ಣಭಟ್ಟ (ಸಂ.) – ಗೋವಿಂದಪೈ ಸಂಶೋಧನ ಸಂಪುಟ
ಮುರುಳಿಧರುಪಾಧ್ಯಹಿರಿಯಡಕ – ರಾಷ್ಟ್ರಕವಿ ಗೊವಿಂದಪೈ ಸಂಶೋಧನ
ಕೇಂದ್ರ ಮಹಾತ್ಮ ಗಾಂಧಿ
ಮೆಮೋರಿಯಲ್ ಕಾಲೇಜು.ಉಡುಪಿ
ಪ್ರಥಮಮುದ್ರಣ.1995

8. ಡಾ.ಎಂ.ಎಂ. ಕಲ್ಬುರ್ಗಿ. – ಮಾರ್ಗ –2
ನರೇಶ ಅಂಡ್ ಕಂಪನಿ
4ನೇಯ ಅಡ್ಡರಸ್ತೆ, ಹನುಮಂತನಗರ
ಬೆಂಗಳೂರು. ಮೊದಲಮುದ್ರಣ, 1988

9. ಡಾ.ಎಂ.ಎಂ.ಕಲ್ಬುರ್ಗಿ. – ಮಾರ್ಗ –4
ಸ್ವಪ್ನ ಬುಕ್ ಹೌಸ್
ಮರುಮುದ್ರಣ 2005

10.ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ – ಸಾಹಿತ್ಯ– ಸಂಸ್ಕೃತಿ
ಅಂಕಿತ ಪುಸ್ತಕ ಪ್ರಕಾಶನ
ಬಸವನಗುಡಿ.ಬೆಂಗಳೂರು.

11.ಪ್ರೊ. ಮಲ್ಲೇಪುರಂ ಜಿ ವೆಂಕಟೇಶ್ –ಶಂಭಾ ಕೃತಿ ಸಂಪುಟ 2
ಕರ್ಣಾಟಕ–ಸಂಸ್ಕೃತಿ
ಕನ್ನಡ ಪುಸ್ತಕ ಪ್ರಾಧಿಕಾರ.ಬೆಂಗಳೂರು
ಪ್ರಥಮಮುದ್ರಣ. 1999

12.ಡಾ.ಸಂಗಮೇಶ ಸವದತ್ತಿಮಠ –ಕನ್ನಡ ಸಾಹಿತ್ಯ ಸಂಶೋಧನೆ
ಮಾರ್ಗ ಮತ್ತು ಇತಿಹಾಸ
ರೂಪ ರಶ್ಮಿ ಪ್ರಕಾಶನ.ಧಾರವಾಡ.2006

13, ಪ್ರೊ. ಸುಬ್ರಹ್ಮಣ್ಯ ಜಿ. – ಸಾಮಾಜಿಕ ಸಂಶೋಧನೆಯ
ಪದ್ಧತಿಗಳು ಮತ್ತು ತಂತ್ರಗಳು
ಸಪ್ನ ಬುಕ್ ಹೌಸ್.3ನೇ ಮುಖ್ಯರಸ್ತೆ
ಗಾಂಧಿನಗರ. ಬೆಂಗಳೂರು
ಪ್ರಥಮ ಮುದ್ರಣ. 2007

14. ಶ್ರೀನಿವಾಸ ಹಾವನೂರು – ಹೊಸಗನ್ನಡ ಅರುಣೋದಯ
ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ.ಬೆಂಗಳೂರು
ಪ್ರಥಮಮುದ್ರಣ. 2000

15. ಶಿವಣ್ಣ.ಎಸ್ – ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ
ಸಂಪುಟ–1
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು.

16. ಪ್ರೊಎಂ.ವಿ. ಸೀತಾರಾಮಯ್ಯ (ಸಂ) –ಹಸ್ತಪ್ರತಿಶಾಸ್ತ್ರ
ಡಾ.ಎಂ. ಚಿದಾನಂದಮೂರ್ತಿ. ಬಿ,ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು,ಪ್ರಕಟಣೆ.1983

17. ಪ್ರೊ.ಎನ್.ಎಸ್.ತಾರಾನಾಥ.(ಸಂ) ಶತಮಾನದ ಸಂಶೋಧನೆ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ.
ಜೆ.ಸಿ.ರಸ್ತೆ.ಬೆಂಗಳೂರು

18. ಡಾ.ಟಿ.ವಿ.ವೆಂಕಟಚಾಲಶಾಸ್ತ್ರಿ – ಗ್ರಂಥ ಸಂಪಾದನ ಪಾರಿಭಾಷಕೋಶ
ಬಿ,ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು,ಪ್ರಕಟಣೆ.2004

19. ಪ್ರೊ.ಜಿ.ವೆಂಕಟಸುಬ್ಬಯ್ಯ. – ಕನ್ನಡ ನಿಘಂಟು ಪರಿಹಾರ
ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ.ಬೆಂಗಳೂರು
ಪ್ರಥಮ ಮುದ್ರಣ. 2002